
ಕರ್ನಾಟಕ ಲಲಿತಕಲಾ ಅಕಾಡೆಮಿ


# ಕೆ. ಕೇಶವಯ್ಯ

# K. Keshavayya



ಎಸ್. ವೆಂಕಟೇಶ್

S. Venkatesh



# ಕೆ. ಕೇಶವಯ್ಯ

# K. Keshavayya


ಪೀಟರ್ ಲೂಯಿಸ್

ಪ್ರಧಾನ ಸಂಪಾದಕರು

ಎಸ್. ವೆಂಕಟೇಶ್

ಲೇಖಕರು



ಕರ್ನಾಟಕ ಲಲಿತಕಲಾ

ಕರ್ನಾಟಕ ಲಲಿತಕಲಾ ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - ೫೬೦೦೦೨

**K. Keshavayya** - A monograph by S. Venkatesh, Lecturer, # 3939, Gangadharapura, Doddaballapura - 561203, Bangalore District and Published by Shri B.T. Munirajaiah, Registrar, Karnataka Lalithakala Academy, Kannada Bhavana, J.C. Road, Bangalore - 560 002. Tel: 080-22480297

© Author

First Edition: 2004

Condensed, partly edited and translated by K.S. Srinivasa Murthy

Pages: 48+8

Price: **Rs. 40.00**

**ಪೀಟರ್ ಲೂಯಿಸ್**
ಅಧ್ಯಕ್ಷರು / ಪ್ರಧಾನ ಸಂಪಾದಕರು

**ಡಾ|| ಅ.ಲ. ನರಸಿಂಹನ್**
ಮಾಲಿಕೆಯ ಸಂಪಾದಕರು

ಶ್ರೀ ಬಿ.ಟಿ. ಮುನಿರಾಜಯ್ಯ
ಪ್ರಕಾಶಕರು / ರಿಜಿಸ್ಟ್ರಾರ್

**ಸಂಪಾದಕ ಮಂಡಳಿ**
ಶ್ರೀ ದಿಲೀಪ ಕುಮಾರ ಕಾಳೆ
ಶ್ರೀ ಬಿ.ಎನ್. ದೇಸಾಯಿ
ಶ್ರೀ ಪಿ.ಎಸ್. ಕಡೇಮನಿ
ಡಾ. ಪೂರ್ಣಿಮಾ ಪಾಟೀಲ್
ಶ್ರೀ ಸುರೇಶ ಹಾಲಭಾವಿ

ಶ್ರೀ **ಪ.ಸ. ಕುಮಾರ್**
ಪ್ರಕಟಣೆಯ ಸಮನ್ವಯಕಾರರು

ಮುಖಚಿತ್ರ: ಕೆ. ಕೇಶವಯ್ಯನವರ 'ನಿರೀಕ್ಷೆ' ಕಲಾಕೃತಿ
ಮುಖಚಿತ್ರ ವಿನ್ಯಾಸ: ಶ್ರೀ ಸುಧಾಕರ ದರ್ಬೆ

ಮುದ್ರಕರು: ಪರಿಶ್ರೀ ಪ್ರಿಂಟರ್ಸ್
100/3, ನಾಗಪ್ಪ ಸ್ಟ್ರೀಟ್, ಪ್ಯಾಲೇಸ್ ಗುಟ್ಟಹಳ್ಳಿ,
ಬೆಂಗಳೂರು - 560 003
ದೂರವಾಣಿ: 080-23368286



## ಅಧ್ಯಕ್ಷರ ಮಾತು

ಲಲಿತಕಲಾ ಅಕಾಡೆಮಿಯ ಅಧ್ಯಕ್ಷನಾಗಿ ಮೂರು ವರ್ಷಗಳಾಗುತ್ತಿದೆ. ಈ ಅವಧಿಯಲ್ಲಿ ನಾನು ಮತ್ತು ಸದಸ್ಯರ ತಂಡ ರೂಪಿಸಿ, ನಿರ್ವಹಿಸಿದ ಕಾರ್ಯಕ್ರಮಗಳನ್ನು ನಿಮ್ಮ ಮುಂದಿಡುವುದು ನನ್ನ ಜವಾಬ್ದಾರಿ ಹಾಗೂ ಸಂತೋಷದ ವಿಷಯ. ನಾವು ಮೂರು ವರ್ಷಗಳ ಕಾರ್ಯಕ್ರಮಗಳನ್ನು ರೂಪಿಸುವಾಗ ಯುವ ಪೀಳಿಗೆಗೆ ಸಿಂಹಪಾಲು ನೀಡಿದ್ದೇವೆ, ಹೊಸತನವನ್ನೂ ಕಾಪಾಡಿಕೊಂಡಿದ್ದೇವೆ.

'ಯಂಗ್ ಸ್ಟ್ರೋಕ್ಸ್', 'ನಿಮ್ಮೊಂದಿಗೆ ನಾವು', 'ಮನೆಗೊಂದು ಕಲಾಕೃತಿ', 'ಜನಪದ ಕೃತಿ-ಆಧುನಿಕ ಕೃತಿ', ಯುವಕಲಾವಿದರಿಗೆ ಫೆಲೋಶಿಪ್ ಮುಂತಾದ ನವೀನ ಹಾಗೂ ಉಪಯುಕ್ತ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. ಕರ್ನಾಟಕವನ್ನು ನಾಲ್ಕು ವಿಭಾಗಗಳಾಗಿ ಮಾಡಿ, ಪ್ರತಿ ಕಾರ್ಯಕ್ರಮದಲ್ಲಿ ನಾಲ್ಕೂ ವಿಭಾಗದ ಕಲಾವಿದರಿಗೆ ಸಮಪಾಲು ದೊರಕುವಂತೆ ಮಾಡಿದ್ದು ಕಲಾವಿದರಿಗೆ ಸಂತಸ ತಂದಿದೆ.

ಈ ಎಲ್ಲಾ ಕಾರ್ಯಕ್ರಮಗಳು ಯುವಶಕ್ತಿಯ ಪಾಲಾದರೆ, ಚಿತ್ರದುರ್ಗದ ಸಾಣೆಹಳ್ಳಿಯಲ್ಲಿ ಹಿರಿಯ ಕಲಾವಿದರ ಶಿಬಿರ, ಬೆಂಗಳೂರಿನಲ್ಲಿ ಕಲಾವಿದೆಯರ ಶಿಬಿರ, ಬೆಂಗಳೂರು ಹಾಗೂ ಗುಲ್ಬರ್ಗಾದಲ್ಲಿ ಗ್ರಾಫಿಕ್ ಶಿಬಿರವನ್ನು ನಡೆಸಿದ್ದೇವೆ. ಶ್ರೀ ಜಿ. ಎಸ್. ದಂಡಾವತಿಮಠ ಹಾಗೂ ಡಾ|| ಎಂ.ವಿ. ಮಿಣಜಿಗಿಯವರ ಶತಮಾನೋತ್ಸವ ಕಾರ್ಯಕ್ರಮಕ್ಕೂ ಪರೋಕ್ಷವಾಗಿ ನಾವು ಕಾರಣಕರ್ತರಾಗಿದ್ದೇವೆ.

ಇದರೊಂದಿಗೆ ವಾರ್ಷಿಕ ಕಲಾಪ್ರದರ್ಶನ, ವಾರ್ಷಿಕ ಪ್ರಶಸ್ತಿ ಸಮಾರಂಭ, ಜಿಲ್ಲಾವಾರು ಕಲಾಶಿಬಿರ, ಏಕವ್ಯಕ್ತಿ ಹಾಗೂ ಸಮೂಹ ಕಲಾಪ್ರದರ್ಶನಗಳಿಗೆ ಧನಸಹಾಯ ಮುಂತಾದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದೇವೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯಕ್ರಮ, ಐಫಾಕ್ಸ್ ಕಲಾಪ್ರದರ್ಶನಗಳಿಗೆ ಸಹಯೋಗ ನೀಡಿದ್ದೇವೆ.

ಹಿರಿಯ ಕಲಾವಿದರಿಗೆ ನೀಡುವ ವಾರ್ಷಿಕ ಪ್ರಶಸ್ತಿಯ ಜೊತೆಗೆ ಕಲಾಕ್ಷೇತ್ರದ ಅಭಿವೃದ್ಧಿಗೆ ನಿಸ್ವಾರ್ಥ ಸೇವೆ ಸಲ್ಲಿಸಿದ ಚೇತನಗಳಿಗೆ ವಾರ್ಷಿಕ ಪುರಸ್ಕಾರವನ್ನು ನೀಡಿ ಗೌರವಿಸುವುದನ್ನು ಪ್ರಾರಂಭಿಸಿದ್ದೇವೆ. ಈ ವರ್ಷ ವಾರ್ಷಿಕ ಕಲಾ ಪ್ರದರ್ಶನದಲ್ಲಿ ನೀಡಿದ ಬಹುಮಾನಗಳನ್ನು ಹಿರಿಯ ಕಲಾವಿದರ ಹೆಸರಿನಲ್ಲಿ ನೀಡುವುದರೊಂದಿಗೆ ಅವರನ್ನು ಸ್ಮರಿಸಿದ್ದೇವೆ.

ಇಷ್ಟೆಲ್ಲಾ ಆದರೂ ಮನಸ್ಸಿನಲ್ಲಿ ಕೊರತೆ ಕಾಡುತ್ತಿದೆ. ರಾಷ್ಟ್ರಮಟ್ಟದ ಕಲಾಶಿಬಿರ, ರಾಷ್ಟ್ರಮಟ್ಟದ ವಿಚಾರಗೋಷ್ಠಿ, ಕಲಾಕೃತಿಗಳ ಮಾರಾಟ ಕೇಂದ್ರ, ಹಾಸನದಲ್ಲಿ ರಾಷ್ಟ್ರೀಯ ಕಲಾಗ್ರಾಮ, ವಿಭಿನ್ನ ಶೈಲಿಯ ಭಾವಚಿತ್ರದ ಶಿಬಿರವನ್ನು ಈ ಅವಧಿಯಲ್ಲಿ ನಡೆಸಲಾಗದಿದ್ದುದಕ್ಕೆ ನಮ್ಮ ಮನಸ್ಸುಗಳಲ್ಲಿ ಇನ್ನೂ ಅತೃಪ್ತಿ ಕಾಡುತ್ತಿದೆ.

ಕರ್ನಾಟಕ ಲಲಿತಕಲಾ ಅಕಾದೆಮಿಯ ಹತ್ತು ಹಲವು ಕಾರ್ಯಕ್ರಮಗಳಲ್ಲಿ ಪುಸ್ತಕ ಪ್ರಕಟಣಾ ಯೋಜನೆಯೂ ಒಂದು. ಅದರ ಅಂಗವಾಗಿ ಪ್ರತಿ ಮೂರು ತಿಂಗಳಿಗೊಮ್ಮೆ **'ಕಲಾವಾರ್ತೆ'** ಎಂಬ ಸಂಚಿಕೆಯನ್ನು ಅಕಾದೆಮಿ ನಿಯಮಿತವಾಗಿ ಪ್ರಕಟಿಸುತ್ತ ಬಂದಿದೆ. ಮುದ್ರಣ ಹಾಗೂ ವಿನ್ಯಾಸಗಳಲ್ಲಿ ಕಲಾತ್ಮಕತೆಗೆ ಒತ್ತುಕೊಟ್ಟು, ಕಲಾವಾರ್ತೆಯನ್ನು ವಾರ್ತಾ ಸಂಚಿಕೆಯಾಗಿಸದೆ ಸಂಗ್ರಹಯೋಗ್ಯ ಸಂಚಿಕೆಯನ್ನಾಗಿಸಿದ್ದೇವೆ. **ಕಲಾವಿದರ ಮಾಲಿಕೆಯಲ್ಲಿ** ಒಂಬತ್ತು ಜನ ಹಿರಿಯ ಕಲಾವಿದರಾದ ಕೆ. ಕೇಶವಯ್ಯ, ಎಸ್. ಕಾಳಪ್ಪ, ಎಚ್.ಎಸ್. ಇನಾಮತಿ, ರಘೋತ್ತಮ ಪುಟ್ಟಿ, ವ್ಹಿ.ಟಿ. ಕಾಳೆ, ಪುರುಷೋತ್ತಮ ಕಾರಂತ, ಎಂ.ಆರ್. ಬಾಳೀಕಾಯಿ, ವ್ಹಿ.ಜಿ. ಅಂದಾನಿ ಹಾಗೂ ಸಿ. ಚಂದ್ರಶೇಖರ್ ಅವರುಗಳ ಜೀವನ ಸಾಧನೆಗಳ ಪುಸ್ತಕಗಳು ಸಿದ್ಧಗೊಂಡಿವೆ. ಇವರಲ್ಲಿ ಮೂವರು ಕಲಾವಿದರು ಇಂದು ಇಲ್ಲವಾಗಿದ್ದಾರೆ. ಅವರ ಬಗ್ಗೆ ಮಾಹಿತಿ ಸಂಗ್ರಹಿಸುವುದು ಅತ್ಯಂತ ದುಸ್ತರ ಕಾರ್ಯವಾಗಿದ್ದು, ಆಯಾ ಲೇಖಕರು ಈ ಕಾರ್ಯವನ್ನು ಸಾಹಸವೆಂಬಂತೆ ತೆಗೆದುಕೊಂಡು ಬರೆದಿದ್ದಾರೆ. ಉಳಿದ ಲೇಖಕರು ತಮ್ಮ ಲೇಖನದ ಕಲಾವಿದರನ್ನು ಅನೇಕ ಬಾರಿ ಸಂಪರ್ಕಿಸಿ, ಸಂದರ್ಶಿಸಿ ಅಭ್ಯಾಸ ಪೂರ್ಣವಾಗಿ ಬರೆದಿದ್ದಾರೆ. ಈ ಎಲ್ಲ ಬರಹಗಾರರಿಗೆ ಮತ್ತು ಅದನ್ನು ಸಂಪಾದಿಸಿಕೊಟ್ಟ ಡಾ|| ಅ.ಲ. ನರಸಿಂಹನ್ ಅವರಿಗೆ ಅಕಾದೆಮಿ ಪರವಾಗಿ ಧನ್ಯವಾದಗಳು. ಕರ್ನಾಟಕದ ಎಲ್ಲ ಜಿಲ್ಲೆಗಳ ಸಮಗ್ರ ಚಿತ್ರಕಲೆಯ ಸ್ಥೂಲನೋಟವನ್ನು ಒಂದೆಡೆಗೆ ತರುವ ಉದ್ದೇಶದಿಂದ **ಕರ್ನಾಟಕ ಚಿತ್ರಕಲಾ ದರ್ಶನ** ಎಂಬ ಬೃಹತ್ ಸಂಪುಟವನ್ನು ತರುತ್ತಿದ್ದು, ಅದಕ್ಕೆ ಹೆಚ್ಚಿನ ಅನುದಾನಕ್ಕಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. **ಜನಪ್ರಿಯ ಕಲಾಮಾಲೆಯ** ಅಡಿಯಲ್ಲಿ ಕರ್ನಾಟಕದ ದೇಶಿ ಚಿತ್ರಕಲೆಯನ್ನು ಪ್ರಾದೇಶಿಕ ವೈಶಿಷ್ಟ್ಯತೆಯ ಹಿನ್ನಲೆಯಲ್ಲಿ ಪರಿಚಯಿಸುವ ಹತ್ತು ಪುಸ್ತಕಗಳನ್ನು ತಜ್ಞ ವಿದ್ವಾಂಸರಿಂದ ಬರೆಯಿಸಿ ಇದೀಗ ಪ್ರಕಟಿಸುತ್ತಿದ್ದೇವೆ. ಅವುಗಳನ್ನು ಸುಂದರವಾಗಿ ಸಂಪಾದಿಸಿ ಕೊಟ್ಟ ಅಕಾದೆಮಿಯ ಸದಸ್ಯರಾದ ಸಂಶೋಧಕ ಡಾ|| ಎಸ್.ಸಿ. ಪಾಟೀಲರು. ಅವರಿಗೆ ಅಕಾದೆಮಿಯ ಪರವಾಗಿ ವಂದನೆಗಳು. ಅಕಾದೆಮಿಯ ಇನ್ನೊಂದು ಗ್ರಂಥ ಭಾವಚಿತ್ರ ಪರಂಪರೆಯ **'ಮುಖಗಳೊಂದಿಗೆ ಮುಖಾಮುಖಿ'** ಅಧ್ಯಯನ ಯೋಗ್ಯ ಕೃತಿಯನ್ನು ನಮ್ಮ ಮನವಿಯಂತೆ ಬರೆದುಕೊಟ್ಟಿರುವ ವಿಮರ್ಶಕರಾದ ಶ್ರೀ ಕೆ.ವಿ. ಸುಬ್ರಹ್ಮಣ್ಯಂ ರವರಿಗೆ ಅಕಾದೆಮಿಯ ಪರವಾಗಿ ವಂದನೆಗಳು. ಇದಲ್ಲದೆ ಇಪ್ಪತ್ತು ಹಿರಿಯ-ಕಿರಿಯ ಕಲಾವಿದರ ಕಲಾಕೃತಿಗಳ ಚಿತ್ರಸಂಪುಟವೊಂದು ಅಕಾದೆಮಿ ಸದಸ್ಯ ಶ್ರೀ ಪ.ಸ. ಕುಮಾರ್ ಅವರ ಸಂಪಾದಕತ್ವದಲ್ಲಿ ಬರುತ್ತಿದೆ.

ನಾವು ಮೂರು ವರ್ಷಗಳಲ್ಲಿ ಮಾಡಿದ ಕಾರ್ಯಕ್ರಮಗಳ ಪಟ್ಟಿಯನ್ನು ವಾರ್ಷಿಕ ವರದಿಯಲ್ಲಿ ನೀಡುತ್ತಿದ್ದೇವೆ. ಎಲ್ಲಾ ಕಾರ್ಯಕ್ರಮಗಳಲ್ಲೂ ನಮ್ಮೊಡನೆ ಸಹಕರಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕೇಂದ್ರ ಲಲಿತಕಲಾ ಅಕಾದೆಮಿ, ರೀಜನಲ್ ಸೆಂಟರ್ ಚೆನ್ನೈ, ಐಫಾಕ್ಸ್ ಸಂಸ್ಥೆಗಳಿಗೆ ನಮ್ಮ ವಂದನೆಗಳು.

ನನ್ನೊಡನೆ ಇದುವರೆಗೂ ಸಹಕರಿಸಿ ಉಪಯುಕ್ತ ಸಲಹೆಗಳನ್ನು ನೀಡಿದ ಸದಸ್ಯ ಮಿತ್ರರೆಲ್ಲರಿಗೂ ನನ್ನ ಇಡೀ ತಂಡದ ಪರವಾಗಿ ಹಾಗೂ ವೈಯಕ್ತಿಕವಾಗಿ ಮತ್ತೊಮ್ಮೆ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ. ವಿಶೇಷವಾಗಿ ಸಮನ್ವಯಕಾರರಾಗಿ ಹಲವಾರು ಕಾರ್ಯಕ್ರಮಗಳನ್ನು ಆಗುಮಾಡಿದ ಸದಸ್ಯ ಶ್ರೀ ಪ.ಸ.ಕುಮಾರ್ ಅವರಿಗೆ ನನ್ನ ಕೃತಜ್ಞತೆಗಳು. ಈ ಎಲ್ಲ ಪ್ರಕಟಣೆಗಳೂ ವಿವಿಧ ಮುದ್ರಣಾಲಯಗಳಲ್ಲಿ ರೂಪತಳೆದಿದ್ದು, ಅವುಗಳ ಮಾಲೀಕರಿಗೆ, ಮುಖಚಿತ್ರವನ್ನು ಕಲಾಕೃತಿಯೆಂಬಂತೆಯೇ ರಚಿಸಿಕೊಟ್ಟ ಶ್ರೀ ಸುಧಾಕರ ದರ್ಬೆ ಅವರಿಗೆ, ಅಕಾದೆಮಿ ರಿಜಿಸ್ಟ್ರಾರ್ ಶ್ರೀ ಬಿ.ಟಿ. ಮುನಿರಾಜಯ್ಯ ಮತ್ತು ಸಿಬ್ಬಂದಿ ವರ್ಗದ ರಾಜು, ವೆಂಕಟೇಶ್, ಗಂಗಾಧರ, ಮುತ್ತು, ಬಾಲು, ಲೋಕೇಶ ಮತ್ತು ಅರವಿಂದ ಅವರುಗಳಿಗೆ ಹಾಗೂ ಪ್ರತ್ಯಕ್ಷ, ಪರೋಕ್ಷವಾಗಿ ಬೆಂಬಲ ನೀಡಿದ ಮಹನೀಯರಿಗೆಲ್ಲಾ ನಮ್ಮ ಧನ್ಯವಾದಗಳು.

ನಮ್ಮ ಈ ಕಿರು ಪ್ರಯತ್ನಗಳನ್ನು ಕಲಾವಿದರು, ಸಹೃದಯ ಕಲಾಸಕ್ತರು ತುಂಬು ಹೃದಯದಿಂದ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

**ಪೀಟರ್ ಲೂಯಿಸ್**

## ಲೇಖಕರ ಮಾತು

ನಾನು ಈ ಮೊದಲು ಕೇಶವಯ್ಯನವರ ಹೆಸರನ್ನು ಕೇಳಿದ್ದೆನಾದರೂ ಇಷ್ಟೊಂದು ಹಿನ್ನೆಲೆ, ಪ್ರಸಿದ್ಧಿಯಿರುವ ಪ್ರತಿಭಾವಂತರೆಂದು ತಿಳಿದಿರಲಿಲ್ಲ. ಆದರೆ ಇವರ ಕುರಿತು ಮಾಹಿತಿ ಸಂಗ್ರಹಿಸಲು ಹೋದಾಗ ಇವರ ಸಮಕಾಲೀನ ಕಲಾವಿದರು ಮತ್ತು ಶಿಷ್ಯರನ್ನು ಕುರಿತ ಪುಸ್ತಕಗಳು, ಲೇಖನಗಳು ದೊರೆತವೇ ಹೊರತು ಕೇಶವಯ್ಯನವರನ್ನು ಕುರಿತ ಒಂದು ಚಿಕ್ಕಲೇಖನವೂ ದೊರೆಯಲಿಲ್ಲ. ಸಮಕಾಲೀನದಲ್ಲಿ ಸಾಕಷ್ಟು ಕ್ರಿಯಾಶೀಲರಾಗಿದ್ದು, ಮುಂಚೂಣಿಯಲ್ಲಿದ್ದ ಕೇಶವಯ್ಯ ಕಾಲಾನಂತರದಲ್ಲಿ ಅಜ್ಞಾತರಾಗಿದ್ದು ಆಶ್ಚರ್ಯವೆನಿಸುತ್ತದೆ.

ಇಲ್ಲಿ ನನಗಿದ್ದ ಕಾಲಮಿತಿಯಲ್ಲಿ ಅರಮನೆ ದಾಖಲೆಗಳಿಂದ, ಕೇಶವಯ್ಯನವರ ಮೊಮ್ಮಕ್ಕಳು ಮತ್ತು ಶಿಷ್ಯಂದಿರಿಂದ ದೊರೆತ ಮಾಹಿತಿಯನ್ನು ನನ್ನದೇ ಆದ ರೀತಿಯಲ್ಲಿ ಸಂಗ್ರಹಿಸಿ, ಸಂಕ್ಷೇಪಿಸಿ ನಿರೂಪಣೆ ಮಾಡಿರುವೆನು. ಕೇಶವಯ್ಯನವರ ಕಲೆಗೆ ಹಿನ್ನೆಲೆಯಾಗಿ ಅವರ ಪೂರ್ವಜರ ಪರಿಚಯದೊಂದಿಗೆ ಸಮಕಾಲೀನ ಶಿಕ್ಷಣ, ಬದುಕು, ಸಾಮಾಜಿಕ ಸ್ಥಿತಿಗತಿಗಳನ್ನು ಕುರಿತು ಸಂಕ್ಷಿಪ್ತವಾಗಿ ತಿಳಿಸಿದ್ದೇನೆ. ಈ ವಿವರಗಳು ಅವರ ಕಲಾಸೃಷ್ಟಿಯ ಹಿಂದೆ ಕೆಲಸ ಮಾಡಿರಬಹುದಾದ ಪ್ರೇರಣೆಗಳ ಮೂಲಕ್ಕೆ ಮಹತ್ವದ ಸೂಚಿಗಳಾಗಬಲ್ಲವೆಂದು ಆಶಿಸಿದ್ದೇನೆ. ಅಂತೆಯೇ ನಮ್ಮ ಕಲಾಚರಿತ್ರೆಯನ್ನು ನಾವು ಕಲ್ಪಿಸಿಕೊಳ್ಳಲು, ರೂಪಿಸಿಕೊಳ್ಳಲು ಈ ವಿವರಗಳು ತೀರಾ ಅನಿವಾರ್ಯವೆಂಬುದು ಇದರ ಇನ್ನೊಂದು ಮುಖ.



ಈ ಪುಸ್ತಕ ರಚನೆಗೆ ಅನೇಕರು ಅನೇಕ ವಿಧದಲ್ಲಿ ನೆರವಾಗಿದ್ದಾರೆ. ಮುಖ್ಯವಾಗಿ ಅಕಾಡೆಮಿಯವರು ಈ ಪುಸ್ತಕ ಬರೆಯಲು ಮೊದಲು ಶ್ರೀ ಎ.ಎಲ್. ನರಸಿಂಹನ್ ಅವರಿಗೆ ತಿಳಿಸಿದ್ದರು. ಕಾರಣಾಂತರಗಳಿಂದ ಅವರು ಬರೆಯದೆ ಅಕಾಡೆಮಿಗೆ ನನ್ನ ಹೆಸರನ್ನು ಸೂಚಿಸಿದರು. ಹೀಗಾಗಿ ಈ ಪುಸ್ತಕ ನಾನು ಬರೆಯುವಂತಾಯಿತು. ಅವರಿಗೆ ನನ್ನ ಧನ್ಯವಾದಗಳು. ನಾನು ಮಾಹಿತಿ ಸಂಗ್ರಹಿಸಲು ಮೈಸೂರಿಗೆ ಹೋದಾಗ ಮೂರ್ನಾಲ್ಕು ದಿನಗಳ ಕಾಲ ನನ್ನನ್ನು ತಮ್ಮ ಮನೆಯಲ್ಲೇ ಉಳಿಸಿಕೊಂಡು ಆಶ್ರಯ ನೀಡಿದ, ಅರಮನೆಯಲ್ಲಿನ ಕೇಶವಯ್ಯನವರ ಕಲಾಕೃತಿಗಳ ಛಾಯಾಚಿತ್ರವನ್ನು ತೆಗೆದುಕೊಳ್ಳಲು ಅಲ್ಲಿನ ಅಧಿಕಾರಿಗಳಿಂದ ಅನುಮತಿ ದೊರಕಿಸಿಕೊಟ್ಟ ಗೆಳೆಯ ಮತ್ತು ಮೈಸೂರು ಅರಮನೆ ಮಂಡಳಿಯ ಸದಸ್ಯ ದಿಲೀಪ್‌ಕುಮಾರ್ ಕಾಳೆ ಅವರಿಗೆ, ಕೆಲವೊಂದು ಛಾಯಾಚಿತ್ರಗಳನ್ನು ತೆಗೆದುಕೊಟ್ಟ ಅವರ ಶಿಷ್ಯ ಪುಟ್ಟಸ್ವಾಮಿಯವರಿಗೆ, ಶ್ರೀ ಕಲಾನಿಕೇತನ ಕಲಾಶಾಲೆಯ ಉಪನ್ಯಾಸಕ ಪರಮೇಶ್ವರ್ ಅವರಿಗೆ, ನನ್ನೊಂದಿಗೆ ಮೈಸೂರಿಗೆ ಆಗಮಿಸಿ ಸಹಕರಿಸಿದ ಗೆಳೆಯ ದಿನೇಶ್ ಅವರಿಗೆ ನನ್ನ ಕೃತಜ್ಞತಾಪೂರ್ವಕ ವಂದನೆಗಳು.


ತಮ್ಮ ಬಿಡುವಿಲ್ಲದ ಕಾರ್ಯಗಳ ನಡುವೆಯೂ ನನ್ನ ಉಪಟಳವನ್ನು ಸಹಿಸಿಕೊಂಡು ರೆಸಿಡೆನ್ಷಿಯಲ್ ಮ್ಯೂಸಿಯಂ ಮತ್ತು ಜಗನ್ಮೋಹನ ಚಿತ್ರಶಾಲೆಯಲ್ಲಿನ ಕೇಶವಯ್ಯನವರ ಕಲಾಕೃತಿಗಳ ಛಾಯಾಚಿತ್ರ ತೆಗೆದುಕೊಳ್ಳಲು ಮತ್ತು ಮಾಹಿತಿ ನೀಡಲು ಕೃಪೆಯಿಟ್ಟು ಸಹಕರಿಸಿದ ಯುವರಾಜರಾದ ಶ್ರೀಕಂಠದತ್ತ ಒಡೆಯರ್ ಅವರಿಗೆ, ಅವರ ಅಂಗರಕ್ಷಕ ದಳದ ಮತ್ತು ರೆಸಿಡೆನ್ಷಿಯಲ್ ಮ್ಯೂಸಿಯಂನ ಅಧಿಕಾರಿ ಸತೀಶ್ ಅವರಿಗೆ, ಮೈಸೂರು ಅರಮನೆ ಮಂಡಳಿಯ ಉಪನಿರ್ದೇಶಕರಾದ ಪಿ.ವ್ಹಿ. ಅವರಾದಿ ಅವರಿಗೆ, ಅರಮನೆಯ ಮಾರ್ಗದರ್ಶಿ ಮಾದನಾಯಕ್ ಅವರಿಗೆ, ಜಗನ್ಮೋಹನ ಅರಮನೆಯ ಕಾರ್ಯದರ್ಶಿ, ಅಧಿಕಾರಿಗಳು ಮತ್ತು ಸಿಬ್ಬಂದಿಗೆ ನನ್ನ ಅನಂತ ವಂದನೆಗಳು. ಅದೇ ರೀತಿ ಕೇಶವಯ್ಯನವರನ್ನು ಕುರಿತು ತಮಗೆ ತಿಳಿದ ವಿಷಯಗಳನ್ನು ನನಗೆ ತಿಳಿಸಿದ ಮೈಸೂರಿನ ಕಲಾವಿದರಾದ ಕುಪ್ಪಾಚಾರಿ, ರಾಮನರಸಯ್ಯ, ರಾಮದಾಸ್ ಅಧ್ಯಂತಾಯ ಅವರಿಗೆ ಹಾಗೂ ಅರಮನೆಯ ಆವರಣದಲ್ಲೇ ಇರುವ ಪತ್ರಾಗಾರ ಇಲಾಖೆಯಲ್ಲಿನ, ಕೇಶವಯ್ಯನವರಿಗೆ ಸಂಬಂಧಿಸಿದ ಮೂಲ ಕಾಗದ ಪತ್ರಗಳನ್ನು ತಾಳ್ಮೆಯಿಂದ ಹುಡುಕಿ ತೆಗೆದುಕೊಟ್ಟ ಡಾ// ಜೆ.ವಿ. ಗಾಯಿತ್ರಿ ಮತ್ತು ಪತ್ರಪಾಲಕ, ಹಿರಿಯ ಗೆಳೆಯರಾದ ಗವಿಸಿದ್ಧಯ್ಯ ಅವರಿಗೂ ನನ್ನ ನಮನಗಳು.

ಬೆಂಗಳೂರಿನಲ್ಲಿರುವ ಕೇಶವಯ್ಯನವರ ಮೊಮ್ಮಕ್ಕಳಾದ ಶ್ರೀ ವೇಣುಗೋಪಾಲ ರಾಜು, ಗೋಪಾಲಕೃಷ್ಣ ರಾಜು, ಕೃಷ್ಣಸ್ವಾಮಿ, ರತ್ನಾರಾಜು, ಸರೋಜಾರಾಜು, ಡಾ// ಕೆ.ಎನ್. ರಾಜು, ಶ್ರೀಮತಿ ರುಕ್ಮಿಣಿರಾವ್ ಮತ್ತು ಅವರ ಕುಟುಂಬದವರು ನಾನು ಮಾಹಿತಿ ಸಂಗ್ರಹಿಸಲು ಹೋದಾಗಲೆಲ್ಲಾ ಆದರದಿಂದ ಕಂಡು ತಮ್ಮ ಬಳಿಯಿದ್ದ ಕೇಶವಯ್ಯನವರ ಕಲಾಕೃತಿಗಳು ಮತ್ತು ಮೂಲ ಕಾಗದ ಪತ್ರಗಳನ್ನು ನೋಡಲು ಅವಕಾಶ ನೀಡಿ ಉಪಕರಿಸಿದ್ದಾರೆ. ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷತ್‌ನ ಸಂಗ್ರಹದಲ್ಲಿ ಕೇಶವಯ್ಯನವರ ತಾತ ತಿಪ್ಪಣ್ಣ ರಚಿಸಿದ ಮೈಸೂರು ಅರಸರ 'ವಂಶವೃಕ್ಷ' ಕಲಾಕೃತಿ ಮತ್ತು ಕೇಶವಯ್ಯನವರು ರಚಿಸಿದ ಇದ್ದಿಲು ಮಾಧ್ಯಮದ ಒಂದು ಭಾವಚಿತ್ರವಿದೆ. ಇದರ ಛಾಯಾಚಿತ್ರವನ್ನು ಹಿರಿಯರಾದ ಶ್ರೀ ಕಮಲೇಶ್ ಮತ್ತು ಗೆಳೆಯ ಎಂ. ಮುನಿಮೋಹನ್ ಅವರು ನೀಡಿ ಸಹಕರಿಸಿದ್ದಾರೆ.

ನನ್ನ ಮೇಲೆ ವಿಶ್ವಾಸವಿಟ್ಟು ಕೇಶವಯ್ಯನವರ ಕುರಿತು ಬರೆಯಲು ಅವಕಾಶ ನೀಡಿದ ಅಕಾದೆಮಿ ಅಧ್ಯಕ್ಷರಾದ ಶ್ರೀ ಪೀಟರ್ ಲೂಯಿಸ್, ರಿಜಿಸ್ಟ್ರಾರ್ ಬಿ.ಟಿ. ಮುನಿರಾಜಯ್ಯ ಮತ್ತು ಸದಸ್ಯರು ಹಾಗೂ ಸಿಬ್ಬಂದಿಗೆ, ಮುಖಪುಟದ ವಿನ್ಯಾಸವನ್ನು ಅಂದವಾಗಿ ರಚಿಸಿಕೊಟ್ಟ ಗೆಳೆಯ ಸುಧಾಕರ ದರ್ಬೆಯವರಿಗೆ ನಾನು ಆಭಾರಿ. ಈ ಕಿರುಹೊತ್ತಿಗೆಯನ್ನು ಈ ರೂಪದಲ್ಲಿ ತಮಗರ್ಪಿಸುವವರೆಗೆ ಅದರ ಸಿದ್ಧತೆಯಲ್ಲಿ ಸಹಕರಿಸಿದ, ಪ್ರೇರಣೆ ನೀಡಿ ಪ್ರೋತ್ಸಾಹಿಸಿದ ನನ್ನ ಹಿತೈಷಿಗಳಾದ ಕೆ.ಎಸ್. ಶ್ರೀನಿವಾಸಮೂರ್ತಿ, ಶ್ರೀಮತಿ ವಿದ್ಯಾಮೂರ್ತಿ, ಗೆಳೆಯರಾದ ರಮೇಶಚಂದ್ರ, ಮೊಹಮ್ಮದ್ ರಿಜ್ವಾನ್, ಅಮರೇಶ ಯು. ಬಿಜ್ಜಳ, ಸತೀಶ್ ಸೋಲಾಪುರ್, ವಿಶ್ವನಾಥ್, ಗುರುಗಳಾದ ಪ್ರೊ// ಬಿ.ಟಿ. ಮಹದೇವ, ಸಲಹೆ ನೀಡಿದ ಸಂತೋಷ್‌ಕುಮಾರ್ ಗುಲ್ವಾಡಿ, ವಿಶ್ವೇಶ್ವರರಾಜು, ಗೆಳತಿ ಶ್ರೀಮತಿ ರಾಣಿರೇಖಾ ಮುಂತಾದ ಎಲ್ಲರನ್ನೂ ಕೃತಜ್ಞತೆಯಿಂದ ಸ್ಮರಿಸುವೆನು.

ನನ್ನ ಈ ಕನ್ನಡ ಬರಹವನ್ನು ತಿದ್ದಿ, ತೀಡಿ ಅದಕ್ಕೊಂದು ನಿರ್ದಿಷ್ಟ ಸ್ವರೂಪವನ್ನು ತಂದುಕೊಟ್ಟು, ಮತ್ತೆ ಅದನ್ನು ತಮ್ಮದೇ ಆದ ರೀತಿಯಲ್ಲಿ ಸಂಕ್ಷೇಪಿಸಿ, ಆಂಗ್ಲಭಾಷೆಗೆ ಅನುವಾದಿಸಿಕೊಟ್ಟ ಹಿರಿಯ ಗೆಳೆಯರಾದ ಶ್ರೀ ಕೆ.ಎಸ್. ಶ್ರೀನಿವಾಸಮೂರ್ತಿಯವರನ್ನು ಮತ್ತೊಮ್ಮೆ ಕೃತಜ್ಞತೆಯಿಂದ ಸ್ಮರಿಸುತ್ತಾ ಈ ಕಿರುಹೊತ್ತಿಗೆಯ ಬಗ್ಗೆ ಬರಬಹುದಾದ ಸಲಹೆ-ಸೂಚನೆಗಳಿಗಾಗಿ ಪ್ರತೀಕ್ಷಿಸುವೆನು.

ದೊಡ್ಡಬಳ್ಳಾಪುರ ಎಸ್. ವೆಂಕಟೇಶ್



ಕೆ. ಕೇಶವಯ್ಯ / K. Keshavayya

1878 - 1954

## ಎಸ್. ವೆಂಕಟೇಶ್



ಬೆಂಗಳೂರು ಜಿಲ್ಲೆಯ ದೊಡ್ಡಬಳ್ಳಾಪುರದಲ್ಲಿ ೧೯೭೫ರಲ್ಲಿ ಜನಿಸಿದ ಶ್ರೀ ಎಸ್. ವೆಂಕಟೇಶ್ ಅವರು ಬೆಂಗಳೂರು ವಿಶ್ವವಿದ್ಯಾಲಯದಿಂದ ಇತಿಹಾಸ ವಿಭಾಗದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ವಿದ್ಯಾರ್ಥಿ ದಿಸೆಯಲ್ಲಿಯೇ ಕಲಾ ಇತಿಹಾಸದ ಬಗ್ಗೆ ಆಸಕ್ತಿ ಹೊಂದಿದ ಶ್ರೀಯುತರು ಆ ಕುರಿತು ಪುಸ್ತಕಗಳನ್ನು ಓದಿಕೊಂಡಿದ್ದಲ್ಲದೆ, ವ್ಯಾಪಕವಾಗಿ ಸಂಚರಿಸಿ ಭಿತ್ತಿಚಿತ್ರ ಹಾಗೂ ಪ್ರದರ್ಶನಾಲಯಗಳಲ್ಲಿ ಕಲಾಕೃತಿಗಳನ್ನು ವೀಕ್ಷಿಸಿದ್ದಾರೆ.

ಚಿತ್ರಕಲೆಯನ್ನು ಕುರಿತು ಈವರೆಗೆ ನಲವತ್ತಕ್ಕೂ ಹೆಚ್ಚು ಲೇಖನಗಳನ್ನು ಬರೆದಿರುವರು. ಮುಖ್ಯವಾಗಿ ಭಿತ್ತಿಚಿತ್ರಗಳ ಅಧ್ಯಯನ ಮಾಡಿ ಹಂಪೆ, ಆನೆಗೊಂದಿ, ತುಮಕೂರು, ಸೀಬಿ, ಸಿರಾ, ತ್ಯಾಮಗೊಂಡ್ಲು, ಚಾಮರಾಜನಗರ, ಹರದನಹಳ್ಳಿ, ಮುದುಕುತೊರೆ ಮುಂತಾದ ಕಡೆಗಳಲ್ಲಿಯ ಭಿತ್ತಿಚಿತ್ರಗಳ ಬಗ್ಗೆ ಲೇಖನಗಳನ್ನು ರಚಿಸಿ ವಿವಿಧ ಕನ್ನಡ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಇವಲ್ಲದೆ, 'ಭಾರತೀಯ ಕಲೆಯಲ್ಲಿ ಸಂಕೇತಗಳು', 'ಭಿತ್ತಿಚಿತ್ರಗಳಲ್ಲಿ ಐತಿಹಾಸಿಕ ವ್ಯಕ್ತಿಗಳು', 'ಕಲಾವಿದರ ಕಣ್ಣಲ್ಲಿ ಟಿಪ್ಪು', 'ಚಿತ್ರಶಿಲ್ಪ ಕಲೆಯಲ್ಲಿ ಗೋಪೀವಸ್ತ್ರಾಪಹರಣ' ಇತ್ಯಾದಿ ಲೇಖನಗಳು 'ಸುಧಾ', 'ಪ್ರಜಾವಾಣಿ' ಮತ್ತು 'ವಿಜಯ ಕರ್ನಾಟಕ' ವಿಶೇಷಾಂಕಗಳಲ್ಲಿ ಪ್ರಕಟಗೊಂಡು ಜನಪ್ರಿಯವಾಗಿವೆ. ಅಕಾಡೆಮಿಯಿಂದ ಹೊಸರೂಪದಲ್ಲಿ ಹೊರಬರುತ್ತಿರುವ 'ಕಲಾವಾರ್ತೆ'ಯ ವಿನ್ಯಾಸ ಹಾಗೂ ಲೇಖನಗಳಿಗಾಗಿ ಅದರ ಸಂಪಾದಕರಿಗೆ ಸಂಪೂರ್ಣವಾಗಿ ಸಹಕರಿಸುತ್ತಿದ್ದಾರೆ.

ಪ್ರಸ್ತುತ ತುಮಕೂರಿನ ಸೀಬಿ ದೇವಾಲಯದ ಭಿತ್ತಿಚಿತ್ರಗಳ ಬಗ್ಗೆ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ. ಅಧ್ಯಯನ ಮಾಡುತ್ತಿರುವ ಶ್ರೀ ಎಸ್. ವೆಂಕಟೇಶ್ ಅವರು ಅಕಾಡೆಮಿಗಾಗಿ ಅರಮನೆ ಕಲಾವಿದ ಕೆ. ಕೇಶವಯ್ಯನವರನ್ನು ಕುರಿತು ಪುಸ್ತಕ ರಚಿಸಿಕೊಟ್ಟಿದ್ದಾರೆ. ಕೇಶವಯ್ಯ ಅವರು ದಿವಂಗತರಾಗಿಯೇ ಐವತ್ತು ವರ್ಷಗಳು ಆಗಿದ್ದು, ಅವರ ಬಗ್ಗೆ ಏನೊಂದು ಮಾಹಿತಿಯೂ ದೊರೆಯದಿದ್ದಾಗ, ಸಾಕಷ್ಟು ಶ್ರಮವಹಿಸಿ ಬೆಂಗಳೂರು, ಮೈಸೂರುಗಳಲ್ಲಿ ಜಾಲಾಡಿ ಅರಮನೆಯ ಮೂಲ ದಾಖಲೆಗಳಿಂದ, ಕೇಶವಯ್ಯನವರ ವಂಶಸ್ಥರಲ್ಲಿ, ಶಿಷ್ಯಂದಿರಿಂದ ಮಾಹಿತಿ ಸಂಗ್ರಹಿಸಿ ಬರೆದಿದ್ದಾರೆ. ಒಂದು ಕಾಲಘಟ್ಟದ, ಪರಿವರ್ತನೆಯ ಹಂತದಲ್ಲಿಯ, ಅರಮನೆಯ ಸಂಪರ್ಕವಿದ್ದ ಕಲೆ ಕಲಾವಿದರನ್ನು ಕುರಿತ ಸಮಾಜೋ-ಐತಿಹಾಸಿಕ ವಿಶ್ಲೇಷಣೆಯನ್ನು ಹಾಗೂ ಸಮಕಾಲೀನ ಚಿತ್ರಕಲಾ ಸಂದರ್ಭದ ಪರಿಣಾಮವನ್ನು ಈ ಪುಸ್ತಕದಲ್ಲಿ ಕಾಣಬಹುದಾಗಿದೆ.

## ಕೆ. ಕೇಶವಯ್ಯ



ಕೇಶವಯ್ಯ
ಪ್ಲಾಸ್ಟರ್ ಆಫ್ ಪ್ಯಾರೀಸ್
ಸಂಗ್ರಹ: ಕೆ.ಎನ್.ರಾಜು, ಬೆಂಗಳೂರು.

*Keshavayya*
*Plaster of Paris*
*Collection: K.N. Raju, B'lore.*

ಭಾರತೀಯ ಕಲಾಚರಿತ್ರೆಯ ವಸಾಹತುಶಾಹಿ ಘಟ್ಟದಲ್ಲಿ ತಲೆಯೆತ್ತಿದ ಆಧುನಿಕ ಶಿಕ್ಷಣಕ್ರಮ, ಕಲಾರೂಪಗಳು, ಮಾಧ್ಯಮ ಪರಿಕರಗಳು ಮುಂತಾದುವು ಆಧುನಿಕಪೂರ್ವ ಕಲಾಸನ್ನಿವೇಶಕ್ಕಿಂತ ತೀರಾ ಭಿನ್ನವಾದುವು. ಕರ್ನಾಟಕವೂ ಸೇರಿದಂತೆ ಭಾರತದಲ್ಲಿ ಇತಿಹಾಸ ಪ್ರಾರಂಭ ಕಾಲದಿಂದ ಬ್ರಿಟೀಷರು ಇಂಗ್ಲೀಷ್ ಶಿಕ್ಷಣ ಕ್ರಮವನ್ನು ಜಾರಿಗೆ ತರುವವರೆಗೂ ಹಲವಾರು "ಸಾಂಪ್ರದಾಯಿಕ" ಕಲಾಶೈಲಿಗಳು ರೂಢಿಯಲ್ಲಿದ್ದುವು. ಉದಾಹರಣೆಗೆ ಅಜಂತಾ, ವಿಜಯನಗರ, ದಖ್ಖಿನಿ, ಮೊಗಲ್ ಮುಂತಾದುವನ್ನು ಹೆಸರಿಸಬಹುದು. ಈ ಅವಧಿಯಲ್ಲಿ ಒಬ್ಬ ಕಲಾವಿದನ ವಿಶಿಷ್ಟ ಶೈಲಿಯಾಗಲೀ, ವ್ಯಕ್ತಿ ವೈಶಿಷ್ಟ್ಯವಾಗಲೀ ಐತಿಹಾಸಿಕ ದೃಷ್ಟಿಯಿಂದ ತುಂಬ ಗೌಣ. ಅಲ್ಲದೆ ಕಲಾಕೃತಿಯಲ್ಲಿನ ವಸ್ತುವಿಷಯವನ್ನು ನೋಡಿದ ಕೂಡಲೇ ಇದು ಇಂತಹುದೇ ಎಂದು ಸುಲಭವಾಗಿ ಗುರುತಿಸಬಹುದು. ಆದರೆ ಆಧುನಿಕ ಕಲೆಯ ಹಲವಾರು ಪ್ರಕಾರಗಳಲ್ಲಿ[೧] ವೈಚಾರಿಕ ಒಲವು-ನಿಲುವುಗಳು ವಿಶೇಷವಾಗಿವೆ. ಇದರ ವಿವರಗಳು ಇಲ್ಲಿ ಅಪ್ರಸ್ತುತ. ಮುಖ್ಯ ವಿಚಾರವೆಂದರೆ ಬ್ರಿಟೀಷರು ಇಂಗ್ಲೀಷ್ ಶಿಕ್ಷಣವನ್ನು ಜಾರಿಗೆ ತಂದಮೇಲೆ (೧೮೩೫) ಭಾರತೀಯ ಸಾಂಪ್ರದಾಯಿಕ ಶಿಕ್ಷಣಕ್ರಮ ಮತ್ತು ಕಲೆಗಳು ಹಿನ್ನೆಲೆಗೆ ಸರಿದವು. ಶಾಲಾಕಾಲೇಜುಗಳಂತೆ ವಿಕ್ಟೋರಿಯನ್ ಪದ್ಧತಿಯ ಕಲಾಶಾಲೆಗಳೂ ತಲೆಯೆತ್ತಿದವು. ಅವುಗಳ ಮೂಲಕ ವಿಕ್ಟೋರಿಯನ್ ಹಾಗೂ ರಿಯಲಿಸ್ಟಿಕ್ ಶೈಲಿಗಳು ಪರಿಚಯವಾದವು. ದೃಗ್ದರ್ಶನ, ತ್ರಿಮಾನ ಮತ್ತು ತೈಲವರ್ಣಗಳ ಬಳಕೆ ಮೊದಲಾಗಿ ಭಾರತೀಯ ಚಿತ್ರಕಲೆಯಲ್ಲಿ ನವ್ಯತೆ ಪ್ರಾರಂಭವಾಯಿತು. ಅವರೆಗೆ ಈ ತಂತ್ರ ಮತ್ತು ಶೈಲಿಗಳು ಭಾರತೀಯ ಕಲಾಸಂಪ್ರದಾಯದಲ್ಲಿರಲಿಲ್ಲ. ಕೇರಳದ ರಾಜಾರವಿವರ್ಮನು ಮೊದಲ ಬಾರಿಗೆ ಪಾಶ್ಚಾತ್ಯ ಪದ್ಧತಿಯಂತೆ ತೈಲವರ್ಣ ಮಾಧ್ಯಮದಲ್ಲಿ, ರೂಪದರ್ಶಿಗಳನ್ನು ಬಳಸಿಕೊಂಡು ನೂರಾರು ರಿಯಲಿಸ್ಟಿಕ್ ಶೈಲಿಯ ಚಿತ್ರಗಳನ್ನು ರಚಿಸಿದನು. ಹೀಗಾಗೇ ರವಿವರ್ಮನನ್ನು 'ಆಧುನಿಕ ಭಾರತೀಯ ಚಿತ್ರಕಲಾ ಪರಂಪರೆಯ ಅಧಿಕೃತ ಪ್ರತಿನಿಧಿ'ಯೆಂದು ಭಾವಿಸಲಾಗಿದೆ. ಅಂತೆಯೇ ಕರ್ನಾಟಕದಲ್ಲಿ ಕೇಶವಯ್ಯನವರನ್ನು 'ಕರ್ನಾಟಕದ ಆಧುನಿಕ ಚಿತ್ರಕಲೆಯ ಜನಕ' ಎನ್ನಲು ಅಡ್ಡಿಯಿಲ್ಲ. ಏಕೆಂದರೆ ಅಂದಿಗೆ ಕರ್ನಾಟಕದಲ್ಲಿ ಪಾಶ್ಚಿಮಾತ್ಯ ಪದ್ಧತಿಯಂತೆ ಕಲಾಶಿಕ್ಷಣ ಪಡೆದವರಲ್ಲಿ ಕೇಶವಯ್ಯನವರೇ ಮೊದಲಿಗರು. ಅಲ್ಲದೆ ತೈಲವರ್ಣ ಮಾಧ್ಯಮದಲ್ಲಿ ಅತ್ಯಧಿಕ ಕಲಾಕೃತಿಗಳನ್ನು ರಚಿಸಿದ್ದು ಕೂಡ ಕೇಶವಯ್ಯನವರೆಂದೇ ತೋರುತ್ತದೆ. ಕರ್ನಾಟಕದಲ್ಲಿ ಇವರಿಗಿಂತ ಮೊದಲು ತೈಲವರ್ಣದಲ್ಲಿ ಕಲಾಕೃತಿ ರಚಿಸಿದ ಇನ್ನೊಬ್ಬ ಕಲಾವಿದನಾಗಲೀ, ಕಲಾಕೃತಿಯಾಗಲೀ ಸಿಗುವುದಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ವಸಾಹತು ಶಿಕ್ಷಣ ಮತ್ತು ಕಲೆಗಳಿಂದ ಉಂಟಾದ ಕೆಲವು ಬದಲಾವಣೆಗಳಿಗೆ ಕೇಶವಯ್ಯನವರ ಕಲಾಸೃಷ್ಟಿಯು ಒಂದು ಪರಿಣಾಮಕಾರಿ ಉದಾಹರಣೆಯಾಗಿದೆ. ಈ ಅಧ್ಯಯನದ ಮುಖ್ಯಕೇಂದ್ರವು ಈ ಉದಾಹರಣೆಗಳ ಸ್ಥೂಲಸಮೀಕ್ಷೆಯೇ ಆಗಿದೆ. ವಸಾಹತುಶಾಹಿ ಕಲಾಸನ್ನಿವೇಶದಿಂದ ಉಂಟಾದ ವಿಶೇಷ ಪಲ್ಲಟಗಳ ಹೆಚ್ಚಿನ ಅಧ್ಯಯನ, ಚರ್ಚೆಗಳಿಗೆ ಈ ಸಮೀಕ್ಷೆ ದಾರಿಯಾಗಬಹುದು ಎಂದು ಆಶಿಸಿದ್ದೇನೆ.

೧. ಅಮೂರ್ತ ಕಲೆಯೆಂದು ಗುರುತಿಸಲಾಗುವ 'ಆಧುನಿಕ' ಕಲೆ ಮತ್ತು ಇನ್‌ಸ್ಟಾಲೇಷನ್, ಅರ್ಥ್‌ವರ್ಕ್ ಮುಂತಾದ ಆಧುನಿಕೋತ್ತರ ಕಲೆಗಳಲ್ಲೂ ವ್ಯಕ್ತಿ ವೈಶಿಷ್ಟ್ಯವೇ ಪ್ರಧಾನವಾಗಿದೆ.



ಚಾಮರಾಜ ಒಡೆಯರು (ವಿವರ)
ತೈಲವರ್ಣ, ಸಂಗ್ರಹ: ಮುಖ್ಯ ಅರಮನೆ.

**Chamaraja Wodeyar** *(detail)*
*Oil, Collection: Main Palace.*

ಕೇಶವಯ್ಯನವರ ಹಿರಿಯರು ತುಮಕೂರು ಜಿಲ್ಲೆಯ ತುರುವೇಕೆರೆಯಲ್ಲಿ ನೆಲೆಸಿದ್ದರು. ಅವರದು ಚಿತ್ರಗಾರರ ಮನೆತನ. ವಿಜಯನಗರದ ಆರಂಭ ಕಾಲದಿಂದಲೂ ವಂಶಪಾರಂಪರ್ಯವಾಗಿ ಚಿತ್ರಕಲಾವಿದರಾಗಿ ಸೇವೆಸಲ್ಲಿಸುತ್ತಿದ್ದರು. ಅದರ ಪತನಾನಂತರ (೧೫೬೫) ಈ ಕಲಾವಿದರೆಲ್ಲಾ ಚೆಲ್ಲಾಪಿಲ್ಲಿಯಾಗಿ ಎಲ್ಲೆಲ್ಲೋ ಆಶ್ರಯ ಪಡೆದರು. ಅವರಲ್ಲಿ ತೆಲುಗು ಮನೆಮಾತಾಗಿರುವ ಕೌಶಿಕ ಗೋತ್ರದ ಸೋಮವಂಶ ಆರ್ಯಕ್ಷತ್ರೀಯ 'ರಾಜು' ಪಂಗಡಕ್ಕೆ ಸೇರಿದ ಕೇಶವಯ್ಯನವರ ಹಿರಿಯರು ದಕ್ಷಿಣಕ್ಕೆ ಪಯಣ ಬೆಳೆಸಿ, ಇಂದಿನ ತುಮಕೂರು ಜಿಲ್ಲೆಯ ತುರುವೇಕೆರೆಯಲ್ಲಿ ಬಂದು ನೆಲೆಸಿದರು. ಇದೇ ಪಂಗಡಕ್ಕೆ ಸೇರಿದ ಇನ್ನೂ ಹಲವಾರು ವೃತ್ತಿಪರ ಕಲಾವಿದರು ಜಾವಗಲ್ಲು, ಚಿತ್ರದುರ್ಗ, ಸಿರಾ, ತಂಜಾವೂರು, ಆಲಂಪುರ ಹೀಗೆ ಎಲ್ಲೆಲ್ಲಿ ಅವರ ಕಲೆಗೆ ಪ್ರೋತ್ಸಾಹ-ರಾಜಾಶ್ರಯ ಸಿಕ್ಕಿತೋ ಅಲ್ಲಲ್ಲೇ ನೆಲೆಸಿದರು.

ಟಿಪ್ಪು ಸುಲ್ತಾನನ (೧೭೫೩-೧೭೯೯) ಕಾಲದಲ್ಲಿ ದಿವಾನ್ ಪೂರ್ಣಯ್ಯನವರು (೧೭೩೨-೧೮೧೨) ಕೇಶವಯ್ಯನವರ ಹಿರಿಯರ ಕಲಾನೈಪುಣ್ಯವನ್ನು ಮೆಚ್ಚಿ, ಅವರನ್ನು ತುರುವೇಕೆರೆಯಿಂದ ಶ್ರೀರಂಗಪಟ್ಟಣಕ್ಕೆ ಕರೆತಂದು, ರಾಜಾಶ್ರಯದಲ್ಲಿ ಭಿತ್ತಿಚಿತ್ರ ರಚಿಸುವ ಕಾರ್ಯವಹಿಸಿದರು. ಹೀಗೆ ಕೇಶವಯ್ಯನವರ ವಂಶಜರು ಮೂರ್‍ನಾಲ್ಕು ತಲೆಮಾರುಗಳಿಂದ ಮೈಸೂರು ಅರಸರ ಪೋಷಣೆಯಲ್ಲಿ ಬೆಳೆದರು. ರಾಜಾಶ್ರಯದಲ್ಲಿದ್ದ ಚಿತ್ರಗಾರರೆಲ್ಲಾ ಶ್ರೀರಂಗಪಟ್ಟಣದ ಗಂಜಾಂನಲ್ಲಿ ತಮ್ಮ ಕುಲದೇವತೆಯಾದ ನಿಮಿಷಾಂಬ ದೇವಿಯ ಗುಡಿಯೊಂದನ್ನು ಕಟ್ಟಿಕೊಂಡು ಅದರ ಸುತ್ತಮುತ್ತಲೇ ನೆಲೆಸಿದರು. ಅದು 'ಚಿತ್ರಕಾರರ ಕೇರಿ'ಯೇ ಆಯಿತು. ಕೇಶವಯ್ಯನವರ ತಾತ ಮುತ್ತಾತರ ಮನೆಯೂ ಇಲ್ಲೇ ಇತ್ತು. ಶ್ರೀರಂಗಪಟ್ಟಣದ ದರಿಯಾದೌಲತ್‌ನಲ್ಲಿನ ಭಿತ್ತಿಚಿತ್ರಗಳೆಲ್ಲಾ ಇವರ ನೇತೃತ್ವದಲ್ಲೇ ರಚನೆಗೊಂಡಿರುವಂಥವು. ಟಿಪ್ಪುಸುಲ್ತಾನನ ಮರಣಾನಂತರ (೧೭೯೯) ರಾಜಧಾನಿಯನ್ನು ಶ್ರೀರಂಗಪಟ್ಟಣದಿಂದ ಮೈಸೂರಿಗೆ ವರ್ಗಾಯಿಸಲಾಗಿ ಚಿತ್ರಕಲಾವಿದರೂ ಮೈಸೂರಿಗೆ ಬಂದು ನೆಲೆಸಿದರು. ಮೊದಲಿಗೆ ಕಲಾವಿದರೆಲ್ಲಾ ಇಲ್ಲಿನ ಹಳೆಯ ಅಗ್ರಹಾರದಲ್ಲಿ ನೆಲೆಸಿದರಾದರೂ ಕ್ರಮೇಣ ಸುತ್ತಲೂ ಚದುರಿದರು. ಕೇಶವಯ್ಯನವರ ತಾತ ಚಿತ್ರಗಾರ ತಿಪ್ಪಣ್ಣನವರು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಉತ್ತಮ ಚಿತ್ರಗಾರರೆಂದು ಹೆಸರಾಗಿದ್ದರು. ಇವರು ಮೊದಲು ಮೈಸೂರು ಕಿಲ್ಲೆಯಲ್ಲಿದ್ದರು. ಆನಂತರ ರಾಜರ ಆಶ್ರಯದಲ್ಲಿ ಅಂದರೆ ಅರಮನೆಯ ಆವರಣದಲ್ಲೇ ವಾಸಿಸುತ್ತಿದ್ದರು. ಆದ್ದರಿಂದಲೇ ಇವರಿಗೆ "ಕೋಟೆ"ಯವರೆಂದು ಹೆಸರು ಬಂದಿತು. ಇದೇ ಪಂಗಡದ ಇನ್ನೂ ಕೆಲವರು ಚಿತ್ರಗಾರಿಕೆಯನ್ನು ಬಿಟ್ಟು ಚಿನ್ನಬೆಳ್ಳಿ ಕೆಲಸದಲ್ಲೂ ತೊಡಗಿಕೊಂಡರು.

ಟಿಪ್ಪು ಸುಲ್ತಾನನ ನಂತರ ಮುಮ್ಮಡಿ ಕೃಷ್ಣರಾಜ ಒಡೆಯರು (೧೭೯೪-೧೮೬೮) ಮೈಸೂರಿನ ಸಿಂಹಾಸನವನ್ನೇರಿದ್ದು ಕಲಾದಿಗಂತದಲ್ಲಿ ಒಂದು ಹೊಸ ಅಧ್ಯಾಯ ಆರಂಭವಾದಂತಾಯಿತು. ಅಂದರೆ ಇವರ ಕಾಲದಲ್ಲಿ ಎಲ್ಲ ಲಲಿತಕಲೆಗಳಿಗೂ ಬಿರುಸಿನ ಚಾಲನೆ ಸಿಕ್ಕಿತು. ಅನೇಕ ಅಡ್ಡಿ ಆತಂಕ, ಗೊಂದಲ, ಯುದ್ಧ, ಪಿತೂರಿ, ಕ್ಷೋಭೆ, ಕ್ಷಾಮ, ಬ್ರಿಟೀಷರ ದಮನಕಾರಿ

ನೀತಿಗಳ ನಡುವೆಯೂ ಸಂಗೀತ, ಸಾಹಿತ್ಯ, ಚಿತ್ರಕಲೆ, ಶಿಲ್ಪಕಲೆ, ಧರ್ಮ ಮುಂತಾದುವುಗಳಿಗೆ ಅದ್ವಿತೀಯ ಪ್ರೋತ್ಸಾಹ ನೀಡಿದರು. ಅವರು ಕಲಾವಿದರಿಗೆ ಭಾರೀ ಕೊಡುಗೈ ದೊರೆಯೇ ಆಗಿದ್ದು, 'ಕನ್ನಡ ಭೋಜರಾಜ'ರೆಂದೇ ಹೆಸರಾಗಿದ್ದರು. ಎಲ್ಲಕ್ಕೂ ಹೆಚ್ಚಾಗಿ ಮುಮ್ಮಡಿಯವರು ಚಿತ್ರಕಲೆ, ಸಂಗೀತ ಮತ್ತು ನೃತ್ಯಗಳಲ್ಲಿ 'ಮೈಸೂರು ಶೈಲಿ' ಎಂಬ ಹೊಸಶೈಲಿಯೊಂದಕ್ಕೆ ಜನ್ಮನೀಡಿ, ಅದಕ್ಕೆ ಭದ್ರಬುನಾದಿ ಹಾಕಿಕೊಟ್ಟರು. ಉತ್ತರ ಭಾರತದ ರಾಜಸ್ತಾನ, ಪಹಾಡಿ, ಕಾಂಗ್ರಾ, ರಜಪೂತ, ಮೇವಾರ್, ಬುಂದಿ, ಕೋಟಾ, ಕಿಷನ್‌ಗರ್, ಜೈಪುರ, ಬಾಸೋಲಿ ಇತ್ಯಾದಿ ಶೈಲಿಗಳಂತೆಯೇ ದಕ್ಷಿಣ ಭಾರತದಲ್ಲಿ ವರ್ಣಚಿತ್ರಕಲೆಯಲ್ಲಿ 'ಮೈಸೂರು ಶೈಲಿ' ರೂಪುಗೊಂಡಿತು. ಮುಮ್ಮಡಿಯವರಿಗೆ ಚಿತ್ರಕಲೆಯ ಮೇಲೆ ವಿಶೇಷವಾದ ವ್ಯಾಮೋಹವಿತ್ತು. ಆದ್ದರಿಂದಲೇ ಅವರ ಕಾಲದಲ್ಲಿ ಮೈಸೂರು ಅರಮನೆ, ಸ್ಥಳೀಯ ಮತ್ತು ಸುತ್ತಮುತ್ತಲಿನ ದೇಗುಲಗಳು ಹಾಗೂ ಭಜನಾ ಮಂದಿರಗಳೆಲ್ಲಾ ಚಿತ್ರಕಲೆಯಿಂದ ಅಲಂಕೃತಗೊಂಡವು. ಇವರ ಚಿತ್ರಕಲಾ ಪ್ರೇಮಕ್ಕೆ ಸಾಕ್ಷಿಯಾಗಿ ಇಂದಿಗೂ ಮೈಸೂರಿನ ಜಗನ್ಮೋಹನ ಅರಮನೆ, ಕೋಟೆಯಲ್ಲಿರುವ ಶ್ವೇತಾವರಹಸ್ವಾಮಿ ಮತ್ತು ಪ್ರಸನ್ನ ಕೃಷ್ಣಸ್ವಾಮಿ ದೇಗುಲ, ಕೋಟೆಯ ಹೊರಗೆ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯ, ಚಾಮರಾಜನಗರದ ಚಾಮರಾಜೇಶ್ವರ ದೇಗುಲ, ಮುಡುಕುತೊರೆಯ ಮಲ್ಲಿಕಾರ್ಜುನ ದೇವಾಲಯ ಇನ್ನೂ ಮುಂತಾದ ಕಡೆಗಳಲ್ಲಿನ 'ಚಿತ್ರಮಂಟಪ'ಗಳು ಹಾಗೂ 'ಶ್ರೀತತ್ವನಿಧಿ', 'ಸ್ವರಚೂಡಾಮಣಿ' ಮುಂತಾದ ಸಚಿತ್ರಪುಸ್ತಕಗಳು ಮತ್ತು 'ಗಂಜೀಫಾ ಎಲೆಗಳು' ಕೂಡ ಉಳಿದುಕೊಂಡಿವೆ.


ಮುಮ್ಮಡಿಯವರ ಆಸ್ಥಾನದಲ್ಲಿ ಜಾವಗಲ್ಲು ನರಸಿಂಹಯ್ಯ, ನೆಲಮಂಗಲದ ರಂಗಪ್ಪ, ದುರ್ಗದ ಕೃಷ್ಣಪ್ಪ, ಆಳಸಿಂಗ್ರಯ್ಯ, ವೀರಣ್ಣ, ನಗೂನಳ್ಳಿ ನಾರಣಪ್ಪ, ಯಲ್ಲಯ್ಯ, ಸುಂದರಯ್ಯ, ಅವಧೂತ ಪಾಪಣ್ಣ, ಗುರಿಕಾರ ತಿಪ್ಪಣ್ಣ (ಕೇಶವಯ್ಯನವರ ತಾತ), ತಂಜಾವೂರು ಕೊಂಡಯ್ಯ, ವೆಂಕಟಸುಬ್ಬು, ಚಿತ್ರಗಾರ ಮೇಸ್ತ್ರಿ ಲಕ್ಷ್ಮಯ್ಯ, ಚೆನ್ನಕೃಷ್ಣ ಮುಂತಾದ ಚಿತ್ರಕಲಾವಿದರ ಒಂದು ದೊಡ್ಡ ದಂಡೇ ಇದ್ದಿತೆಂದು ತಿಳಿದು ಬರುತ್ತದೆ. ಇವರ ಸಮಕ್ಷಮದಲ್ಲೇ ಅಂದಿನ ಭಿತ್ತಿಚಿತ್ರಗಳೆಲ್ಲಾ ರಚನೆಗೊಂಡಿರುವುದು. ಈ ಎಲ್ಲ ಕಲಾವಿದರ ಭಾವಚಿತ್ರಗಳನ್ನು ಜಗನ್ಮೋಹನ ಚಿತ್ರಶಾಲೆಯಲ್ಲಿನ 'ಅಲ್ಬಂ'ನಲ್ಲಿ ಇಂದಿಗೂ ಕಾಣಬಹುದಾಗಿದೆ.

ಕೇಶವಯ್ಯನವರ ತಾತ ಚಿತ್ರಗಾರ ತಿಪ್ಪಣ್ಣನವರು ಮುಮ್ಮಡಿಯವರ ಕಾಲದಲ್ಲಿ ಅರಮನೆಯ ಚಿತ್ರಶಾಲಾ ಇಲಾಖೆಯಲ್ಲಿ ಮೊಖ್ತೆಸರ್ (ಮುಖ್ಯ ಕಲಾವಿದ) ಆಗಿ ಸೇವೆಸಲ್ಲಿಸಿರುವರು. ಮುಮ್ಮಡಿಯವರ ಕಾಲದಲ್ಲಿ ಪಂಡಿತರ ಕೆಲವು ಬರಹಗಳನ್ನು ಅಂದವಾಗಿ ಪ್ರತಿಮಾಡಲು, ಅಗತ್ಯವಿದ್ದರೆ ಚಿತ್ರಗಳನ್ನು ಸೇರಿಸಲು ಬರಹಗಳನ್ನೆಲ್ಲಾ ಚಿತ್ರಗಾರರಿಗೆ ಕೊಡುವ ಪರಿಪಾಠವಿತ್ತು. ಚಿತ್ರಗಾರ ತಿಪ್ಪಣ್ಣನವರು ಇಂತಹ ಹಲವಾರು ಹಸ್ತಲಿಖಿತ ಪುಸ್ತಕಗಳಿಗೆ ಬರಹ ಮತ್ತು ಚಿತ್ರಗಳನ್ನು ರಚಿಸಿದ್ದಾರೆ. ಇದಕ್ಕೆ ಅತ್ಯುತ್ತಮ ಉದಾಹರಣೆಯೆಂದರೆ ಶ್ರೀ ಕೃಷ್ಣರಾಜ ಮಹಾರಾಜ ಕಂಠೀರವರ 'ವಂಶಾವತರಣ ವೈಭವ ಗದ್ಯ' ಎಂಬ ಕೃತಿ.



*ಚಾಮರಾಜೇಂದ್ರ ಒಡೆಯರ್*
*ಬಣ್ಣದ ಛಾಯಾಚಿತ್ರ*
*ಸಂಗ್ರಹ: ಮುಖ್ಯ ಅರಮನೆ.*

*Chamarajendra Wodeyar*
*Color Photograph*
*Collection: Main Palace.*



ತಿಪ್ಪಣ್ಣ ರಚಿಸಿದ ಮೈಸೂರು ಅರಸರ 'ವಂಶವೃಕ್ಷ' ಕಲಾಕೃತಿ, ೧೭೭೯, ಜಲವರ್ಣ
ಸಂಗ್ರಹ: ಚಿತ್ರಕಲಾ ಪರಿಷತ್ತು, ಬೆಂಗಳೂರು.

***'Vamshavruksha' of the Royal Dynasty of Mysore by Tippanna, 1779,*** *Water color*
*Collection: CKP, B'lore.*

ಇದರಲ್ಲಿ "ಮಹಿಶೂರು ಮಹಾಸಂಸ್ಥಾನದ ಈ ಸಂತಾನವೃಕ್ಷವು ಗದ್ಯಸಹ ಶಾಲೀವಾಹನಶಕ ೧೭೭೯ಕ್ಕೆ ಸಂದಪ್ಯೆಂಗಳ ಸಂವತ್ಸರದ ಆಷಾಡ ಬ.೨ ಗುರುವಾರದಲ್ಲಿ ಸರಿಗೆ ಚನ್ನಯ್ಯನ ಮೊಮ್ಮಗನಾದ ಚಿತ್ರಗಾರ ರಾಮಪ್ಪನ ಮಗನಾದ ಚಿತ್ರಗಾರರಿಗೆ ಗೊತ್ತುಗಾರ ಮಹಾಸನ್ನಿಧಾನದ ಚಾಕರನಾದ ತಿಪ್ಪಣ್ಣ ಬರೆದು ಒಪ್ಪಿಸಿದ್ದು" ಎಂದಿದೆ [೨]. ಜೊತೆಗೆ ವಂಶವೃಕ್ಷದ ಚಿತ್ರವೂ ಇದೆ. ಇದಲ್ಲದೆ ಮುಮ್ಮಡಿಯವರೇ ರಚಿಸಿದ 'ಶ್ರೀತತ್ವನಿಧಿ', 'ಸ್ವರ ಚೂಡಾಮಣಿ', 'ದೇವತಾನಾಮಕುಸುಮಮಂಜರಿ' ಮೊದಲಾದ ಹಸ್ತಲಿಖಿತ ಗ್ರಂಥಗಳಲ್ಲೂ ನೂರಾರು ಚಿತ್ರಗಳಿದ್ದು, ಇವುಗಳಲ್ಲಿ ಸಾಕಷ್ಟು ಚಿತ್ರಗಳನ್ನು ತಿಪ್ಪಣ್ಣನವರೇ ರಚಿಸಿದ್ದಾರೆಂದು ತಿಳಿಯುತ್ತದೆ.



ಮಾಂಜಿ ರಚಿಸಿದ ಮುಮ್ಮಡಿ ಕೃಷ್ಣರಾಜ ಒಡೆಯರ ಭಾವಚಿತ್ರ
೧೮೪೬, ಜಲವರ್ಣ
ಸಂಗ್ರಹ: ಚಿತ್ರಕಲಾ ಪರಿಷತ್ತು, ಬೆಂ.

*Mummadi Krishnaraja Wodeyar's portraite by Manji, 1846*
*Water color*
*Collection: CKP, B'lore.*

ಜೊತೆಗೆ ತಿಪ್ಪಣ್ಣ ಮತ್ತು ಚೆಲುವಮ್ಮನವರ ವಿವಾಹವು ಅರಮನೆಯ ವೆಚ್ಚದಲ್ಲೇ ಅರಮನೆಯ ಕರಿಕಲ್ ತೊಟ್ಟಿಯಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಬಹದೂರ್ ಅವರ ಸಮಕ್ಷಮದಲ್ಲೇ ನೆರವೇರಿತು. ಎಲ್ಲಕ್ಕೂ ಹೆಚ್ಚಾಗಿ ತಿಪ್ಪಣ್ಣ ಮುಮ್ಮಡಿಯವರ ಆತ್ಮೀಯ ಗೆಳೆಯರೂ ಆಗಿದ್ದರು. ಮುಮ್ಮಡಿಯವರು ಆಗಾಗ್ಗೆ ಅರಮನೆಯ ಆವರಣದಲ್ಲೇ ಇದ್ದ ತಿಪ್ಪಣ್ಣನವರ ಮನೆಗೆ ಭೇಟಿ ನೀಡುತ್ತಿದ್ದುದೂ ಉಂಟು.

ಕೇಶವಯ್ಯನವರ ತಂದೆ ಚಿನ್ನಕೇಶವಯ್ಯನವರೂ ಕಲಾವಿದರೇ ಆಗಿದ್ದರು. ಇವರೂ ಅರಮನೆಯ ನೌಕರಿಯಲ್ಲಿಯೇ ಇದ್ದರು. ಚಿನ್ನಕೇಶವಯ್ಯ ತಿಪ್ಪಣ್ಣನವರ ಏಕೈಕ ಪುತ್ರ. ಇವರು ಜನಿಸಿದ್ದು ಜನವರಿ ೧೨, ೧೮೫೦ನೆಯ ಸೌಮ್ಯ ಸಂವತ್ಸರದ ಪುಷ್ಯಾ ಬ.೧೪ ಸ್ಥಿರವಾರದಂದು. ಅರಮನೆಯಲ್ಲಿ ಉದ್ಯೋಗಕ್ಕೆ ಸೇರಿದ್ದು ಸೆಪ್ಟೆಂಬರ್ ೧, ೧೮೬೮ರಂದು. ಆರಂಭದಲ್ಲಿ ಇವರು ಅಂಬಾವಿಲಾಸ ಚಿತ್ರಗಾರರಾಗಿ, ನಂತರ ಮರ್ರಾಮತ್ ಕಛೇರಿಯ ಚಿತ್ರಗಾರ ಮೇಸ್ತ್ರಿಯಾಗಿ ಸೇವೆಸಲ್ಲಿಸುತ್ತಿದ್ದರಾದರೂ ಕಾಲಕ್ರಮೇಣ ಇವರನ್ನು ಅರಮನೆಯ ಲೆಕ್ಕಪತ್ರಗಳ ಕಛೇರಿಗೆ ವರ್ಗಾಯಿಸಲಾಯಿತು. ಅಲ್ಲಿ ಆಫೀಸ್ ರೆಕಾರ್ಡ್ ಕೀಪರ್ ಆಗಿ, ಅರಮನೆಯ ಕಂಟ್ರೋಲರ್ ಆಫೀಸ್‌ನಲ್ಲಿ ಅಕೌಂಟೆಂಟ್ ಆಗಿ, ಡೆಪ್ಯುಟಿ ಅಕೌಂಟೆಂಟ್ ಆಗಿ ಕೊನೆಗೆ ಹೆಡ್ ಅಕೌಂಟೆಂಟ್ ಆಗಿ ಸೇವೆಸಲ್ಲಿಸಿದ್ದಾರೆ.[೩]

ಕೇಶವಯ್ಯ ಹುಟ್ಟಿದ್ದು ಮೈಸೂರಿನಲ್ಲೇ. ತಾಯಿಯ ಹೆಸರು ಅಲಮೇಲಮ್ಮ. ೧೮೭೮ರಲ್ಲಿ ಕೇಶವಯ್ಯ ಜನಿಸಿದಾಗ ಮೈಸೂರಿನಲ್ಲಿ ಬ್ರಿಟೀಷ್ ಕಮೀಷನರ್‌ಗಳೇ ಆಡಳಿತ ನಡೆಸುತ್ತಿದ್ದರು. ಮೂರು ವರ್ಷಗಳ ತರುವಾಯ ಅಂದರೆ ೧೮೮೧ ಮಾರ್ಚ್ ೨೫ರಂದು ಚಾಮರಾಜೇಂದ್ರ ಒಡೆಯರ್ ಅವರು ರಾಜ್ಯಭಾರವನ್ನು ವಹಿಸಿಕೊಂಡರು. ಆಗ ರಂಗಾಚಾರ್ಲು ದಿವಾನರಾಗಿ ನೇಮಕಗೊಂಡರು. ೧೮೮೩ರಲ್ಲಿ ಅವರು ನಿಧನರಾದ ನಂತರ ಶೇಷಾದ್ರಿ ಅಯ್ಯರ್ ಅವರನ್ನು ದಿವಾನರನ್ನಾಗಿ ನೇಮಿಸಲಾಯಿತು. ೧೮೯೪ ಡಿಸೆಂಬರ್ ೨೮ರಂದು ಚಾಮರಾಜ ಒಡೆಯರು ಗಂಟಲು ಖಾಯಿಲೆಯಿಂದ ಕಲ್ಕತ್ತಾದಲ್ಲಿ ತೀರಿಕೊಂಡ ನಂತರ ಅವರ ಹಿರಿಯ ಮಗ ನಾಲ್ವಡಿ ಕೃಷ್ಣರಾಜ ಒಡೆಯರು ಇನ್ನೂ ಅಪ್ರಾಪ್ತ ವಯಸ್ಕರಾಗಿದ್ದುದರಿಂದ ಅವರ ಪರವಾಗಿ ಮಹಾರಾಣಿ ಕೆಂಪನಂಜಮ್ಮಣ್ಣಿಯವರೇ 'ರೀಜೆಂಟ'ರಾಗಿ ೧೯೦೨ರವರೆಗೂ ದಕ್ಷತೆಯಿಂದ ಆಡಳಿತ ನಡೆಸಿದರು.

---

೨. ಶ್ರೀಮನ್ಮಹಾರಾಜರವರ ವಂಶಾವಳಿ, ೨ನೆಯ ಭಾಗ, ಪುಟ xviii, ೧೯೨೨.

೩. ಈ ವಿವರಗಳನ್ನು ಮೈಸೂರಿನ ಪತ್ರಾಗಾರ ಇಲಾಖೆಯಲ್ಲಿನ ಸರ್ವೀಸ್ ಪುಸ್ತಕದಿಂದ ಸಂಗ್ರಹಿಸಲಾಗಿದೆ. ಅದರಲ್ಲಿ ವ್ಯಕ್ತಿವಿವರಗಳನ್ನು ಎಷ್ಟರಮಟ್ಟಿಗೆ ದಾಖಲಿಸಲಾಗಿದೆಯೆಂದರೆ ಚೆನ್ನಕೇಶವಯ್ಯನವರು ೫.೪ ಅಡಿ ಎತ್ತರವಿದ್ದರೆಂದೂ, ಅವರಿಗೆ ಎದೆಯ ಎಡಭಾಗದಲ್ಲಿ ಕರಿಮಚ್ಚೆಯಿತ್ತೆಂದೂ ನಮೂದಿಸಿದೆ.



ನಾಲ್ವಡಿ ಕೃಷ್ಣರಾಜ ಒಡೆಯರು
*ಬಣ್ಣದ ಛಾಯಾಚಿತ್ರ*
*ಸಂಗ್ರಹ: ಕೆ.ಎನ್. ರಾಜು, ಬೆಂ.*

*Nalvadi Krishnaraja Wodeyar*
*Color Photograph*
*Collection: K.N.Raju, B'lore.*

ಕೇಶವಯ್ಯನವರ ಪ್ರಾರಂಭಿಕ ಶಿಕ್ಷಣವು ಮುಮ್ಮಡಿಯವರ ಕಾಲದಲ್ಲಿ ಸ್ಥಾಪಿತವಾದ ಮೈಸೂರಿನ ಇಂಗ್ಲೀಷ್ ಶಾಲೆ 'ರಾಜಾಸ್ಕೂಲ್'ನಲ್ಲಿ ನಡೆಯಿತು. ಓದಿನಲ್ಲಿ ಬಹಳ ಮುಂದಿದ್ದ ಕೇಶವಯ್ಯ ಆಗಲೇ ಮೆಟ್ರಿಕ್ಯುಲೇಷನ್‌ವರೆಗೂ ಓದಿದರು. ಇವರ ತಾತ, ತಂದೆಯವರೆಲ್ಲಾ ಚಿತ್ರಕಲಾವಿದರಾಗಿದ್ದು, ಅರಮನೆಯಲ್ಲೇ ಇದ್ದುದರಿಂದ ಸಹಜವಾಗಿಯೇ ಕೇಶವಯ್ಯನವರಿಗೂ ಚಿತ್ರಕಲೆಯ ಮೇಲೆ ಒಲವು ಮೂಡಿತು. ಆಗಾಗ್ಗೆ ತಂದೆಯವರೊಂದಿಗೆ ಅರಮನೆಗೆ ಹೋಗಿಬರುತ್ತಿದ್ದು, ಅಲ್ಲಿನ ಚಿತ್ರಗಳನ್ನೆಲ್ಲಾ ಕುತೂಹಲದ ಕಣ್ಣುಗಳಿಂದ ನೋಡುತ್ತಿದ್ದರು. ಇತ್ತ ಮನೆಯಲ್ಲೂ ತಂದೆಯವರು ಬಿಡುವಿನ ವೇಳೆಯಲ್ಲಿ ಚಿತ್ರಬಿಡಿಸುತ್ತಿದ್ದುದನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಹೀಗೆ ವಂಶಪಾರಂಪರ್ಯವಾಗಿ ಬಂದ ಈ ಗೀಳಲ್ಲೇ ಕೇಶವಯ್ಯ ಹೈಸ್ಕೂಲ್‌ನಲ್ಲಿ ಓದುತ್ತಿದ್ದಾಗಲೇ ಚಿತ್ರಗಳನ್ನು ರಚಿಸುತ್ತಿದ್ದರು. ಇದನ್ನೆಲ್ಲಾ ನೋಡಿದ್ದ ಅರಮನೆಯ ಕೆಲವರು ಚಿನ್ನಕೇಶವಯ್ಯನವರಿಗೆ ಮಗನನ್ನು ಚಿತ್ರಕಲಾಭ್ಯಾಸಕ್ಕೆ ಕಳುಹಿಸುವಂತೆ ಸಲಹೆ ನೀಡಿದರು. ಚಿನ್ನಕೇಶವಯ್ಯ ಇದನ್ನು ಗಂಭೀರವಾಗಿಯೇ ಪರಿಗಣಿಸಿದರಾದರೂ ಆರ್ಥಿಕ ಪರಿಸ್ಥಿತಿ ಅಷ್ಟೊಂದು ಚೆನ್ನಾಗಿಲ್ಲದ ಕಾರಣ ಹಿಂದೆ-ಮುಂದೆ ನೋಡುವಂತಾಯಿತು. ಕೊನೆಗೆ ಅರಮನೆಯ ನೆರವು ಕೇಳಿದರು.

ರೀಜೆಂಟ್ ಮಹಾರಾಣಿಯವರ ಆಳ್ವಿಕೆಯ ಕಾಲದಲ್ಲಿ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಬ್ರಿಟೀಷ್ ಅಧಿಕಾರಿಗಳು ಈ ದೇಶದಲ್ಲಿನ ಯೋಗ್ಯರಾದ, ಪ್ರತಿಭಾವಂತ ಯುವಕರನ್ನು ಬ್ರಿಟೀಷರ ನೇರ ಆಡಳಿತಕ್ಕೊಳಪಟ್ಟಿದ್ದ ಮುಂಬಯಿ, ಮದರಾಸ್, ಕಲ್ಕತ್ತಾ ಮೊದಲಾದ ಸ್ಥಳಗಳಲ್ಲಿದ್ದ ಶಾಲಾಕಾಲೇಜುಗಳಿಗೆ, ಅಗತ್ಯಬಿದ್ದರೆ ಇಂಗ್ಲೆಂಡಿಗೂ ಕಳುಹಿಸಿ ಉಚ್ಚಶಿಕ್ಷಣ ಪಡೆದು ಹಿಂದಿರುಗಿ ಇಲ್ಲಿನ ಬೆಳವಣಿಗೆಗೆ ನೆರವಾಗಲೆಂದು ಪ್ರತಿವಿದ್ಯಾರ್ಥಿಗೂ ಸರ್ಕಾರದಿಂದ ತಿಂಗಳಿಗೆ ೧೫-೨೦ ರೂ.ಗಳ ವಿದ್ಯಾರ್ಥಿವೇತನ ನೀಡುವ ಯೋಜನೆಯೊಂದನ್ನು ಜಾರಿಗೆ ತಂದಿದ್ದರು.[೪] ಜೊತೆಗೆ ೧೮೯೭ರ ಫೆಬ್ರವರಿಯಲ್ಲಿ ಹಳೆಯ ಅರಮನೆಗೆ ಬೆಂಕಿಬಿದ್ದು ಪುಸ್ತಕಭಂಡಾರ, ಸಂಗೀತವಾದ್ಯ ಭವನ, ಚಿತ್ರಕಲಾಕೃತಿಗಳೆಲ್ಲಾ ಸುಟ್ಟುಬೂದಿಯಾಗಿತ್ತು. ಹೊಸ ಅರಮನೆ ಕಟ್ಟಿಸುವ ಏರ್ಪಾಡಾಗಿತ್ತು. ಹೊಸ ಅರಮನೆಯ ನಿರ್ಮಾಣಕಾರ್ಯ ಮುಗಿದ ನಂತರ ಅರಮನೆಯನ್ನು ಚಿತ್ರಕಲೆಯಿಂದ ಅಲಂಕರಿಸಲು, ರಾಜಪರಿವಾರದವರ ಭಾವಚಿತ್ರಗಳನ್ನು ರಚಿಸಲು ಚಿತ್ರಕಲಾವಿದರ ಅಗತ್ಯವಿತ್ತು. ಈ ಮುಂದಾಲೋಚನೆಯಿಂದ ಮಹಾರಾಣಿಯವರು ಕೇಶವಯ್ಯನವರಿಗೆ ಆಧುನಿಕ ಶಿಕ್ಷಣ ಕೊಡಿಸಲು ಮುಂದಾದರು. ಮರುವರ್ಷವೇ ಕೇಶವಯ್ಯನವರನ್ನು ಉನ್ನತ ವ್ಯಾಸಂಗಕ್ಕಾಗಿ 'ಮದ್ರಾಸ್ ಸ್ಕೂಲ್ ಆಫ್ ಆರ್ಟ್ಸ್'ಗೆ ಕಳುಹಿಸಲು ಏರ್ಪಾಡು ಮಾಡಿದರು. ಕೇಶವಯ್ಯ ಸಂತೋಷದಿಂದ ಮದ್ರಾಸ್‌ಗೆ ತೆರಳಿದರು. ಅಲ್ಲಿ ರೇಖಾಚಿತ್ರ, ಚಿತ್ರಕಲೆ ಮತ್ತು ಡಿಸೈನ್‌ನಲ್ಲಿ ಮೂರುವರ್ಷಗಳ ಕಾಲ ಯುರೋಪಿಯನ್ ಮಾದರಿಯಲ್ಲಿ ಅಧ್ಯಯನ ಮಾಡಿ, ಉನ್ನತ ತಾಂತ್ರಿಕ ಪರೀಕ್ಷೆಗಳಲ್ಲಿ ಹೆಚ್ಚಿನ ಅಂಕಪಡೆದು ೧೯೦೧ರಲ್ಲಿ ಡಿಪ್ಲೋಮೊ ಪದವಿಯೊಂದಿಗೆ ಮೈಸೂರಿಗೆ ವಾಪಸ್ಸಾದರು. ಫೋಟೋಗ್ರಫಿ ಬಗ್ಗೆ ಕೂಡ ತಿಳಿದುಕೊಂಡಿದ್ದರು. ಚಿತ್ರಕಲೆಯಲ್ಲಿ ಇನ್ನೂ ಹೆಚ್ಚಿನ ಶಿಕ್ಷಣಕ್ಕಾಗಿ ಮದ್ರಾಸ್‌ಗೆ ಹೋಗಬೇಕೆಂಬ ಬಯಕೆ ಕೇಶವಯ್ಯನವರಿಗಿತ್ತಾದರೂ ಮನೆಕಡೆಯ ತಾಪತ್ರಯದಿಂದಾಗಿ ಹೋಗಲಾಗಲಿಲ್ಲ.

---

೪. ಪ್ರೊ|| ಸಾ.ಕೃ. ರಾಮಚಂದ್ರರಾವ್: ಕಲಾತಪಸ್ವಿ ವೆಂಕಟಪ್ಪ:
ಪುಟ ೧೫, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

ಕೇಶವಯ್ಯನವರು ಮದ್ರಾಸ್‌ನಲ್ಲಿ ಕಲಾಭ್ಯಾಸವನ್ನು ಮುಗಿಸಿಕೊಂಡು ಮೈಸೂರಿಗೆ ಬಂದನಂತರ ಇವರ ವಿವಾಹವು ಮೀನಾಕ್ಷಮ್ಮ ಎಂಬುವರೊಂದಿಗೆ ನಡೆಯಿತು. ಮರುವರ್ಷವೇ ಅಂದರೆ ಫೆಬ್ರವರಿ ೧, ೧೯೦೨ರಂದು ರೀಜೆಂಟ್ ಮಹಾರಾಣಿಯವರ ಅಪ್ಪಣೆಯಂತೆ ೧೦ ರೂಪಾಯಿ ಸಂಬಳದ ಮೇಲೆ ಕೇಶವಯ್ಯ ಅರಮನೆಯ ಮರ್ರಾಮತ್ ಇಲಾಖೆಯಲ್ಲಿ ಚಿತ್ರಕಲಾವಿದರಾಗಿ ಕೆಲಸಕ್ಕೆ ಸೇರಿಕೊಂಡರು. ಇವರು ಅರಮನೆಗೆ ಬಂದ ಸ್ವಲ್ಪಕಾಲದ ನಂತರ ರೀಜೆಂಟ್ ಆಡಳಿತ ಕೊನೆಗೊಂಡು ನಾಲ್ವಡಿ ಕೃಷ್ಣರಾಜ ಒಡೆಯರು ಮಹಾರಾಜರಾಗಿ ಅಧಿಕಾರ ವಹಿಸಿಕೊಂಡರು. ಇವರ ಕಾಲದಲ್ಲಿ ಹೊಸ ಅರಮನೆಯ ನಿರ್ಮಾಣಕಾರ್ಯ ಭರದಿಂದ ನಡೆದು, ೧೯೦೪ರಲ್ಲಿ ಆಗ್ಗೆ ಸಾಕಷ್ಟು ಹೆಸರಾಗಿದ್ದ ಟ್ರಾವಂಕೂರಿನ ಕಲಾವಿದ ರಾಜಾರವಿವರ್ಮ (೧೮೪೮ - ೧೯೦೬) ಮತ್ತು ಅವನ ಸಹೋದರ ರಾಜರಾಜವರ್ಮಾರವರನ್ನು ಎರಡನೇ ಬಾರಿಗೆ[೫] ಹೊಸ ಅರಮನೆಯ ದರ್ಬಾರ್ ಹಾಲನ್ನು ಸುಂದರ ಚಿತ್ರಗಳಿಂದ ಅಲಂಕರಿಸಲು ಅತಿಥಿಯಾಗಿ ಆಹ್ವಾನಿಸಲಾಯಿತು. ರವಿವರ್ಮ ಹೊಸ ಅರಮನೆಗೆ ಬಂದು ಚಿತ್ರರಚಿಸುವಾಗ ಅವನೊಂದಿಗಿದ್ದು, ಚಿತ್ರರಚನಾ ವಿಧಾನ ಮತ್ತು ತಾಂತ್ರಿಕತೆಯನ್ನು ಅರಿಯಲು ಕೇಶವಯ್ಯನವರಿಗೆ ಮಹಾರಾಜರು ತಿಳಿಸಿದ್ದರು. ಅಂತೆಯೇ ಕೇಶವಯ್ಯ ರವಿವರ್ಮ ಚಿತ್ರಿಸುವಾಗ ಅವನೊಂದಿಗೆ ಸಹಾಯಕರಾಗಿ ಕೆಲಸ ಮಾಡಿದರು. ಅವನ ಚಿತ್ರರಚನಾ ವಿಧಾನ-ತಂತ್ರಾಂಶಗಳನ್ನೆಲ್ಲಾ ಸೂಕ್ಷ್ಮವಾಗಿ ಗಮನಿಸಿ ಅವನ್ನು ಕರಗತ ಮಾಡಿಕೊಂಡರು. ಆನಂತರ ರವಿವರ್ಮನ ಮಾದರಿಯಲ್ಲೇ ಇಂಡೋ-ಯೂರೋಪಿಯನ್ ಶೈಲಿಯಲ್ಲಿ ಮಹಾರಾಜರ ಹಲವಾರು ಚಿತ್ರಗಳನ್ನು ರಚಿಸಿ ಅವರಿಂದ ಪ್ರಶಂಸೆ ಪಡೆದರು. ಜೊತೆಗೆ ಮದ್ರಾಸ್, ಮುಂಬಯಿ, ಕಲ್ಕತ್ತಾ, ಮೈಸೂರು ದಸರಾ ಮುಂತಾದೆಡೆ ದೇಶಾದ್ಯಂತ ನಡೆದ ಹಲವಾರು ಕಲಾಪ್ರದರ್ಶನಗಳಲ್ಲಿ ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸಿ ಜನಮೆಚ್ಚುಗೆಯನ್ನು, ಶಾಲುಜೋಡಿ, ಸುವರ್ಣಕಂಕಣ, ಪದಕಗಳು ಮತ್ತು ಪ್ರಶಸ್ತಿಪತ್ರಗಳನ್ನು ಲೆಕ್ಕವಿಲ್ಲದಷ್ಟು ಪಡೆದರು.[೬]



ರಾಜಾ ರವಿವರ್ಮ

*Raja Ravi Varma*

## ದಸರಾ ಪ್ಯಾನೆಲ್‌ಗಳು

ಮೈಸೂರು ಅರಮನೆಯಲ್ಲಿ ಚಿನ್ನದ ಅಂಬಾರಿ ಮತ್ತು ಚಿನ್ನದ ಸಿಂಹಾಸನದಂತೆ ನೋಡಲೇಬೇಕಾದ ಇನ್ನೊಂದು ವೈಶಿಷ್ಟ್ಯವೆಂದರೆ ದಸರಾ ಮೆರವಣಿಗೆಯ ಕ್ಯಾನ್‌ವಾಸ್ ಪೈಂಟಿಂಗ್‌ಗಳ ಪ್ಯಾನೆಲ್‌ಗಳು. ಅರಮನೆಯ ಕಲ್ಯಾಣಮಂಟಪಕ್ಕೆ ತೆರಳುವ ದಾರಿಯಲ್ಲಿರುವ ಈ ಭಿತ್ತಿಚಿತ್ರಗಳು ಗತಕಾಲದ ದಸರಾ ವೈಭವವನ್ನು ನೆನಪಿಗೆ ತರುವ ಅಪೂರ್ವ ಕಲಾಕೃತಿಗಳು. ಸುಂದರ ಛಾಯಾಚಿತ್ರಗಳ ರೀತಿಯಲ್ಲಿ ಒಪ್ಪಓರಣವಾಗಿ ಮೂಡಿಬಂದಿರುವ ಈ ಭಿತ್ತಿಚಿತ್ರ ಪ್ಯಾನೆಲ್‌ಗಳನ್ನು ಕ್ಯಾನ್‌ವಾಸ್ ಮೇಲೆ ರಚಿಸಿ, ಆನಂತರ ಗೋಡೆಗೆ ಅಂಟಿಸಲಾಗಿದೆ.

---

೫. ಈ ಮೊದಲು ೧೮೮೪ರಲ್ಲಿ ೧೦ನೇ ಚಾಮರಾಜ ಒಡೆಯರ ಕಾಲದಲ್ಲಿ ರವಿವರ್ಮನು ಒಮ್ಮೆ ಮೈಸೂರಿಗೆ ಭೇಟಿ ನೀಡಿದ್ದು, ೧೮೮೫ರ ಹೊತ್ತಿಗೆ ಅವರ ಅಪೇಕ್ಷೆಯ ಮೇರೆಗೆ ರಾಜಕುಟುಂಬದವರ ಎರಡು ಭಾವಚಿತ್ರಗಳನ್ನು ಚಿತ್ರಿಸಿಕೊಟ್ಟಿದ್ದನು.

6. Selections from the Records of the Mysore palace, Divisional Archives Office, Mysore, 1993.




ದಸರಾ ಮೆರವಣಿಗೆಗೆ ಸಂಬಂಧಿಸಿದಂತೆ ಇಲ್ಲಿ ಒಟ್ಟು ೨೬ ಪ್ಯಾನೆಲ್‌ಗಳಿದ್ದು, ದಸರಾ ಮೆರವಣಿಗೆಯ ಛಾಯಾಚಿತ್ರಗಳ ಆಧಾರದ ಮೇಲೆ ಇವುಗಳನ್ನು ೧೯೩೪ರಿಂದ ೧೯೪೫ರ ನಡುವಿನ ಅವಧಿಯಲ್ಲಿ ರಚಿಸಲಾಗಿದೆ. ಅಂದರೆ ನಾಲ್ವಡಿಯವರ ಕಾಲದಲ್ಲಿ ಆರಂಭಗೊಂಡು ಜಯಚಾಮರಾಜೇಂದ್ರ ಒಡೆಯರ ಕಾಲಾವಧಿಯಲ್ಲಿ ಮುಕ್ತಾಯಗೊಂಡಿತು. ಇವುಗಳನ್ನು ರಚಿಸಿದ ಕಲಾವಿದರುಗಳೆಂದರೆ ಅಂದಿಗೆ ಖ್ಯಾತನಾಮರಾಗಿದ್ದ ಕಲಾಗುರು ಕೆ. ಕೇಶವಯ್ಯ, ಎಸ್.ಎನ್. ಸ್ವಾಮಿ, ವೈ. ನಾಗರಾಜು, ವೈ. ಸುಬ್ರಹ್ಮಣ್ಯರಾಜು, ಎಸ್. ಶಂಕರರಾಜು, ಎಸ್. ನಂಜುಂಡಸ್ವಾಮಿ ಮತ್ತು ಎಸ್.ಆರ್. ಅಯ್ಯಂಗಾರ್ ಅವರುಗಳು.

ಇವುಗಳ ರಚನೆಯ ಹೊತ್ತಿಗೆ ಕೇಶವಯ್ಯನವರು ಚಾಮರಾಜೇಂದ್ರ ತಾಂತ್ರಿಕ ಕಲಾಶಾಲೆಯಿಂದ ನಿವೃತ್ತರಾಗಿ (೧೯೩೩) ಅರಮನೆಯ ಮುಖ್ಯ ಕಲಾವಿದರಾಗಿ ಸೇವೆಸಲ್ಲಿಸುತ್ತಿದ್ದರು. ಮಹಾರಾಜರು ಹಿರಿಯರಾದ ಕೇಶವಯ್ಯನವರನ್ನೇ ದಸರಾ ಮೆರವಣಿಗೆಯ ಪ್ಯಾನೆಲ್‌ಗಳ ರಚನೆಯ ಉಸ್ತುವಾರಿ ನೋಡಿಕೊಳ್ಳುವಂತೆ ನೇಮಿಸಿದರು. ಕೇಶವಯ್ಯ ಮುಂದಾಳತ್ವದ ಜೊತೆಗೆ ಸ್ವತಃ ತಾವು ಕೂಡ ಎರಡು ದೊಡ್ಡ ಮತ್ತು ಎರಡು ಚಿಕ್ಕ ಪ್ಯಾನೆಲ್‌ಗಳನ್ನು ರಚಿಸಿರುವರು. ಅವೆಂದರೆ:

| | |
|---|---|
| ೧. ಪ್ಯಾನೆಲ್ ನಂ. ೧ | ವಿವಿಧ ವರ್ಗದ ಸೈನ್ಯಾಧಿಕಾರಿಗಳು ಒಂಟೆ ಮತ್ತು ಆನೆಯ ಮೇಲೆ ಸವಾರಿ ಹೊರಟಿರುವುದು. |
| ೨. ಪ್ಯಾನೆಲ್ ನಂ. ೩ | ಸಂತ ಫಿಲೋಮಿನಾ ಚರ್ಚ್‌ನ ಹೊರಗಡೆ ಸಾಗುತ್ತಿರುವ ದಸರಾ ಮೆರವಣಿಗೆ. |

*ದಸರಾ ಪ್ಯಾನೆಲ್ ನಂ. ೧*
*೧೩ x ೭೧/₂, ತೈಲವರ್ಣ*
*ಸಂಗ್ರಹ: ಮುಖ್ಯ ಅರಮನೆ.*

***Dasara Panel No. 1***
*13 x 7 1/2, Oil*
*Collection: Main Palace.*



೩. ಪ್ಯಾನೆಲ್ ನಂ. ೧೪ ಅರಮನೆಯ ದರ್ಬಾರಿಗಳು, ವಿದ್ವಾಂಸರು ಮತ್ತು ಸಮಾಜ ಸೇವಕರ ಸಮೂಹ.

೪. ಪ್ಯಾನೆಲ್ ನಂ. ೧೯ ಅರಮನೆ ಆವರಣದಲ್ಲಿ ಸಾಲಂಕೃತ ಅಂಬಾರಿ ಆನೆಯ ಮೇಲೆ ಮಹಾರಾಜರು.

ಈ ಎಲ್ಲಾ ಭಿತ್ತಿಚಿತ್ರಗಳ ವಿಶೇಷವೆಂದರೆ ಇವುಗಳಲ್ಲಿರುವ ವ್ಯಕ್ತಿಗಳನ್ನು ಸುಲಭವಾಗಿ ಗುರುತಿಸಬಹುದು. ಅಂದರೆ ಇವರಾರೂ ಕಾಲ್ಪನಿಕ ವ್ಯಕ್ತಿಗಳಲ್ಲ. ಅಂದು ಬದುಕಿ ಬಾಳಿದವರೇ ಆಗಿದ್ದಾರೆ.

ಕಲ್ಯಾಣ ಮಂಟಪಕ್ಕೆ ತೆರಳುವ ದ್ವಾರದ ಇಕ್ಕೆಲಗಳಲ್ಲಿರುವ ಮೊದಲನೆಯ ಪ್ಯಾನೆಲ್ ಕೇಶವಯ್ಯನವರಿಂದ ೧೯೩೪ರಲ್ಲಿ ರಚನೆಗೊಂಡಿದ್ದು, ಅದರಲ್ಲಿ ವಿವಿಧ ವರ್ಗದ ಸೈನ್ಯಾಧಿಕಾರಿಗಳು ಒಂಟೆ ಮತ್ತು ಆನೆಯ ಮೇಲೆ ಸವಾರಿ ಹೊರಟಿರುವುದನ್ನು ಕಾಣಬಹುದು. ಒಂಟೆಯ ಮುಂಗಡೆ ನಿಂತವ್ಯಕ್ತಿ ದಫೇದಾರ್ ಮಹಮದ್ ಸಾಬ್ ಎಂದೂ, ಮೇಲೆ ಕುಳಿತವರು ಸಯ್ಯದ್ ಉಸ್ಮಾನ್ ಮತ್ತು ಚಿಕ್ಕಹುಚ್ಚ ಹಾಗೂ ಒಂಟೆಯ ಬಳಿ ನಿಂತಿರುವವನು ಗಫಾರ್ ಸಾಬ್ ಎಂದು ಸುಲಭವಾಗಿ ಗುರುತಿಸಿಬಿಡಬಹುದು. ಮೆರವಣಿಗೆಯನ್ನು ವೀಕ್ಷಿಸುತ್ತಿರುವ ಜನಸಮೂಹದ ವರ್ತನೆ ಸಹಜವಾಗಿದೆ. ಹಿನ್ನೆಲೆಯಲ್ಲಿ ದೂರದಲ್ಲಿ ಕಟ್ಟಡ, ಮರಗಿಡಗಳನ್ನು ತೆಳುವಾಗಿ ಚಿತ್ರಿಸಿ ದೂರದ ಕಲ್ಪನೆಯನ್ನು ರೂಪಿಸಿದ್ದಾರೆ.

*ದಸರಾ ಪ್ಯಾನೆಲ್ ನಂ. ೩*
*೧೩ x ೭೧/೨, ತೈಲವರ್ಣ*
*ಸಂಗ್ರಹ: ಮುಖ್ಯ ಅರಮನೆ.*

***Dasara Panel No. 3***
*13 x 7 1/2, Oil*
*Collection: Main Palace.*



ಕೆಂಪನಂಜಮ್ಮಣ್ಣಿಯವರು
ಬಣ್ಣದ ಛಾಯಾಚಿತ್ರ
ಸಂಗ್ರಹ: ಕೆ.ಎನ್. ರಾಜು, ಬೆಂ.

**Kempananjammanni**
*Color Photograph*
*Collection: K.N. Raju, B'lore.*

ಸೈಂಟ್ ಫಿಲೋಮಿನಾ ಚರ್ಚ್‌ನ ಮುಂದಿನ ಅಶೋಕ ರಸ್ತೆಯಲ್ಲಿ ಸಾಗುತ್ತಿರುವ ದಸರಾ ಮೆರವಣಿಗೆಯ ದೃಶ್ಯ (ಪ್ಯಾನೆಲ್ ಮೂರು) ೧೩ x ೭೧/೨ ಅಡಿ ದೊಡ್ಡದಾಗಿದ್ದು, ಕೇಶವಯ್ಯನವರ ಕೈಚಳಕಕ್ಕೆ ಹಿಡಿದ ಕನ್ನಡಿಯಾಗಿದೆ. ಅಲಂಕೃತ ಕಂದುಬಣ್ಣದ ಕುದುರೆಯ ಮೇಲೆ ಕುಳಿತು ಬರುತ್ತಿರುವ ಸವಾರರು ಹಾಗೂ ಈ ದೃಶ್ಯವನ್ನು ನೋಡುತ್ತಿರುವ ಜನಸಮೂಹದಲ್ಲಿ ಪ್ರತಿಯೊಬ್ಬರನ್ನು ಗುರುತಿಸಬಹುದು. ಮಹಾರಾಜರನ್ನು ಗೌರವಿಸಲು ಚರ್ಚ್‌ನ ಮುಂಗಡೆ ಮತ್ತು ಕಾಂಪೌಂಡ್‌ನ ಒಳಗೆ ಕ್ರಿಶ್ಚಿಯನ್ ಸಮುದಾಯದವರು ಕಾದು ನಿಂತಿದ್ದಾರೆ. ಚರ್ಚ್‌ನ ಹೊರಗೆ ಗೇಟಿನ ಮೇಲಿನ ಫಲಕದಲ್ಲಿ 'ದೇವರು ಮಹಾರಾಜರನ್ನು ಹರಸಲಿ' (GOD BLESS OUR MAHARAJAH) ಎಂಬ ಬರಹವನ್ನು ಚಿತ್ರಿಸಿ ಕೇಶವಯ್ಯ ತಮ್ಮ ಧರ್ಮ ಸಮನ್ವತೆಯ ಒಲವಿಗೆ ಜಾಗಮಾಡಿದ್ದಾರೆ. ಇದಕ್ಕೆ ಪೂರಕವಾಗಿ ಕೇಶವಯ್ಯನವರು ಒಂದು ರೀತಿಯ ಭಾವನಾತ್ಮಕ ಪರಿಸರದ ಪರಿಣಾಮವನ್ನು ಬಿಂಬಿಸಲು ಯತ್ನಿಸಿದ್ದಾರೆ. ಕುದುರೆ ಮೇಲೆ ಕುಳಿತ ಸವಾರರು ಮತ್ತು ಅದನ್ನು ವೀಕ್ಷಿಸುತ್ತಿರುವ ಜನರಲ್ಲಿ ಒಂದು ಬಗೆಯ ಶಿಸ್ತು ಎದ್ದುಕಾಣುತ್ತದೆ. ಇಡೀ ಚಿತ್ರದಲ್ಲಿನ ನೆರಳು-ಬೆಳಕಿನಿಂದಲೇ ಸಂಜೆ ೪.೩೦ ರಿಂದ ೫.೦೦ ಗಂಟೆಯಾಗಿದೆಯೆಂದು ಹೇಳಿಬಿಡಬಹುದು. ಮಹಡಿಯ ಮೇಲೆ ನಿಂತು ಮೆರವಣಿಗೆ ನೋಡುತ್ತಿರುವ ಸ್ಥಳೀಯ ಸ್ತ್ರೀಯರು ಮತ್ತು ಮಕ್ಕಳು, ಹಿನ್ನೆಲೆಯಲ್ಲಿ ಇನ್ನೊಂದು ಚರ್ಚ್, ಕ್ರಿಶ್ಚಿಯನ್ ಶಾಲೆ, ಉದ್ದನೆಯ ರಸ್ತೆ, ಕುದುರೆಯ ಟಾಂಗಾಗಾಡಿ, ವೃತ್ತದಲ್ಲಿ ಕಪ್ಪು, ಕಂದು ಮತ್ತು ಬೆಳ್ಳಿಯ ಬಣ್ಣದ ಕಾರುಗಳು, ಅವುಗಳ ಪಕ್ಕದಲ್ಲೇ ಉದ್ದನೆಯ ಬೆಳ್ಳಿಯ ಬಣ್ಣದ ಬೀದಿಯ ದೀಪಸ್ತಂಭ, ದೂರದಲ್ಲಿ ಮರಗಿಡಗಳು, ಅವುಗಳ ನೆರಳು-ಬೆಳಕು ಇತ್ಯಾದಿ ಎಲ್ಲವೂ ಛಾಯಾಚಿತ್ರ ತೆಗೆದಂತೆ ನೈಜವಾಗಿ ಮೂಡಿಬಂದಿದೆ. ಒಟ್ಟಾರೆ ಇದೊಂದು ಉತ್ತಮ ಸಂಯೋಜನಾ ಚಿತ್ರವಾಗಿದ್ದು, ನೆರಳು-ಬೆಳಕನ್ನು, ಹಿನ್ನೆಲೆಯ ನಿಸರ್ಗವನ್ನು ಕೇಶವಯ್ಯ ಸಂದರ್ಭೋಚಿತವಾಗಿ ದುಡಿಸಿಕೊಂಡಿದ್ದಾರೆ.


ಹದಿನಾಲ್ಕನೇ ಪ್ಯಾನೆಲ್‌ನಲ್ಲಿ ಏಕರೂಪದ ಸಮವಸ್ತ್ರದಂತೆ ತಲೆಗೆ ಮೈಸೂರುಪೇಟ, ಕಪ್ಪನೆಯ ಉದ್ದಕೋಟು, ಬಿಳಿಯ ಪ್ಯಾಂಟ್, ಕಾಲಿಗೆ ಮಿರಮಿರ ಮಿಂಚುವ ಕಪ್ಪು ಷೂ, ಸೊಂಟಕ್ಕೆ ರೇಷ್ಮೆಯ ಜರತಾರಿ ಪಟ್ಟಿಯನ್ನು ಬೆಲ್ಟಿನಂತೆ ಬಿಗಿದುಕೊಂಡಿರುವ (ದರ್ಬಾರು ಉಡುಪಿನಲ್ಲಿರುವ) ಅಂದಿನ ಹಿರಿಯ ಸಾಹಿತಿಗಳು, ಸಂಗೀತ ಕಲಾವಿದರು, ಚಿತ್ರಶಿಲ್ಪ ಕಲಾವಿದರು, ಸಮಾಜ ಸೇವಕರು, ವಿವಿಧ ವರ್ಗದ ಅಧಿಕಾರಿಗಳು ಮುಂತಾದ ಅರಮನೆಯ ದರ್ಬಾರಿಗಳನ್ನು ಕಾಣಬಹುದು. ಅಂದು ಇವರೆಲ್ಲಾ ದಸರಾ ಮೆರವಣಿಗೆಯ ಭಾಗವಾಗಿದ್ದರು. ಮುಖ್ಯವಾಗಿ ಈ ಚಿತ್ರದಲ್ಲಿ ವೈಣಿಕ ಶಿಖಾಮಣಿ ವೀಣೆ ಶೇಷಣ್ಣ, ಗಾನ ವಿಶಾರದ ಬಿಡಾರಾಂ ಕೃಷ್ಣಪ್ಪ, ಧರ್ಮಪ್ರಕಾಶ ಡಿ. ಬನುಮಯ್ಯ, ರಾಜಸೇವಾಸಕ್ತ ಡಾ. ಎನ್. ರಂಗಾಚಾರ್ ಮುಂತಾದವರನ್ನು ಗುರುತಿಸಬಹುದು. ವಾಸ್ತವಿಕವಾಗಿ ಇವರನ್ನೆಲ್ಲಾ ಹೀಗೆ ಒಟ್ಟಿಗೇ ಕಲೆಹಾಕುವುದು ದುಸ್ಸಾಧ್ಯವೇ ಆಗಿತ್ತು. ಆದರೆ ಕೇಶವಯ್ಯ ಇವರುಗಳ ಛಾಯಾಚಿತ್ರ



ಬಳಸಿಕೊಂಡು, ಅವರೆಲ್ಲಾ ಹೀಗೆ ಒಟ್ಟಿಗೇ ನಿಂತು ದಸರಾ ಮೆರವಣಿಗೆಯನ್ನು ನೋಡುತ್ತಿರುವಂತೆ ಚಿತ್ರಿಸಿರುವುದು ಅವರ ಸೃಜನಶೀಲ ಮನಸ್ಸಿಗೆ ಸಾಕ್ಷಿಯಾಗಿ ನಿಲ್ಲುತ್ತದೆ. ವೀಣೆ ಶೇಷಣ್ಣನವರ ಹಿಂಗಡೆ ಸ್ವತಃ ತಮ್ಮ ಪುತ್ರ ಸಿ.ವಿ. ಕೃಷ್ಣಸ್ವಾಮಿಯನ್ನು ಚಿತ್ರಿಸಿರುವುದು ಕುಟುಂಬದವರ ಮೇಲೆ ಅವರಿಗಿದ್ದ ಪ್ರೀತಿಯನ್ನು, ಕುಟುಂಬದವರನ್ನು ತಮ್ಮ ಚಿತ್ರಗಳಲ್ಲಿ ಎಲ್ಲಾದರೂ ಬಿಂಬಿಸಬೇಕೆಂಬ ಪ್ರಬಲ ಹಂಬಲವನ್ನು ಪ್ರಕಟಿಸುತ್ತದೆ. ಇದಕ್ಕೆ ಇನ್ನೊಂದು ಉದಾಹರಣೆಯಾಗಿ ಚರ್ಚ್‌ನ ಮುಂದಿನ ಅಶೋಕ ರಸ್ತೆಯಲ್ಲಿ ಸಾಗುತ್ತಿರುವ ದಸರಾ ಮೆರವಣಿಗೆಯ ಪ್ಯಾನೆಲ್‌ನ ಬಲಮೂಲೆಯಲ್ಲಿ ಕೇಶವಯ್ಯನವರ ಶ್ರೀಮತಿ ಮತ್ತು ಮೊಮ್ಮಗಳನ್ನು ಚಿತ್ರಿಸಿರುವುದನ್ನು ನೋಡಬಹುದು. ಹಿನ್ನೆಲೆಯಲ್ಲಿ ಬೀದಿಯಲ್ಲಿನ ಮಹಡಿ ಮನೆಗಳನ್ನು, ಅಲ್ಲಿಂದ ದಸರಾ ಮೆರವಣಿಗೆಯನ್ನು ವೀಕ್ಷಿಸುತ್ತಿರುವ ಜನರನ್ನು ತಾದ್ರೂಪಿಕವಾಗಿ ಚಿತ್ರಿಸಿದ್ದಾರೆ. ಮೈಸೂರಿನಲ್ಲಿ ಇಂದಿಗೂ ಈ ಮನೆಗಳನ್ನು ಕಾಣಬಹುದಾಗಿದೆ.

ಹತ್ತೊಂಬತ್ತನೇ ಪ್ಯಾನೆಲ್‌ನಲ್ಲಿ ಕೇಶವಯ್ಯನವರು ಹೇಗೆ ಅತಿ ಸೂಕ್ಷ್ಮ ವಿವರಗಳಿಗೆ ಒಲಿದ ಕಲಾವಿದರೆಂಬುದು ಎತ್ತಿಕಾಣುತ್ತದೆ. ಅರಮನೆಯ ಮುಂಭಾಗದಿಂದ ಹೊರಟ ಸಾಲಂಕೃತ ಆನೆಯ ಮೇಲೆ ಚಿನ್ನದ ಅಂಬಾರಿಯಲ್ಲಿ ಕುಳಿತ ಮಹಾರಾಜರ ಚಿತ್ರ ಇಲ್ಲಿ ರಮ್ಯವಾಗಿ ಮೂಡಿಬಂದಿದೆ. ೧೯೪೧ರಲ್ಲಿ ರಚಿಸಲ್ಪಟ್ಟ ಈ ಕೃತಿಯಲ್ಲಿ ಜಯಚಾಮರಾಜ ಒಡೆಯರು, ನಾಲ್ವಡಿ ಕೃಷ್ಣರಾಜ ಒಡೆಯರು ಹಾಗೂ ಅವರ ಸಹೋದರ, ಯುವರಾಜರಾದ ನರಸಿಂಹರಾಜ ಒಡೆಯರು ಚಿನ್ನದ ಅಂಬಾರಿಯಲ್ಲಿ ಕುಳಿತಿದ್ದು, ದಸರಾ ಮೆರವಣಿಗೆ ಇಲ್ಲಿಂದ

*ದಸರಾ ಪ್ಯಾನೆಲ್ ನಂ. ೧೯, ೧೩ x ೭೧/೨*
*ತೈಲವರ್ಣ, ಸಂಗ್ರಹ: ಮುಖ್ಯ ಅರಮನೆ.*
***Dasara Panel No. 19, 13 x 7 1/2***
*Oil, Collection: Main Palace.*



K. Kesavayya, Palace Artist
1486 Sayoji Rao Road. Mandi Mohalla
Mysore.

I solemnly affirm that I have spent a heavy sum of more than Rs 2000/- (Rupees two thousand) on repairs and amenities to my house Door No 2807 situated at II^nd Cross Road, Vani Vilas Mohalla, Mysore and owned by me, since I purchased it in 1943 and provided facilities to the Tenants thereby.

Mysore K. Kesavayya
21-7-1949

ಕೇಶವಯ್ಯನವರ ಕೈಬರಹ

*Keshavayya's Handwriting*

ಮೊದಲಾಗುತ್ತದೆ. ಹಿನ್ನೆಲೆಯಲ್ಲಿ ಮೆರವಣಿಗೆ ವೀಕ್ಷಿಸಲು ಬಂದಿರುವ ಸಾವಿರಾರು ಜನರು, ಅರಮನೆ ಕೋಟೆಯ ದ್ವಾರಗಳು, ಅರಮನೆ ಆವರಣದಲ್ಲೇ ಇರುವ ದೇವಾಲಯಗಳ ಗೋಪುರಗಳು, ಚಾಮುಂಡಿಬೆಟ್ಟ, ಅದರಲ್ಲಿನ ರಸ್ತೆ, ಬೆಟ್ಟದ ಮೇಲಿನ ದೇಗುಲದ ಗೋಪುರ, ಬೆಟ್ಟದ ರಾಜೇಂದ್ರ ಅರಮನೆ, ಮೆರವಣಿಗೆಯ ಇಕ್ಕೆಲಗಳಲ್ಲಿನ ಸಾಲುದೀಪ ಸ್ತಂಭಗಳು, ಅಲಂಕೃತ ಪಟ್ಟಿ, ಅಂಬಾರಿ ಹೊತ್ತ ಆನೆಯ ಮೇಲಿನ ಜರತಾರಿ ಬಟ್ಟೆ, ಅದರ ಚಿನ್ನದ ಬಣ್ಣದ ಮುಖವಾಡ, ಚಿನ್ನದ ಅಂಬಾರಿ, ಯೋಧರು ಹಿಡಿದ ವಿವಿಧ ಬಗೆಯ (ಗಂಡಭೇರುಂಡ, ಹನುಮಂತ, ಶಂಖ, ಯಾಳಿ, ಮೀನು ಇತ್ಯಾದಿ) ಭರ್ಜಿಬತ್ತಳಿಕೆಗಳು, ಆನೆಯ ಮುಂಗಡೆ ಚೆಲ್ಲಿರುವ ನಾನಾ ಬಗೆಯ ಹೂಗಳು - ಹೀಗೆ ಸಮಸ್ತ ವಿವರಗಳನ್ನೂ ಸೂಕ್ಷ್ಮವಾಗಿ ಬಿಡಿಸುತ್ತ ಚಿತ್ರಿಸಲಾಗಿದೆ. ಆನೆಯ ಎಡಕ್ಕೆ ಎಲ್ಲಕ್ಕೂ ಹಿಂಗಡೆ ಕಂದುಬಣ್ಣದ ಕುದುರೆಯ ಮೇಲೆ, ಕೆಂಪನೆಯ ಕೋಟುಧರಿಸಿ ಕುಳಿತಿರುವ ಅಂದಿನ ದಿವಾನರಾಗಿದ್ದ ತಂಬೂಚೆಟ್ಟಿಯವರನ್ನು ಗುರುತಿಸಬಹುದಾಗಿದೆ. ಈ ಕೃತಿಯ ಇನ್ನೊಂದು ವಿಶೇಷವೆಂದರೆ ಸಮಕಾಲೀನ ಕಲಾಕೌಶಲ್ಯವೊಂದರಲ್ಲಿ ಕೇಶವಯ್ಯನವರಿಗಿದ್ದ ಆಸಕ್ತಿ. ಮೂರು ಆಯಾಮಗಳ ಪರಿಣಾಮವನ್ನು ಅವರ ಕಾಲದಲ್ಲಿ ಒಂದು ವಿಶೇಷ ರೀತಿಯಲ್ಲಿ ಗ್ರಹಿಸುವುದು ಸಾಮಾನ್ಯವಾಗಿತ್ತು. ನೋಡುಗ ಕೃತಿಯನ್ನು ಯಾವ ಕಡೆಯಿಂದ ನೋಡಿದರೂ ಅದು ಅವನನ್ನೇ ನೋಡುವ ಹಾಗೆ ಮಾಡುವುದೇ ಈ ಕೌಶಲ್ಯ. ಕೇಶವಯ್ಯನವರ ಈ ಕೃತಿಯಲ್ಲಿ ಆನೆಯು ಹೀಗೆ ನೋಡುಗ ತಿರುಗಿದತ್ತ 'ತಿರುಗುತ್ತದೆ' ಎನ್ನಬಹುದು. ಇದು ಅಂದಿಗೆ ಆಧುನಿಕವೆನಿಸಿದ್ದು, ಎಲ್ಲರನ್ನೂ ಬೆರಗುಗೊಳಿಸಿತ್ತು. ಇದು ಕೂಡ ಒಂದು ಉತ್ತಮ ಸಂಯೋಜನಾ ಚಿತ್ರವಾಗಿದೆ.

## ಇತರೆ ಕಲಾಕೃತಿಗಳು

ಕೇಶವಯ್ಯನವರು ೧೯೦೨ರಲ್ಲಿ ಅರಮನೆಯ ಕಲಾವಿದರಾಗಿ ನೇಮಕಗೊಂಡಂದಿನಿಂದ ೧೯೫೪ರಲ್ಲಿ ಕೊನೆಯುಸಿರೆಳೆಯುವವರೆಗೂ ಸಾವಿರಾರು ಕಲಾಕೃತಿಗಳನ್ನು ಮುಖ್ಯವಾಗಿ ಭಾವಚಿತ್ರಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಸ್ನೇಹಿತರಿಗೆ, ಹಿತೈಷಿಗಳಿಗೆ, ಹೊರರಾಜ್ಯದ ರಾಜರುಗಳಿಗೆ, ಅತಿಥಿಗಳಿಗೆ, ವಿದೇಶಿಯರಿಗೆ ಕಾಣಿಕೆಯಾಗಿ ರಚಿಸಿಕೊಟ್ಟ ಚಿತ್ರಗಳಿಗಂತೂ ಲೆಕ್ಕವಿಲ್ಲ. ಇವರ ಬಹುತೇಕ ಕಲಾಕೃತಿಗಳು ಮೈಸೂರು ಮತ್ತು ಬೆಂಗಳೂರಿನಲ್ಲಿ ಕೇಂದ್ರೀಕೃತವಾಗಿವೆ. ಮೈಸೂರೊಂದರಲ್ಲೇ ಐವತ್ತಕ್ಕೂ ಹೆಚ್ಚಿನ ಕಲಾಕೃತಿಗಳನ್ನು ನೋಡಬಹುದಾಗಿದೆ. ಮೈಸೂರು ಅರಮನೆಯೂ ಸೇರಿದಂತೆ ವಿವಿಧ ಸರ್ಕಾರಿ ಇಲಾಖೆಗಳಲ್ಲಿ ಅವೆಲ್ಲಾ ಚದುರಿಹೋಗಿವೆ. ಅರಮನೆಯ ದಾಖಲೆಗಳಲ್ಲಿ ೧೯೦೨ರಿಂದ ೧೯೧೭ರವರೆಗೆ ಕೇಶವಯ್ಯ ಕಾಲದಿಂದ ಕಾಲಕ್ಕೆ ರಚಿಸಿದ ಕಲಾಕೃತಿಗಳ ಒಂದು ದೊಡ್ಡಪಟ್ಟಿಯೇ ದೊರೆಯುತ್ತದೆ. ಅದರಂತೆ ಅವರು ರಚಿಸಿದ ಕಲಾಕೃತಿಗಳೆಂದರೆ :

೧೯೦೮ ಶ್ರೀ ಬಸವಲಿಂಗಪ್ಪನವರ ಜಲವರ್ಣ ಕಲಾಕೃತಿ

೧೯೦೮ ಶ್ರೀ ಶಾಮರಾವ್‌ರವರ ಜಲವರ್ಣ ಕಲಾಕೃತಿ

೧೯೦೯ ಶ್ರೀ ಬಸಪ್ಪಾಜಿ ಅರಸ್‌ರವರ ತೈಲವರ್ಣ ಕೃತಿ

೧೯೦೯ ಡಾ. ಕ್ಯಾಂಬೆಲ್‌ರವರ ಕೃತಿ - ತೈಲವರ್ಣ

೧೯೦೯ ದಿ. ಚಾಮರಾಜ ಒಡೆಯರ ದೊಡ್ಡದಾದ ಬಣ್ಣದ ಛಾಯಾಚಿತ್ರ

೧೯೧೦ ನಾಲ್ವಡಿಯವರು ಬೇಟೆಯಾಡುತ್ತಿರುವ ಕೃತಿ - ತೈಲವರ್ಣ

೧೯೧೦ ದಿ. ಕೃಷ್ಣರಾಜ ಒಡೆಯರ ಭಾವಚಿತ್ರ - ತೈಲವರ್ಣ

೧೯೧೧ ದಿ. ಕೃಷ್ಣರಾಜ ಒಡೆಯರ್ ಅವರು ದರ್ಬಾರಿನಲ್ಲಿರುವ ತೈಲಚಿತ್ರ

೧೯೧೧ ಮಹಾರಾಜರ ಇಂಗ್ಲೀಷ್ ಬ್ಯಾಂಡ್‌ನವರ ಚಿತ್ರ

೧೯೧೨ ಸಿದ್ದಿವಲ್ ರಾಯಣ್ಣನ ಜಲವರ್ಣ ಕೃತಿ

೧೯೧೩ ಶ್ರೀ ವೆಂಕಟರಮಣಯ್ಯನವರ ಛಾಯಾಚಿತ್ರಕ್ಕೆ ಬಣ್ಣದ ಲೇಪನ

೧೯೧೩ ಚಿಕ್ಕದಾದ ಭೂದೃಶ್ಯ ಕೃತಿ

೧೯೧೩ ಮಹಾರಾಜರ ಮೂರು ಛಾಯಾಚಿತ್ರಗಳಿಗೆ ಬಣ್ಣದ ಲೇಪನ

೧೯೧೩ ಶ್ರೀ ಜೆ.ಆರ್. ರೊಯ್ಲೆ ಅವರ ತೈಲವರ್ಣ ಕೃತಿ

೧೯೦೨ ಧ್ವಜ, ಸೈನಿಕರು, ಕುದುರೆಗಳು ಮತ್ತಿತರ ಚಿಕ್ಕದಾದ ವಿವಿಧ ಕಾಲದಲ್ಲಿ ರಚಿಸಿದ ರೇಖಾಚಿತ್ರಗಳು

ದಿ. ತಂಬೂಚಿಟ್ಟಿಯವರ ಎರಡು ಇದ್ದಿಲುಕಡ್ಡಿಯ ಚಿತ್ರಗಳು.

ಕೃಷ್ಣವಿಲಾಸಕ್ಕೆ ಶ್ರೀಕೃಷ್ಣನ ಕಲಾಕೃತಿ

ಅಂಗರಕ್ಷಕ ದಳ, ಓಲೆಕಾರರು ಮತ್ತು ಪೊಲೀಸ್ ಗುಮಾಸ್ತರ ಕಲಾಕೃತಿಗಳು

ಎರಡು ದೊಡ್ಡ ರೈಲ್ವೆಗಾಡಿಗಳ ಕಲಾಕೃತಿ

ದರ್ಬಾರ್ ಭಕ್ಷಿಗಳಿರುವ ಛಾಯಾಚಿತ್ರಕ್ಕೆ ಬಣ್ಣದ ಲೇಪನ

ಇವಲ್ಲದೆ ದುರಸ್ತಿ ಮಾಡಿರುವ ಕಲಾಕೃತಿಗಳಿಗಂತೂ ಲೆಕ್ಕವೇ ಇಲ್ಲ. ಆದರೆ ದುರಾದೃಷ್ಟವಶಾತ್ ಇಂದು ಈ ಕೃತಿಗಳೆಲ್ಲಾ ಎಲ್ಲಿವೆಯೋ ತಿಳಿಯದು.

ಮೈಸೂರಿನ ಮುಖ್ಯ ಅರಮನೆಯ ಪಕ್ಕದಲ್ಲಿರುವ ಮಹಾರಾಜರ ಅಧೀನದಲ್ಲಿರುವ ರೆಸಿಡೆನ್ಷಿಯಲ್ ಮ್ಯೂಸಿಯಂನಲ್ಲಿ ಕೇಶವಯ್ಯನವರು ರಚಿಸಿದ ಐದು ಕಲಾಕೃತಿಗಳಿವೆ. ಅವುಗಳಲ್ಲಿ ಒಂದು ಜಯಚಾಮರಾಜ ಒಡೆಯರ್ ಅವರು ತಮ್ಮ ತಾಯಿ ಮತ್ತು ತಂಗಿಯರೊಂದಿಗಿರುವ ೧೯೩೦ರಲ್ಲಿ ರಚಿಸಿದ ಚಿತ್ರ. ಕಪ್ಪುಬಿಳುಪಿನ ಛಾಯಾಚಿತ್ರಕ್ಕೆ ಬಣ್ಣದ ಲೇಪನ ಮಾಡಿರುವ ಈ ಕೃತಿಯಲ್ಲಿ ಒಡೆಯರು ಮತ್ತು ಅವರ ತಾಯಿ ಕುರ್ಚಿಯಲ್ಲಿ ಕುಳಿತಿದ್ದರೆ, ತಂಗಿಯರು ಹಿಂಗಡೆ ಮತ್ತು ಪಕ್ಕದಲ್ಲಿ ನಿಂತಿದ್ದಾರೆ. ರಾಜರು ಕಪ್ಪನೆಯ ಉದ್ದಕೋಟು, ಬಿಗಿಯಾದ, ಮೈಗಂಟುವ ಬಿಳಿಪ್ಯಾಂಟು ಹಾಗೂ ಕಪ್ಪನೆಯ ಷೂ ತೊಟ್ಟಿದ್ದಾರೆ. ಎಡಗೈಲಿ ಬಂಗಾರದ ಬಣ್ಣದ ವಾಚಿದೆ.



ಡಾ. ಕ್ಯಾಂಬೆಲ್
೧೯೦೯, ತೈಲವರ್ಣ
**Dr. Campbell**
*1909, Oil*



*ಯುವರಾಜ ಶ್ರೀಕಂಠೀರವ ನರಸಿಂಹರಾಜ ಒಡೆಯರು ೧೯೫೦, ಸಂಗ್ರಹ: ರೆಸಿಡೆನ್ಷಿಯಲ್ ಮ್ಯೂಸಿಯಂ.*

*Yuvaraja Srikanteerava Narasimharaja Wodeyar,* 1950
*Collection: Residential Museum.*

೧೯೧೦ರಲ್ಲಿ ರಚಿಸಿರುವ ತೈಲವರ್ಣದ ಇನ್ನೊಂದು ಚಿತ್ರದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ಕೆಂಪನೆಯ ಕೋಟು, ಮೈಸೂರು ಪೇಟ, ಮೊಣಕಾಲವರೆಗಿನ ಷೂ ಧರಿಸಿದ್ದು, ಬಿಳಿಯ ಕುದುರೆಯ ಮೇಲೆ ವಿರಾಜಮಾನರಾಗಿ ಕುಳಿತಿದ್ದಾರೆ. ಕುದುರೆಯ ಕಟ್ಟುಮಸ್ತಾದ ಅಂಗಸೌಷ್ಟವ, ರಾಜರ ಗಾಂಭೀರ್ಯ, ಗತ್ತು ಎಲ್ಲವೂ ಭಾವಮಯವಾಗಿ ರಚಿತವಾಗಿದೆ. ಹಿನ್ನೆಲೆಯಲ್ಲಿ ಸಾಕಷ್ಟು ದೂರಕ್ಕೆ ಚಾಮುಂಡಿಬೆಟ್ಟ ಮತ್ತು ಅರಮನೆಯನ್ನು ಕಾಣಬಹುದು.

ಹಿಂದೆಯೇ ತಿಳಿಸಿದಂತೆ ಕೇಶವಯ್ಯನವರಿಗೆ ರೀಜೆಂಟ್ ಮಹಾರಾಣಿ ಕೆಂಪನಂಜಮ್ಮಣ್ಣಿಯವರನ್ನು ಕಂಡರೆ ಎಲ್ಲಿಲ್ಲದ ಪ್ರೀತಿ. ವಿದ್ಯಾರ್ಥಿವೇತನ ನೀಡಿ ವಿದ್ಯಾಭ್ಯಾಸಕ್ಕೆ ಮದ್ರಾಸ್‌ಗೆ ಕಳುಹಿಸಿದ, ಅಲ್ಲಿಂದ ಬಂದನಂತರ ಅರಮನೆಯ ಕಲಾವಿದನನ್ನಾಗಿ ನೇಮಿಸಿಕೊಂಡ ಮಹಾರಾಣಿಯವರಿಗೆ ಕೇಶವಯ್ಯ ಕೊನೆಯವರೆಗೂ ಪ್ರೀತಿಪಾತ್ರರಾಗಿಯೇ ಇದ್ದರು. ಕೇಶವಯ್ಯನವರು ಹೆಚ್ಚಿನ ಭಾವಚಿತ್ರ ರಚಿಸಿರುವುದು ಬಹುಶಃ ರೀಜೆಂಟ್ ಮಹಾರಾಣಿಯವರದೆಂದೇ ತೋರುತ್ತದೆ. ೧೯೨೦ರಲ್ಲಿ ರಚಿಸಿರುವ ತೈಲವರ್ಣದ ಚಿತ್ರದಲ್ಲಿ ಕೆಂಪನಂಜಮ್ಮಣ್ಣಿಯವರು ಚಿನ್ನದ ಸಿಂಹಾಸನದ ಮೇಲೆ ಕುಳಿತಿರುವರು. ಕಾಲಕೆಳಗೆ ಕೆಂಪನೆಯ ಮೆದುಮಣೆಯಿದೆ. ಹಿಂಗಡೆ ನಾಲ್ಕುಕಾಲಿನ ಅಲಂಕರಣದ, ನಾಲ್ಕೈದು ಅಡಿ ಎತ್ತರದ ವಿಕ್ಟೋರಿಯನ್ ಕುರ್ಚಿಯಿದ್ದು, ಅದರ ಮೇಲೆ ಚಾಮರಾಜ ಒಡೆಯರ ಎದೆಮೊಗದ ಪ್ಲಾಸ್ಟರ್ ಆಫ್ ಪ್ಯಾರಿಸ್‌ನ ಶಿಲ್ಪವನ್ನು ಕಾಣಬಹುದು. ಪಕ್ಕದಲ್ಲಿ ಹೂದಾನಿ, ಹಿನ್ನೆಲೆಯಲ್ಲಿ ತೆರೆಯುವ ಬಾಗಿಲಿದೆ.

ಯುವರಾಜ ಶ್ರೀಕಂಠೀರವ ನರಸಿಂಹರಾಜ ಒಡೆಯರ ಮತ್ತೊಂದು ಚಿತ್ರವನ್ನು ೧೯೫೦ರಲ್ಲಿ ರಚಿಸಿದ್ದಾರೆ. ಈ ಚಿತ್ರದಲ್ಲಿ ಯುವರಾಜರು ಅಂಚಿರುವ ಪಂಚೆ ಮತ್ತು ಆಕಾಶ ನೀಲಿಬಣ್ಣದ ಮೇಲುಹೊದಿಕೆಯನ್ನು ತೊಟ್ಟಿದ್ದಾರೆ. ಯಾವುದೋ ದೇವತಾ ಕಾರ್ಯದಲ್ಲಿರುವಂತಿದ್ದಾರೆ. ಹಣೆಯಲ್ಲಿ ಕೆಂಪನೆಯ ಚುಕ್ಕಿಯಿದೆ. ತಲೆಗೆ ಕೆಂಪುಪೇಟ ಧರಿಸಿರುವರು. ಹಿನ್ನೆಲೆಯಲ್ಲಿ ಕೆಂಪನೆಯ ಬಟ್ಟೆಯ ತೆರೆ ಮತ್ತು ಕಂಬವೊಂದನ್ನು ಕಾಣಬಹುದು. ನೆಲಕ್ಕೆ ಚೌಕಾಕಾರದ ಹೆಂಚುಗಳನ್ನು ಹಾಸಿದೆ. ಇನ್ನೊಂದು ಚಿತ್ರ ಜಯಚಾಮರಾಜ ಒಡೆಯರ್ ಅವರದು. ಅದೇ ರೀತಿ ಜಗನ್ಮೋಹನ ಚಿತ್ರಶಾಲೆಯಲ್ಲಿ ಎರಡು ಕಲಾಕೃತಿಗಳಿವೆ. ಎರಡೂ ತೈಲವರ್ಣದವು. ಅವುಗಳಲ್ಲಿ ಒಂದು ಅಂದು ಮೈಸೂರಿನ ದಿವಾನರಾಗಿದ್ದ ಸರ್. ಮಿರ್ಜಾ ಇಸ್ಮಾಯಿಲ್ ಅವರ ನೈಜಪ್ರಮಾಣದ ಚಿತ್ರವಾದರೆ, ಇನ್ನೊಂದು 'ನಿರೀಕ್ಷೆ' ಶೀರ್ಷಿಕೆಯ ಚಿತ್ರ.

ಭಾವಚಿತ್ರ ರಚನೆಯಲ್ಲಿ ಕೇಶವಯ್ಯನವರು ಆಯಾ ವ್ಯಕ್ತಿಯ ವ್ಯಕ್ತಿತ್ವವನ್ನು ಹೇಗೆ ಸೆರೆಹಿಡಿಯಬಲ್ಲರು ಎಂಬುದನ್ನು ಮಿರ್ಜಾ ಇಸ್ಮಾಯಿಲ್ ಅವರು ದರ್ಬಾರು ಉಡುಪಿನಲ್ಲಿರುವ ಭಾವಚಿತ್ರದಲ್ಲಿ ಕಾಣಬಹುದು. ಅದೇ ರೀತಿ ಕೇಶವಯ್ಯನವರು ವಿಭಿನ್ನ ನೋಟ, ವಸ್ತುವಿಶೇಷಗಳನ್ನು ಆಯಾ ಸನ್ನಿವೇಶಕ್ಕೆ ಸರಿಯಾಗಿ ಹೇಗೆ ವ್ಯಾಖ್ಯಾನ ಮಾಡಬಲ್ಲರು ಎಂಬುದಕ್ಕೆ ಅವರ 'ನಿರೀಕ್ಷೆ' ಕೃತಿಯೊಂದು ಒಳ್ಳೆಯ ಉದಾರಣೆಯಾಗಿದೆ.

'ನಿರೀಕ್ಷೆ' ಶೀರ್ಷಿಕೆಯ ಚಿತ್ರ ಮೇಲುನೋಟಕ್ಕೆ ರವಿವರ್ಮನ 'ಧ್ಯಾನಮಗ್ನ' ಕಲಾಕೃತಿಯ ನಕಲೇ ಆಗಿದೆ. ಇದನ್ನು ರವಿವರ್ಮ ೧೯೦೪ರಲ್ಲಿ ಮೈಸೂರಿನಲ್ಲೇ ರಚಿಸಿದ. ಕೇಶವಯ್ಯ ಮಹಾರಾಜರ ಆದೇಶದ ಮೇರೆಗೆ ರವಿವರ್ಮನ ಬಳಿ ಸಹಾಯಕರಾಗಿ ಕಾರ್ಯನಿರ್ವಹಿಸಲು ಬಂದಾಗ ಈ ಚಿತ್ರವನ್ನು ನಕಲು ಮಾಡಲು ಹೇಳಿದನಂತೆ. ಆದರೆ ಕೇಶವಯ್ಯನವರು ಕೆಲವು ಸೂಕ್ಷ್ಮ ಬದಲಾವಣೆಗಳ ಮೂಲಕ ಈ 'ನಕಲಿ'ನಲ್ಲಿ ತಮ್ಮ ಕಲಾತ್ಮಕ ಆಶಯಗಳನ್ನು ಪ್ರಕಟಿಸಿದ್ದಾರೆ. ನಿರಾಶೆಗೊಳಗಾದ ಸ್ತ್ರೀಯೋರ್ವಳು ಇನಿಯನ ಬರುವಿಕೆಯ ನಿರೀಕ್ಷೆಯಲ್ಲಿ ಚಿಂತಾಕ್ರಾಂತಳಾಗಿ ಕುಳಿತಿರುವುದು ಮೂಲಕೃತಿ ಮತ್ತು ನಕಲುಗಳೆರಡರ ಕೇಂದ್ರ. ಆದರೆ ತೆರೆ ಸರಿಸಿದ ಕಿಟಕಿಯಲ್ಲಿ ರವಿವರ್ಮ ಮರವೊಂದನ್ನು ಚಿತ್ರಿಸಿದ್ದರೆ, ಕೇಶವಯ್ಯ ದೂರದಲ್ಲಿ ಭೂದೃಶ್ಯವನ್ನು ರಚಿಸಿದ್ದಾರೆ. ರವಿವರ್ಮ ಯುವತಿಯ ಪಕ್ಕದಲ್ಲಿ ಅಷ್ಟಭುಜದ ಟೀಪಾಯಿಯ ಮೇಲೆ ಹೂದಾನಿ ಮತ್ತು ಪನ್ನೀರುದಾನಿಯನ್ನು ಚಿತ್ರಿಸಿದ್ದರೆ, ಕೇಶವಯ್ಯ ಇದನ್ನು ತೆಗೆದುಹಾಕಿ ವಾತಾವರಣವನ್ನು ಪ್ರೇಯಸಿಯ ದುಗುಡಕ್ಕನುಗುಣವಾಗಿ ಇನ್ನಷ್ಟು ಕಠೋರಗೊಳಿಸಿದ್ದಾರೆ. ಯಥಾವತ್ ಚಿತ್ರಣದಲ್ಲಿ ವಿಶೇಷ ಒಲವಿದ್ದ ಹಾಗಿರುವ ಕೇಶವಯ್ಯನವರ ರಚನಾಕ್ರಮದಲ್ಲಿ ವ್ಯಕ್ತಿನಿಷ್ಠ ವ್ಯಾಖ್ಯಾನವೂ ಹೇಗೆ ಮನೆಮಾಡಿದೆಯೆಂಬುದಕ್ಕೆ ಇದೊಂದು ಪರಿಣಾಮಕಾರಿ ಉದಾಹರಣೆ.



ನಿರೀಕ್ಷೆ, ೧೯೦೪, ತೈಲವರ್ಣ
ಸಂಗ್ರಹ: ಜಗನ್ಮೋಹನ ಚಿತ್ರಶಾಲೆ.

*Nireekshe, 1904, Oil*
*Collection: Jaganmohan Art Gallery.*

ಇಸ್ಮಾಯಿಲ್ ಚಿತ್ರವನ್ನು ೧೯೨೯ರಲ್ಲಿ ರಚಿಸಿದ್ದಾರೆ. ಇದರಲ್ಲಿ ಇಸ್ಮಾಯಿಲ್ ಉದ್ದಕಪ್ಪುಕೋಟು ಮತ್ತು ಬಿಳಿಪ್ಯಾಂಟನ್ನು ತೊಟ್ಟು ನಿಂತಿರುವರು. ತಲೆಯ ಮೇಲೆ ಮುಸಲ್ಮಾನರು ಧರಿಸುವ ಕಪ್ಪುಟೋಪಿಯಿದೆ. ಕೋಟಿನ ತೋಳು ಮತ್ತು ಮುಂಭಾಗದಲ್ಲಿ ಬಂಗಾರದ ಬಣ್ಣದ ದೊಡ್ಡ ಅಂಚುಗಳಿದ್ದು ಝಗಮಗಿಸುತ್ತಿದೆ. ಜರತಾರಿ ಮೇಲುಹೊದಿಕೆ ಎಡಭುಜದ ಮೇಲಿಂದ ಬಲಕಂಕುಳ ಕೆಳಗೆ ಹಾದುಹೋಗಿದೆ. ಅವರಿಗಿದ್ದ ಬಿರುದು ಬಾವಲಿಗಳ ಪದಕಗಳನ್ನು ಸೂಕ್ಷ್ಮವಾಗಿ ಬಿಡಿಸಿದ್ದಾರೆ. ಹಿನ್ನೆಲೆಯಲ್ಲಿ ಮಸುಕುಮಸಕಾಗಿ ದೊಡ್ಡ ಕಂಬ ಮತ್ತು ತೆರೆಯನ್ನು ಚಿತ್ರಿಸಲಾಗಿದೆ. ಮಿರ್ಜಾರವರ ಮುಖದಲ್ಲಿ ಪ್ರಶಾಂತತೆಯಿದ್ದು, ಅವರ ಸಾತ್ವಿಕ ಸ್ವಭಾವವನ್ನು ಹಿಡಿದಿಡುವಲ್ಲಿ ಕೇಶವಯ್ಯ ಯಶಸ್ವಿಯಾಗಿದ್ದಾರೆ.

ಈ ರೀತಿಯ ವ್ಯಕ್ತಿನಿಷ್ಠೆಯನ್ನು ಛಾಯಾಚಿತ್ರದ ಮೂಲವನ್ನು ಆಧಾರವಾಗಿಟ್ಟುಕೊಂಡ ತಮ್ಮ ಇನ್ನಿತರ ಕೃತಿಗಳಲ್ಲೂ ಕೇಶವಯ್ಯನವರು ಅಭಿವ್ಯಕ್ತಿಮಾಡಿದ್ದಾರೆ. ಉದಾಹರಣೆಗೆ ಮುಖ್ಯ ಅರಮನೆಯ ಕಲ್ಯಾಣಮಂಟಪದಲ್ಲಿರುವ ಕೆಂಪನಂಜಮ್ಮಣ್ಣಿಯವರು ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ ತೈಲವರ್ಣ ಕೃತಿಗಳನ್ನು ನೋಡಬಹುದು. ರೀಜೆಂಟ್ ಮಹಾರಾಣಿಯವರು ರೆಸಿಡೆನ್ಸಿಯಲ್ ಮ್ಯೂಸಿಯಂನಲ್ಲಿನ ಚಿತ್ರದಲ್ಲಿರುವಂತೆ ಮಂದಹಾಸದ ನಗುಬೀರುತ್ತಾ ಕುರ್ಚಿಯಲ್ಲಿ ಕುಳಿತಿದ್ದಾರೆ. ಅವರು ಕೆಂಪನೆಯ, ಚಿನ್ನದ ಬಣ್ಣದ ಅಂಚಿರುವ ರೇಷ್ಮೆಸೀರೆಯನ್ನು ತೊಟ್ಟಿರುವರು. ಅದರ ನೆರಿಗೆಯ ಮಡಿಕೆಗಳನ್ನು ಮಹಾರಾಣಿಯವರ ಕಾಲುಗಳು ಕಾಣದಂತೆ ಮುಂಗಡೆ ಕಲಾತ್ಮಕವಾಗಿ ಹರಡಲಾಗಿದೆ. ಛಾಯಾಚಿತ್ರವನ್ನೂ ಮೀರಿಸುವಂತಹ ಇದರ ಸೂಕ್ಷ್ಮವಿವರಗಳನ್ನು ಕೇಶವಯ್ಯನವರು ಭಾವಾತಿರೇಕದಿಂದಲೇ ರಚಿಸಿದಂತೆ



ಚಾಮರಾಜ ಒಡೆಯರು
ತೈಲವರ್ಣ

*Chamaraja Wodeyar*
*Oil Color*

ಕಂಡುಬರುತ್ತದೆ. ಪಕ್ಕದಲ್ಲಿ ಅಲಂಕಾರದ ವಿಕ್ಟೋರಿಯನ್ ಕುರ್ಚಿಯಿದ್ದು, ಅದರ ಮೇಲೆ ಅಂಬಾರಿ ಹೊತ್ತ ಆನೆಯ ಶಿಲ್ಪವಿರುವ ಚಿಕ್ಕದಾದ ಫಲಕವಿದೆ. ಹಿನ್ನೆಲೆಯಲ್ಲಿ ಬಲಕ್ಕೆ ದಾರದಿಂದ ಬಿಗಿದ, ನೆರಿಗೆಯುಳ್ಳ ಪರದೆಯಿದೆ. ಎಡಭಾಗದ ಗೋಡೆಯಲ್ಲಿ ಅಂಡಾಕಾರದ ಫಲಕದಲ್ಲಿ ಚಾಮರಾಜ ಒಡೆಯರ್ ಅವರು ಯೂರೋಪಿಯನ್ ಉಡುಪಿನಲ್ಲಿರುವಂತೆ ಚಿಕ್ಕದಾಗಿಯಾದರೂ ಎಲ್ಲ ವಿವರಗಳಿರುವಂತೆ ಚಿತ್ರಿಸಿದ್ದಾರೆ. ವ್ಯಕ್ತಿಯ ಯಥಾವತ್ ರೂಪದೊಂದಿಗೆ ಅವರ ಘನತೆ, ಸ್ಥಾನಮಾನ ಮತ್ತು ವ್ಯಕ್ತಿತ್ವಕ್ಕೆ ಇಲ್ಲಿ ವಿಶೇಷ ಮಹತ್ವ ಸಿಕ್ಕಿದೆ. ಹೀಗೆಯೇ ನಾಲ್ವಡಿಯವರು ರಾಜಠೀವಿಯಿಂದ ಕುರ್ಚಿಯಲ್ಲಿ ಕುಳಿತಿರುವ ಚಿತ್ರವನ್ನು ೧೯೨೯ರಲ್ಲಿ ರಚಿಸಿದ್ದಾರೆ. ಉದ್ದ ಕಪ್ಪುಕೋಟು, ಮೈಗಂಟಿದ ಬಿಳಿಪ್ಯಾಂಟು, ಕೆಂಪುಪೇಟ, ಕಾಲಿಗೆ ಷೂ ತೊಟ್ಟು, ಕೈಲಿ ಊರುಗೋಲು ಹಿಡಿದಿರುವ ನಾಲ್ವಡಿಯವರ ಮುಖದಲ್ಲಿ ರಾಜಗಾಂಭೀರ್ಯವಿದೆ. ಹಿನ್ನೆಲೆಯಲ್ಲಿನ ಪರದೆ, ಅದರ ನೆರಿಗೆಗಳು, ಮೈವಳಿಕೆ, ಹೂದಾನಿಯಲ್ಲಿನ ಗಿಡದ ಎಲೆಗಳು, ವಿಕ್ಟೋರಿಯನ್ ಕುರ್ಚಿಯ ಮೇಲಿನ ಎದೆಮೊಗದ ಚಾಮರಾಜ ಒಡೆಯರ ಭಾವಶಿಲ್ಪ, ನೆಲಹಾಸಿಗೆಯ ಮೇಲಿನ ಚಿತ್ರ ಎಲ್ಲವೂ ನೈಜವಾಗಿ ಮೂಡಿಬಂದಿದೆ. ಇಂದಿಗೂ ಈ ಚಿತ್ರವು ಬಣ್ಣಮಾಸದೆ ಹೊಳೆಯುತ್ತಿದೆ.

ಕೇಶವಯ್ಯನವರು ಚಿತ್ರಿಸಿದ ಚಾಮರಾಜ ಒಡೆಯರ ನೈಜ ಅಳತೆಯ ಇನ್ನೊಂದು ಚಿತ್ರ ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿನ ಶ್ರೀ ಚಾಮರಾಜೇಂದ್ರ ತಾಂತ್ರಿಕ ಕಲಾಶಾಲೆಯ ಪಕ್ಕದಲ್ಲಿರುವ ಮಾರಾಟ ಮಳಿಗೆಯಲ್ಲಿದೆ. ೧೯೩೩ರಲ್ಲಿ ರಚನೆಗೊಂಡಿರುವ ಈ ಚಿತ್ರದಲ್ಲಿ ಚಾಮರಾಜ ಒಡೆಯರು ಯೂರೋಪಿಯನ್ ಮಾದರಿಯ ಉಡುಪುಧರಿಸಿ ನಿಂತಿರುವರು. ಇದರಲ್ಲಿ ರಾಜರ ವೈಭವೋಪೇತ ಉಡಿಗೆ-ತೊಡಿಗೆಗಳನ್ನು ಉಜ್ವಲವಾಗಿಯೂ, ವೈಭವ ಪೂರ್ಣವಾಗಿಯೂ ಚಿತ್ರಿಸಲಾಗಿದೆ.

ಕೇಶವಯ್ಯನವರ ಕಲಾಕೃತಿಗಳು ಮೈಸೂರಿನಲ್ಲಿ ಮುಖ್ಯ ಅರಮನೆ, ಜಗನ್ಮೋಹನ ಚಿತ್ರಶಾಲೆ, ಮಹಾರಾಜರ ರೆಸಿಡೆನ್ಷಿಯಲ್ ಮ್ಯೂಸಿಯಂ ಮತ್ತು ಚಾಮರಾಜೇಂದ್ರ ತಾಂತ್ರಿಕ ಕಲಾಶಾಲೆಯ ಪಕ್ಕದಲ್ಲಿನ ಮಾರಾಟ ಮಳಿಗೆಯಲ್ಲಿ ಮಾತ್ರವಲ್ಲದೆ ಲಲಿತಮಹಲ್ ಅರಮನೆ, ಮೈಸೂರು ವಿಶ್ವವಿದ್ಯಾಲಯದ ಸೆನೆಟ್ ಹಾಲ್, ಮಹಾರಾಜ ಕಾಲೇಜ್, ಯುವರಾಜ ಕಾಲೇಜ್, ಓರಿಯಂಟಲ್ ಲೈಬ್ರರಿ, ಮೈಸೂರು ಬ್ಯಾಂಕ್ ಮುಂತಾದೆಡೆಯೂ ಸಂಗ್ರಹಗೊಂಡಿವೆ.

ಬೆಂಗಳೂರಿನಲ್ಲೂ ಕೇಶವಯ್ಯನವರ ಹಲವಾರು ಕಲಾಕೃತಿಗಳಿವೆ. ಅವರ ಮೊಮ್ಮಗ ಡಾ. ಕೆ.ಎನ್. ರಾಜುರವರ ಬಳಿ ಕೇಶವಯ್ಯನವರು ರಚಿಸಿರುವ ತೈಲವರ್ಣದ ತಮ್ಮದೇ ಭಾವಚಿತ್ರವಿದೆ. ಕ್ಯಾನ್‌ವಾಸ್ ಮೇಲಿನ ಈ ಚಿತ್ರದಲ್ಲಿ ಛಾಯಾಂತರವನ್ನು ಬಳಸಿ ನೈಜತೆ ಮೂಡಿಸಿದ್ದಾರೆ. ನೃಪತುಂಗ ರಸ್ತೆಯಲ್ಲಿನ ಮಿಥಿಕ್ ಸೊಸೈಟಿಯಲ್ಲಿ ಎರಡು ಕಲಾಕೃತಿಗಳಿವೆ. ಒಂದು ೧೯೨೧ರಲ್ಲಿ ರಚಿಸಿರುವ, ಚಾಮರಾಜ ಒಡೆಯರ್ ಅವರು ಯೂರೋಪಿಯನ್ ಶೈಲಿಯ ಉಡುಪಿನಲ್ಲಿರುವ ಎದೆಮೊಗದ ಭಾವಚಿತ್ರ. ಇನ್ನೊಂದು ಜಯಚಾಮರಾಜ ಒಡೆಯರ್ ಅವರ ಪೂರ್ಣ ಪ್ರಮಾಣದ ಚಿತ್ರ. ಇದನ್ನು ೧೯೪೧ರಲ್ಲಿ ರಚಿಸಲಾಗಿದೆ.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಅಂದಿನ ದಿವಾನರಾಗಿದ್ದ ರಂಗಾಚಾರ್ಲು, ಶೇಷಾದ್ರಿ ಅಯ್ಯರ್, ಸರ್. ಎಂ. ವಿಶ್ವೇಶ್ವರಯ್ಯ, ಮಿರ್ಜಾ ಇಸ್ಮಾಯಿಲ್ ಅವರ ನೈಜಪ್ರಮಾಣದ ಭಾವಚಿತ್ರಗಳಿವೆ. ಅದೇ ರೀತಿ ಕಾವೇರಿ ಭವನದ ಬಳಿಯ ಸರ್ಕಾರಿ ಕಲಾಕಾಲೇಜಿನಲ್ಲಿ ಮತ್ತು ಬನಶಂಕರಿಯ ಥಿಯೋಸಾಫಿಕಲ್ ಸೊಸೈಟಿಯಲ್ಲಿ ಕೇಶವಯ್ಯ ರಚಿಸಿದ ಹಲವು ಭಾವಚಿತ್ರಗಳಿದ್ದವೆಂದು ನೋಡಿದವರು ಹೇಳುವರಾದರೂ ಇಂದು ಅಲ್ಲಿ ಯಾವ ಚಿತ್ರಗಳೂ ಇಲ್ಲ.



ಸ್ವಚಿತ್ರ, ತೈಲವರ್ಣ
ಸಂಗ್ರಹ: ಕೆ.ಎಸ್. ರಾಜು

*Self Portrait, Oil*
*Collection: K.N. Raju*

## ಜಲವರ್ಣ ಕೃತಿಗಳು

ಜಲವರ್ಣದ ಚಿತ್ರಗಳನ್ನು ರಚಿಸುವುದೆಂದರೆ ಕಲಾವಿದನಿಗೊಂದು ಸವಾಲಿದ್ದಂತೆ. ಆಗ 'ವಾಶ್' ತಂತ್ರದಲ್ಲಿಯೇ ಹೆಚ್ಚು ಜಲವರ್ಣ ಕೃತಿಗಳನ್ನು ರಚಿಸುತ್ತಿದ್ದರು. "ಒದ್ದೆ ತಂತ್ರ ಕಲಾವಿದನಿಗೆ ಒಂದು ಸವಾಲಿನಂತೆ. ನೀರಿನಿಂದ ಒದ್ದೆಮಾಡಿದ ಕಾಗದದ ಮೇಲೆ ಬಣ್ಣ ಚೆಲ್ಲಿದಾಗ ಅವು ಎಲ್ಲೆಂದರಲ್ಲಿ ಓಡಾಡತೊಡಗುತ್ತವೆ. ಅವನ್ನು ತಹಬಂದಿಗೆ ತರುವ ಹಂತದಲ್ಲಿ ಕಲಾವಿದ ಸಾಕಷ್ಟು ಕಸರತ್ತು ಮಾಡಬೇಕಾಗುತ್ತದೆ. ಇದಕ್ಕೆ ಸಾಕಷ್ಟು ಪರಿಶ್ರಮ ಹಾಗೂ ತಾಲೀಮು ಬೇಕಾಗುತ್ತದೆ."[೨] ಕೇಶವಯ್ಯನವರು ತೈಲವರ್ಣದ ಮೇಲೆ ಹಿಡಿತ ಸಾಧಿಸಿದ್ದಂತೆ ಜಲವರ್ಣದ ಮೇಲೂ ಅದ್ಭುತ ಪ್ರಭುತ್ವವನ್ನು ಹೊಂದಿದ್ದರು.

ಬಸವಲಿಂಗಪ್ಪ, ಶಾಮರಾವ್ ಮುಂತಾದವರ ಭಾವಚಿತ್ರಗಳನ್ನು ಕೇಶವಯ್ಯನವರು ಜಲವರ್ಣದಲ್ಲೇ ರಚಿಸಿರುವರೆಂದು ಅರಮನೆಯ ದಾಖಲೆಗಳಲ್ಲಿದೆಯಾದರೂ ಈಗ ಅವೆಲ್ಲಾ ಎಲ್ಲಿವೆಯೋ ತಿಳಿಯದು. ಆದರೆ ಕೇಶವಯ್ಯನವರ ಮೊಮ್ಮಗ ಬೆಂಗಳೂರಿನ ಕೆ.ಎನ್. ರಾಜುರವರ ಬಳಿ ಎರಡು ಜಲವರ್ಣ ಕೃತಿಗಳು ಉಳಿದುಕೊಂಡಿವೆ. ಅವುಗಳಲ್ಲಿ ಒಂದು ಬ್ರಿಟೀಷ್ ವ್ಯಕ್ತಿಯ ಭಾವಚಿತ್ರವಾದರೆ ಇನ್ನೊಂದು ಸಂಗೀತ ವಿದ್ವಾಂಸನ ಚಿತ್ರದಂತಿದೆ.

ಬ್ರಿಟೀಷ್ ವ್ಯಕ್ತಿಯು ಪಾಚಿಯ ಬಣ್ಣದ ಕೋಟು, ಅದರೊಳಗೆ ಬಿಳಿಯ ಅಂಗಿ ಮತ್ತು ಅದಕ್ಕೆ ಚಿಟ್ಟೆಯಂತಹ ಕೊರಳಪಟ್ಟಿಯನ್ನು ಬಿಗಿದುಕೊಂಡಿದ್ದಾನೆ. ತಲೆ ನಾಜೂಕಾಗಿ ಬಾಚಿದೆ. ಅಗಲ ಹಣೆಯ ಈ ವ್ಯಕ್ತಿಯ ಮುಖದಲ್ಲಿನ ಉಬ್ಬು-ತಗ್ಗುಗಳು, ಜೋತುಬಿದ್ದ ಸುಕ್ಕಿನ ಚರ್ಮ, ಅದರ ಮೆದುತನ, ಮೈವಳಿಕೆ, ಗುಳಿಬಿದ್ದ ಕಣ್ಣುಗಳು, ನೆರಳು-ಬೆಳಕಿನ ವಿಂಗಡಣೆ ಇತ್ಯಾದಿ ಎಲ್ಲ ವಿವರಗಳೂ ನೈಜವಾಗಿ ಮೂಡಿಬಂದಿವೆ. ಆದರೆ ವ್ಯಕ್ತಿಯ ಮನಸ್ಸು ದುಗುಡಗೊಂಡಂತಿದೆ.

ಇನ್ನೊಂದು ಚಿತ್ರ ಕೇಶವಯ್ಯನವರ ಅದ್ಭುತ ಕೈಚಳಕಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ. ಮೈಗಂಟಿದ ನೀಲಿಬಣ್ಣದ ಅಂಗಿ, ಕೆಂಪು ಮಿಶ್ರಿತ ಬಂಗಾರದಂಚಿನ ದೊಡ್ಡಪೇಟ, ಹಣೆಯ ಮೇಲೆ ಅಗಲವಾದ ಗಂಧದ ಬೊಟ್ಟು, ಕಿವಿಯೋಲೆ ತೊಟ್ಟಿರುವ ಈ ಚಿತ್ರದಲ್ಲಿನ ವ್ಯಕ್ತಿಯನ್ನು ನೋಡಿದರೆ ಮೇಲ್ನೋಟಕ್ಕೆ ಯಾವುದೋ ವಿದ್ವಾಂಸರಂತೆ ಕಾಣುತ್ತಾರೆ. ಚಿತ್ರದಲ್ಲಿನ ಮೊನಚಾದ ರೇಖೆಗಳು, ಗಾಜಿನ ಗೋಲಿಯಂತೆ

೨. ಕಾಸರವಳ್ಳಿ, ಕೆ.ಜಿ. ರವೀಶ್: ಜಿ.ಎಸ್. ಶೆಣೈ, ಪುಟ ೧೬ (ಸಾಂಪ್ರದಾಯಿಕ 'ವಾಷ್' ತಂತ್ರ ಇದರಿಂದ ಬೇರೆಯಾದುದು) (ಸಂ).

ಹೊಳೆಯುವ ತೀಕ್ಷ್ಣಕಣ್ಣುಗಳು, ನಿಜವಾಗಿಯೂ ಜರಿಬಟ್ಟೆಯನ್ನೇ ಕತ್ತರಿಸಿ ಹಚ್ಚಿರುವರೇನೋ ಎನ್ನುವಷ್ಟು ನೈಜವಾದ ಪೇಟದ ಅಂಚು, ಕೊರಳ ಸರ ಇತ್ಯಾದಿ ವಿವರಗಳು ಛಾಯಾಚಿತ್ರವನ್ನೂ ನಾಚಿಸುವಂತಿದೆ. ಒಟ್ಟಾರೆ ಇದೊಂದು ಉತ್ತಮ ಕೃತಿಯಾಗಿದ್ದು, ಕ್ಲಿಷ್ಟಕರವಾದ ಜಲವರ್ಣದಲ್ಲಿ ಶುದ್ಧತೆಯನ್ನು, ಹೊಸತನವನ್ನು ಉಳಿಸಿಕೊಂಡಿದ್ದಾರೆ.



ದಸರಾ ಪ್ಯಾನೆಲ್ ನಂ. ೧೪ (ವಿವರ)
೧೩ x ೭ ೧/೨, ತೈಲವರ್ಣ
ಸಂಗ್ರಹ: ಮುಖ್ಯ ಅರಮನೆ.

**Dasara Panel No. 14** *(detail)*
*13 x 7 1/2, Oil*
*Collection: Main Palace.*

ಕೇಶವಯ್ಯನವರು ಇದ್ದಿಲುಕಡ್ಡಿಯಿಂದಲೂ ಚಿತ್ರರಚಿಸಿದ್ದಾರೆ. ಅವರು ೧೯೧೭ರಲ್ಲಿ ಅರಮನೆಗೆ ಬರೆದಿರುವ ಪತ್ರದಲ್ಲಿ ದಿವಾನರಾಗಿದ್ದ ದಿವಂಗತ ತಂಬೂಚೆಟ್ಟಿಯವರ ಎರಡು ಭಾವಚಿತ್ರಗಳನ್ನು ಇದ್ದಿಲುಕಡ್ಡಿಯಲ್ಲಿ ಬರೆದಿರುವುದಾಗಿ ಉಲ್ಲೇಖಿಸಿದ್ದಾರೆ. ಆದರೆ ಈ ಕೃತಿಗಳು ಇಂದು ಅರಮನೆಯ ಸಂಗ್ರಹದಲ್ಲಿಲ್ಲ. ಬೆಂಗಳೂರಿನ ಚಿತ್ರಕಲಾ ಪರಿಷತ್‌ನ ಸಂಗ್ರಹದಲ್ಲಿ ಕೇಶವಯ್ಯ ರಚಿಸಿದ ಒಂದು ಇದ್ದಿಲು ಚಿತ್ರವಿದೆ. ಅದು ಅವರ ತಾಯಿ ಅಲಮೇಲಮ್ಮನವರ ಭಾವಚಿತ್ರ. ಮೃದು ಇದ್ದಿಲುಕಡ್ಡಿಯಿಂದ ಪೇಸ್ಟಲ್ ಕಾಗದದ ಮೇಲೆ ಚಿತ್ರಿಸಿರುವ ಈ ಚಿತ್ರದಲ್ಲಿ ನೆರಳು-ಬೆಳಕನ್ನು ಅತ್ಯಂತ ಪರಿಣಾಮಕಾರಿಯಾಗಿ ದುಡಿಸಿಕೊಂಡಿದ್ದಾರೆ. ಮುಖದ ಬಾಹ್ಯಲಕ್ಷಣಗಳು, ಸೀರೆಯ ಮಡಿಕೆಗಳು ಯಥಾವತ್ತಾಗಿ ಮೂಡಿಬಂದಿದೆ.

ಹೀಗೆ ಕೇಶವಯ್ಯನವರು ತೈಲವರ್ಣ, ಜಲವರ್ಣ, ಇದ್ದಿಲುಕಡ್ಡಿ ಇತ್ಯಾದಿ ಚಿತ್ರಕಲೆಯ ಎಲ್ಲ ಮಾಧ್ಯಮಗಳಲ್ಲೂ ಹಿಡಿತ ಸಾಧಿಸಿದ್ದರು.

## ಬಣ್ಣದ ಛಾಯಾಚಿತ್ರಗಳು

ಕೇಶವಯ್ಯ ಮದ್ರಾಸ್‌ನಲ್ಲಿ ಓದುವಾಗಲೇ ಛಾಯಾಚಿತ್ರದ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿದ್ದರು. ಅವರು ಅರಮನೆಯಲ್ಲಿ ಕೆಲಸಕ್ಕೆ ಸೇರಿಕೊಂಡ ಮೇಲೆ (೧೯೦೨), ಮೈಸೂರಿಗೆ ರವಿವರ್ಮನ ಆಗಮನದ ನಂತರ ಸಂಪ್ರದಾಯ ಕೃತಿಗಳು ಹಿಂದೆಸರಿದು ನೈಜಚಿತ್ರಗಳು ಪ್ರಾಮುಖ್ಯ ಪಡೆಯಲಾರಂಭಿಸಿದವು. ಜನರು ಕೂಡ ತದ್ರೂಪ ಚಿತ್ರಗಳನ್ನೇ ಮುಖ್ಯವಾಗಿ ಭಾವಚಿತ್ರಗಳನ್ನೇ ಇಷ್ಟಪಡತೊಡಗಿದರು. ಕಲಾವಿದರಿಂದ ತಮ್ಮ ಭಾವಚಿತ್ರ ಬರೆಯಿಸಿಕೊಳ್ಳಲು ಎಲ್ಲಿಲ್ಲದ ಉತ್ಸಾಹ ತೋರಿಸಿದರು. ಹೀಗಾಗಿ ಅಂದು ಭಾವಚಿತ್ರಗಳಿಗೆ ಅಪಾರ ಬೇಡಿಕೆ ಮೊದಲಾಯಿತು. ಜೊತೆಗೆ ಅಂದು ಬಣ್ಣದ ಛಾಯಾಚಿತ್ರಗಳಿಲ್ಲದಿದ್ದುದು ಹಾಗೂ ಜನಸಾಮಾನ್ಯರು ಕೊಳ್ಳುವಂತೆ ಕೈಗೆಟಕುವ ಬೆಲೆಯಿದ್ದುದು ಭಾವಚಿತ್ರಗಳ ಬೇಡಿಕೆ ಹೆಚ್ಚಲು ಇನ್ನೊಂದು ಮುಖ್ಯ ಕಾರಣವೆನ್ನಬಹುದು. ಕಲಾವಿದರಿಗೆ ರೂಪದರ್ಶಿಯನ್ನು ಎದುರಿಗೆ ಕೂರಿಸಿಕೊಂಡು ಚಿತ್ರರಚಿಸಲು ಸಾಕಷ್ಟು ಕಾಲಾವಕಾಶ ತಗಲುತ್ತಿತ್ತು. ಹೀಗಾಗಿ ಅಂದು ವಾಸ್ತವವಾದಿ ಕಲಾವಿದರೆಲ್ಲಾ ಸಕಾಲಕ್ಕೆ ಬೇಡಿಕೆಯನ್ನು ಪೂರೈಸುವ ಸಲುವಾಗಿ ವ್ಯಕ್ತಿಯ ಕಪ್ಪುಬಿಳುಪು ಛಾಯಾಚಿತ್ರವನ್ನೇ ದೊಡ್ಡಅಳತೆಯಲ್ಲಿ ಅಚ್ಚುಹಾಕಿಸಿ ಬಣ್ಣತುಂಬಲಾರಂಭಿಸಿದರು. ಕೇಶವಯ್ಯನವರಿಗೆ ಅರಮನೆಯಲ್ಲಿ ಬರುತ್ತಿದ್ದ ಸಣ್ಣಮೊತ್ತದ ಸಂಬಳದಿಂದ ಅವರ ದೊಡ್ಡ ಕುಟುಂಬವನ್ನು ನಿಭಾಯಿಸುವುದು ಕಷ್ಟಸಾಧ್ಯವಾಗುತ್ತಿತ್ತು. ಆದ್ದರಿಂದ ಅವರು ಖಾಸಗಿಯಾಗಿ ತಮ್ಮ ಮನೆಯ ಸ್ಟುಡಿಯೋದಲ್ಲಿ ಭಾವಚಿತ್ರ ರಚಿಸಿಕೊಡುತ್ತಿದ್ದರು.

ಕೇಶವಯ್ಯನವರು ಕಪ್ಪುಬಿಳುಪು ಛಾಯಾಚಿತ್ರಕ್ಕೆ ಬಣ್ಣತುಂಬುವಲ್ಲಿ ಸಾಕಷ್ಟು ನಿಸ್ಸೀಮರಾಗಿದ್ದರು. ಮದ್ರಾಸ್‌ನಲ್ಲಿ ಕಲಾಭ್ಯಾಸ ಮಾಡುತ್ತಿದ್ದಾಗಲೇ ಈ ಕಲೆಯನ್ನು ಕರಗತಮಾಡಿಕೊಂಡಿದ್ದರು. ವರ್ಣಛಾಯಾಚಿತ್ರಗಳಿರದ ಆ ದಿನಗಳಲ್ಲಿ ಕಪ್ಪುಬಿಳುಪು ಛಾಯಾಚಿತ್ರಗಳಿಗೆ ಬಣ್ಣಹಾಕಿ ಜೀವತುಂಬಿಸುವ ಕೇಶವಯ್ಯನವರ ಕೈಚಳಕಕ್ಕೆ ಮಾರುಹೋಗದವರಿಲ್ಲ. ಸ್ವತಃ ಮಹಾರಾಜರೂ ಕೂಡ ಈ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದ್ದರು.

ಕೇಶವಯ್ಯ ಈ ಬಗೆಯ ನೂರಾರು ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ತಮ್ಮ ಹಿತೈಷಿಗಳಾದ ಗೆಳೆಯ ನಾಲ್ವಡಿ ಕೃಷ್ಣರಾಜ ಒಡೆಯರು ಮತ್ತು ಅವರ ಮಾತಾಪಿತರಾದ ಕೆಂಪನಂಜಮ್ಮಣ್ಣಿ ಹಾಗೂ ೧೦ನೇ ಚಾಮರಾಜ ಒಡೆಯರ ಕಲಾಕೃತಿಗಳಿಗಂತೂ ಲೆಕ್ಕವೇ ಇಲ್ಲ. ಅಲ್ಲದೆ ಅರಮನೆಯ ಅಧಿಕಾರಿವರ್ಗ ಮತ್ತು ನೌಕರರು, ದರ್ಬಾರ್ ಭಕ್ಷಿಗಳು, ಮಹಾರಾಜರೊಂದಿಗೆ ಆಳ್ವಾರ್ ಮಹಾರಾಜರು, ಗಿರಿಭಟ್ಟ ತಮ್ಮಯ್ಯ ಮತ್ತು ಅವರ ಪತ್ನಿ, ವೆಂಕಟರಮಣಯ್ಯ, ಮಿಸ್ಟರ್ ರೋಯ್ಲೆ ಮುಂತಾದವರ ಕಪ್ಪುಬಿಳುಪು ಛಾಯಾಚಿತ್ರಕ್ಕೆ ಬಣ್ಣದ ಕುಂಚ ಆಡಿಸಿರುವರೆಂದು ದಾಖಲೆಗಳಲ್ಲಿದೆ. ಆದರೆ ಈಗ ಅವೆಲ್ಲಾ ಎಲ್ಲೆಲ್ಲಿವೆಯೋ ತಿಳಿಯದು. ಆದರೆ ಸ್ವತಃ ತಮ್ಮದೇ ಭಾವಚಿತ್ರ, ಪತ್ನಿ ಮೀನಾಕ್ಷಮ್ಮ ಮತ್ತು ತಾಯಿ ಅಲಮೇಲಮ್ಮನವರ ಚಿತ್ರ, ಮಗ ಸಿ.ವಿ. ಕೃಷ್ಣಸ್ವಾಮಿ, ಸೊಸೆ ಮತ್ತು ಮೊಮಕ್ಕಳ ಚಿತ್ರ, ಮೊಮ್ಮಗ ಗೋಪಾಲಕೃಷ್ಣ ರಾಜು, ಮಹಾರಾಣಿ ಕೆಂಪನಂಜಮ್ಮಣ್ಣಿ, ನಾಲ್ವಡಿ ಕೃಷ್ಣರಾಜ ಒಡೆಯರು, ಸರ್.ಎಂ. ವಿಶ್ವೇಶ್ವರಯ್ಯ, ಜಯಚಾಮರಾಜ ಒಡೆಯರ್ ಮುಂತಾದ ಕೃತಿಗಳು ಕೇಶವಯ್ಯನವರ ಮೊಮ್ಮಗ ಕೆ.ಎನ್. ರಾಜು ಅವರ ಬಳಿ ನಮಗೆ ನೋಡಲು ಸಿಗುತ್ತವೆ. ಜಯಚಾಮರಾಜ ಒಡೆಯರ್ ಅವರು ತಾಯಿತಂಗಿಯರೊಂದಿಗಿರುವ ಮತ್ತು ಅರಮನೆಯ ಯುವರಾಣಿಯರು ಹಾಗೂ ಸೊಸೆಯಂದಿರು ಜೊತೆಗಿರುವ, ಚಾಮರಾಜ ಒಡೆಯರ ಕೃತಿಗಳು ಕ್ರಮವಾಗಿ ಮಹಾರಾಜರ ರೆಸಿಡೆನ್ಸಿಯನ್ ಮ್ಯೂಸಿಯಂನಲ್ಲಿ ಹಾಗೂ ಮುಖ್ಯ ಅರಮನೆಯ ಕಲ್ಯಾಣ ಮಂಟಪದಲ್ಲಿವೆ.

ಕೇಶವಯ್ಯನವರಿಗೆ ಈ ರೀತಿಯ ವರ್ಣಚಿತ್ರಗಳನ್ನು ರಚಿಸಲು ಒಮ್ಮಿಂದೊಮ್ಮೆಲೇ ಸಾಕಷ್ಟು ಬೇಡಿಕೆ ಬರುತ್ತಿತ್ತು. ಹೀಗಾಗಿ ಅವರು ಅನೇಕ ವೇಳೆ ನಿರ್ದಿಷ್ಟ ಅಳತೆಯ ಎದೆಮೊಗದ ಭಾವಚಿತ್ರಗಳಿಗೆಂದು ಮುಖವನ್ನು ಮಾತ್ರಬಿಟ್ಟು ಉಳಿದ ಭಾಗವನ್ನು ಮೊದಲೇ ಸಿದ್ಧಮಾಡಿಟ್ಟುಕೊಂಡಿರುತ್ತಿದ್ದರು. ಬೇಡಿಕೆ ಬಂದ ಕೂಡಲೇ ಕಪ್ಪುಬಿಳುಪಿನ ಮುಖವನ್ನು ಮಾತ್ರ ಕತ್ತರಿಸಿ, ಅಂಟಿಸಿ, ಬಣ್ಣತುಂಬಿಸಿ ಪೂರ್ಣಗೊಳಿಸುತ್ತಿದ್ದರು. ಇದಕ್ಕೆ ಅತ್ಯುತ್ತಮ ಉದಾಹರಣೆಯಾಗಿ ಕೇಶವಯ್ಯನವರ ಮೊಮ್ಮಗ ಕೆ.ಎನ್. ರಾಜು ಅವರ ಬಳಿಯಿರುವ ಜಯಚಾಮರಾಜ ಒಡೆಯರ್ ಅವರ ಎದೆಮೊಗದ ಚಿತ್ರವನ್ನು ನೋಡಬಹುದು.



*ಜಯಚಾಮರಾಜ ಒಡೆಯರು*
*ಬಣ್ಣದ ಛಾಯಾಚಿತ್ರ*
*ಸಂಗ್ರಹ: ಕೆ.ಎನ್. ರಾಜು, ಬೆಂ.*

***Jayachamaraja Wodeyar***
*Color Photograph*
*Collection: K.N. Raju, B'lore.*



ಮೀನಾಕ್ಷಮ್ಮ
*ಬಣ್ಣದ ಛಾಯಾಚಿತ್ರ*
*ಸಂಗ್ರಹ: ಕೆ.ಎನ್. ರಾಜು*

***Meenakshamma***
*Color Photograph*
*Collection: K.N. Raju*

ಇಂತಹ ಕೃತಿಗಳಲ್ಲೂ ಸೃಜನಶೀಲತೆಗೆ ಸಾಕಷ್ಟು ಅವಕಾಶವಿದೆ. ಹಿನ್ನೆಲೆಯಲ್ಲಿ ಬೇಕಾದಂತಹ ದೃಶ್ಯಗಳನ್ನು ಚಿತ್ರಿಸಬಹುದಿತ್ತು. ಆ ಮೂಲಕ ಸ್ಟುಡಿಯೋದ ಹಿನ್ನೆಲೆ ಪರದೆಯನ್ನು ಇಲ್ಲವಾಗಿಸಿ ಏಕತಾನತೆಯನ್ನು ದೂರಮಾಡಲು ಅವಕಾಶವಿತ್ತು. ಆದರೆ ಕೇಶವಯ್ಯನವರು ಇದಾವುದರ ಗೋಜಿಗೆ ಹೋಗದೆ ಸ್ಟುಡಿಯೋದ ವಾತಾವರಣವನ್ನು ಹಾಗೆ ಉಳಿಸಿಕೊಂಡಿದ್ದಾರೆ. ಬಹುಶಃ ಅಂದು ವಾಸ್ತವತಾವಾದವೆಂದರೆ ಯಥಾವತ್ತಾಗಿ ಹಾಗೆ ಚಿತ್ರಿಸುವುದು ಎಂದು ಭಾವಿಸಿದ್ದಿರಬೇಕು. ಆಗ ವಾಸ್ತವತಾವಾದ ಜೀವನದ ಯಥಾವತ್ತಾದ ಪ್ರತಿಯನ್ನೇ ಕಲೆ ಎನ್ನುವುದಾದರೆ ಯಾಂತ್ರಿಕವಾದ ಛಾಯಾಚಿತ್ರಕ್ಕೂ ಕಲಾಕೃತಿಗೂ ಏನು ವ್ಯತ್ಯಾಸ? ಪ್ರತಿಕೃತಿ ರಚನೆಯಲ್ಲಿ ಪ್ರತಿಭೆಯ ಕೆಲಸವಾದರೂ ಏನು? ಇದು ಕೇವಲ ಕಸುಬುಗಾರಿಕೆಯಾಗಲಿಲ್ಲವೆ? ಇತ್ಯಾದಿ ಪ್ರಶ್ನೆಗಳು ಉತ್ತರಗಳಿಲ್ಲದೆ ಹಾಗೆ ಉಳಿದುಕೊಳ್ಳುತ್ತವೆ. ವಾಸ್ತವದ ದೃಷ್ಟಿಯಿಂದ ಇಂತಹ ಕಲಾಕೃತಿಗಳು ಸರಿಯೆನಿಸಿದರೂ ಕಲಾತ್ಮಕತೆಯ ಕೊರತೆಯಿಂದ ಸೊರಗುತ್ತವೆ.

ಕೇಶವಯ್ಯನವರ ಇನ್ನೂ ಕೆಲವು ಕಲಾಕೃತಿಗಳು ಕಪುರ್‌ತಲದ[೮] ಅರಮನೆಯಲ್ಲಿ ಸಂಗ್ರಹಗೊಂಡಿವೆ. ಕೇಶವಯ್ಯ ಚಾಮರಾಜೇಂದ್ರ ತಾಂತ್ರಿಕ ಕಲಾಶಾಲೆಯಿಂದ ನಿವೃತ್ತರಾದ ನಂತರ ಅರಮನೆಯ ಮುಖ್ಯ ಕಲಾವಿದರಾಗಿ ಸೇವೆಸಲ್ಲಿಸುತ್ತಿದ್ದರು. ಆಗ ಒಮ್ಮೆ ಕಪುರ್‌ತಲ ರಾಜ್ಯದ ಮಹಾರಾಜ ರಾಜಚರಣ್‌ಜಿತ್ ಸಿಂಗ್ ಅವರು ಮೈಸೂರು ಮಹಾರಾಜರ ಅತಿಥಿಯಾಗಿ ಅರಮನೆಗೆ ಭೇಟಿನೀಡಿದರು. ಅಲ್ಲಿನ ನೈಜ ಅಳತೆಯ ರಾಜಮನೆತನದವರ ಚಿತ್ರಗಳು ಅವರಿಗೆ ಇಷ್ಟವಾದವು. ಅವುಗಳನ್ನು ರಚಿಸಿದ ಕೇಶವಯ್ಯನವರನ್ನು ಬಹುವಾಗಿ ಮೆಚ್ಚಿಕೊಂಡರು. ಚರಣ್‌ಜಿತ್ ಸಿಂಗ್ ಸಿಮ್ಲಾಗೆ ಹಿಂತಿರುಗಿದ ನಂತರ ಅವರ ಮತ್ತು ಕುಟುಂಬದವರ ಭಾವಚಿತ್ರಗಳನ್ನು ಕೇಶವಯ್ಯನವರಿಗೆ ಕಳುಹಿಸಿ, ಅವನ್ನಿಟ್ಟುಕೊಂಡು ಭಾರತೀಯ ಮತ್ತು ವಿದೇಶಿ ಉಡುಪಿನಲ್ಲಿರುವಂತೆ ಎದೆಮೊಗದ ಹಾಗೂ ಪೂರ್ಣಪ್ರಮಾಣದ ಹಲವು ಕಲಾಕೃತಿ ರಚಿಸಿಕೊಡಲು ಕೇಳಿಕೊಂಡರು. ಕೇಶವಯ್ಯ ಇವುಗಳ ಜೊತೆಗೆ ಗುರುನಾನಕರ ಭಾವಚಿತ್ರ, ಭಗವಾನ್ ಶ್ರೀಕೃಷ್ಣ, ಮಾಲೆರ್ ಕೊಟ್ಲಾದ ನವಾಬನ ಚಿತ್ರ ಮುಂತಾದುವನ್ನು ರಚಿಸಿಕೊಟ್ಟಿದ್ದಾರೆ. ಇದರಿಂದ ಸಂತೃಪ್ತರಾದ ಕಪುರ್‌ತಲದ ಮಹಾರಾಜರು ಕೊನೆಗೆ ಇನ್ನಷ್ಟು ಭಾವಚಿತ್ರಗಳನ್ನು ರಚಿಸಲೆಂದೇ ಕೇಶವಯ್ಯನವರನ್ನು ಕಪುರ್‌ತಲಕ್ಕೆ ಆಹ್ವಾನಿಸಿ, ಕುಟುಂಬದವರ ಭಾವಚಿತ್ರಗಳನ್ನು ಬರೆಯಿಸಿಕೊಂಡರು. ಇಂದು ಈ ಎಲ್ಲ ಕೃತಿಗಳು ಕಪುರ್‌ತಲದ ಅರಮನೆಯಲ್ಲಿವೆ. ಕೇಶವಯ್ಯ ತಮ್ಮ ಕೊನೆಗಾಲದವರೆಗೂ ಕಪುರ್‌ತಲದ ರಾಜರೊಂದಿಗೆ ಸಂಬಂಧವಿರಿಸಿಕೊಂಡಿದ್ದರು.[೯]

---

೮. ಇಂದು ಕಪುರ್‌ತಲವು ಪಂಜಾಬ್ ರಾಜ್ಯದ ಒಂದು ಜಿಲ್ಲಾ ಕೇಂದ್ರವಾಗಿದೆ.

೯. ಈ ವಿವರಗಳನ್ನು ಕಪುರ್‌ತಲದ ರಾಜಚರಣ್‌ಜಿತ್ ಸಿಂಗ್ ಮತ್ತು ಕೇಶವಯ್ಯನವರ ನಡುವೆ ನಡೆದಿರುವ ಪತ್ರವ್ಯವಹಾರಗಳಿಂದ ಸಂಗ್ರಹಿಸಿದ್ದೇನೆ. ಇಂದಿಗೂ ಎಲ್ಲ ಮೂಲ ಪತ್ರಗಳು ಕೇಶವಯ್ಯನವರ ಮೊಮ್ಮಗ ಕೆ.ಎನ್. ರಾಜು ಅವರ ಸಂಗ್ರಹದಲ್ಲಿವೆ.

ಲಭ್ಯವಿರುವ ಕೇಶವಯ್ಯನವರ ಎಲ್ಲ ಕೃತಿಗಳನ್ನು ಅವಲೋಕಿಸಿದಾಗ ಈ ಕೆಳಕಂಡ ಅಂಶಗಳು ಸ್ಪಷ್ಟವಾಗುತ್ತವೆ.

ಭಾರತೀಯ ಚಿತ್ರಕಲೆಯಲ್ಲಿ ಒಂದು ಹೊಸ ಅಲೆಯನ್ನು ಸೃಷ್ಟಿಸಿದ ರಾಜಾರವಿವರ್ಮನ ಕೃತಿಗಳಿಗೂ ಕೇಶವಯ್ಯನವರ ಕೃತಿಗಳಿಗೂ ಕೆಲವು ಸಾಮ್ಯತೆಯಿದೆ. ರವಿವರ್ಮನಂತೆ ಇವರಿಗೂ ತೈಲವರ್ಣ ಮಾಧ್ಯಮದ ಮೇಲೆ ವಿಶೇಷ ಒಲವು. ಅವನ ಪರಂಪರೆಯ ಮುಂದುವರಿಕೆಗೆ ಇವರ ಭಾವಚಿತ್ರಗಳು ಗಟ್ಟಿಯಾದ ಉದಾಹರಣೆಯಾಗಿ ನಿಲ್ಲುತ್ತವೆ. ಅಲ್ಲದೆ ಇವರ ಕಲಾಕೃತಿಗಳಲ್ಲಿ ಉಡುಪು, ಆಭರಣಗಳು, ಅವುಗಳ ಮೈವಳಿಕೆ, ಚರ್ಮದ ಮೈವಳಿಕೆ ಇತ್ಯಾದಿ ಬಾಹ್ಯಲಕ್ಷಣಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದಾರೆ. ರವಿವರ್ಮನ ಕಲಾಸೃಷ್ಟಿಯಲ್ಲಿ ಇಂಥ ವಿಶೇಷ ಒಲವಿರುವುದನ್ನು ಇತರ ಕಲಾವಿದರು, ಕಲಾಸಾಹಿತಿಗಳು ಈಗಾಗಲೇ ಗುರುತಿಸಿದ್ದಾರೆ. ರವಿವರ್ಮನು ಅಂಗಾಂಗಗಳ ಸೂಕ್ಷ್ಮ ವಿವರಗಳಿಗಿಂತ ಅವುಗಳನ್ನು ಅಲಂಕರಿಸಿದ ಆಭರಣಗಳಿಗೆ ಹೆಚ್ಚಿನ ಮಹತ್ವ ಕೊಡುತ್ತಾನೆಂಬುದನ್ನು ಅವನ ಕೃತಿಗಳಲ್ಲಿ ನೇರವಾಗಿಯೇ ಕಾಣಬಹುದು.

ಕೇಶವಯ್ಯನವರ ಕೃತಿಗಳಲ್ಲಿ ವ್ಯಕ್ತಿಗಳ ಮುಖಕ್ಕೆ ಮಾತ್ರ ಉಜ್ವಲವಾದ ಬೆಳಕನ್ನು ನೀಡಿ, ಹಿನ್ನೆಲೆಯಲ್ಲಿ ಸ್ವಲ್ಪ ಮಸುಕಾಗಿ ಕಾಣಿಸುವಂತಹ ಕೃತಕ ನೆರಳು-ಬೆಳಕನ್ನು ಕಾಣಬಹುದು. ಅಲ್ಲದೆ ಒಮ್ಮೊಮ್ಮೆ ಕೇಂದ್ರವಸ್ತುವಿಗೆ ಸಿಗಬೇಕಾದ ಒತ್ತನ್ನು ಮೀರಿ ವಿವರಗಳೇ ಮುಖ್ಯವಾದುವು ಎನಿಸುತ್ತದೆ. ಸಂಯೋಜನಾ ಚಿತ್ರಗಳಲ್ಲಿ ವೈಭವೀಕರಣವಿದೆ.

ಕೇಶವಯ್ಯನವರ ಸಮಕಾಲೀನ ಕಲಾವಿದರ ಕೃತಿಗಳಲ್ಲಿ ಕುಂಚದ ನೇರ ಬೀಸುಗಳನ್ನು ಕಂಡರೆ, ಕೇಶವಯ್ಯನವರ ಕೃತಿಗಳಲ್ಲಿ ಇದು ಕಾಣಿಸದು. ಬಣ್ಣಗಳನ್ನು ಬೆರಸಿ ಮೃದುವಾಗಿ ಲೇಪಿಸಿದ್ದಾರೆ. ಇದು ಮದ್ರಾಸ್ ಸ್ಕೂಲ್ ಆಫ್ ಆರ್ಟ್ಸ್ ಮತ್ತು ರವಿವರ್ಮನ ಬಳಿ ಕಲಿತ ಪ್ರಭಾವವೇ ಆಗಿದೆ.

ಕೇಶವಯ್ಯ ತಮ್ಮ ಕೃತಿಗಳಲ್ಲಿ ನೆರಳು-ಬೆಳಕು, ಮೈವಳಿಕೆ, ಹಿನ್ನೆಲೆ-ಮುನ್ನೆಲೆ ಇತ್ಯಾದಿಗಳನ್ನು ಸೂಕ್ಷ್ಮವಾಗಿ ಗಮನಿಸಿ ದುಡಿಸಿಕೊಂಡಿರುವವರಾದರೂ ಅವರ ಕೆಲವು ಕೃತಿಗಳಲ್ಲಿ ಒಂದು ರೀತಿಯ ಏಕತಾನತೆಯನ್ನು ಕಾಣಬಹುದು. ಜೊತೆಗೆ ಎಲ್ಲ ಚಿತ್ರಗಳನ್ನು ಛಾಯಾಚಿತ್ರವನ್ನಿಟ್ಟುಕೊಂಡು ರಚಿಸಿರುವುದರಿಂದ ವ್ಯಕ್ತಿಗಳೆಲ್ಲಾ ನಿಶ್ಚಲವಾಗಿ ಸ್ತಬ್ಧಚಿತ್ರಗಳಂತೆ ನಿಂತಿರುವುದನ್ನು ಗಮನಿಸಬಹುದು.

ಕೇಶವಯ್ಯ ಭೂದೃಶ್ಯ, ಸಂಯೋಜನಾ ಚಿತ್ರಗಳಿಗಿಂತ ಹೆಚ್ಚಾಗಿ ಭಾವಚಿತ್ರ ಕಲೆಯಲ್ಲಿ ನಿಷ್ಣಾತರಾಗಿದ್ದರು. ಛಾಯಾಚಿತ್ರ ತೆಗೆದಂತೆ ಭಾಸವಾಗುವ ಛಾಯಾಂತರಗಳನ್ನು ಇವರು ಅಧಿಕವಾಗಿ ಬಳಸಿಕೊಂಡಿದ್ದಾರೆ. ತೈಲವರ್ಣ, ಜಲವರ್ಣ ಮತ್ತು ಇದ್ದಿಲುಕಡ್ಡಿಗಳ ಬಳಕೆಯಲ್ಲಿ ಪ್ರಭುತ್ವ ಸಾಧಿಸಿದ್ದರು.

ಒಟ್ಟಾರೆ ಆಗತಾನೇ ಛಾಯಾಚಿತ್ರ ಬಂದ ಆ ಕಾಲದಲ್ಲಿ ವಾಸ್ತವವಾದಿ ಚಿತ್ರಕಲಾವಿದರೆಲ್ಲಾ ಆತಂಕಗೊಂಡರೆ ಕೇಶವಯ್ಯನವರು ಛಾಯಾಚಿತ್ರಗಳನ್ನೇ ಬಳಸಿಕೊಂಡು ಸೃಜನಶೀಲ ಕಲಾಕೃತಿಗಳನ್ನು ರಚಿಸಿದ್ದು ಗಮನಾರ್ಹ.



*ದಸರಾ ಪ್ಯಾನೆಲ್ ನಂ. ೧೪ (ವಿವರ)*
*೧೩ x ೭೧/೨, ತೈಲವರ್ಣ*
*ಸಂಗ್ರಹ: ಮುಖ್ಯ ಅರಮನೆ.*

***Dasara Panel No. 14** (detail)*
*13 x 7 1/2, Oil*
*Collection: Main Palace.*



*ಸರ್. ಎಂ. ವಿಶ್ವೇಶ್ವರಯ್ಯ, ತೈಲವರ್ಣ*
*ಸಂಗ್ರಹ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಂ.*

Sir M. Visveshwariah, Oil
*Collection: Banquet Hall, Vidhana Soudha, B'lore*

ಕೇಶವಯ್ಯ ಉತ್ತಮ ಚಿತ್ರಕಲಾವಿದರು ಮಾತ್ರವಲ್ಲದೆ ಕಲಾಬರಹಗಾರರೂ ಆಗಿದ್ದರೆಂದು ತಿಳಿಯುತ್ತದೆ. ಜೂನ್ ೬, ೧೯೨೫ರಂದು ಕೇಶವಯ್ಯ ಅರಮನೆಗೆ ಬರೆದಿರುವ ಪತ್ರದಲ್ಲಿ ಶಿಕ್ಷಣ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್ ಅವರು ತಮಗೆ ಚಿತ್ರಕಲೆಯ ಮೇಲೆ ಪುಸ್ತಕವೊಂದನ್ನು ಬರೆಯಲು ಹೇಳಿದ್ದಾರೆಂದು ಬರೆದುಕೊಂಡಿದ್ದಾರೆ. ಕೇಶವಯ್ಯನವರ ಸಮಕಾಲೀನ ಕಲಾವಿದ ಕೆ. ವೆಂಕಟಪ್ಪನವರು ೧೯೪೧ರ ಡಿಸೆಂಬರ್ ೧೮ ರಂದು ಬರೆದುಕೊಂಡಿರುವ ದಿನಚರಿಯೂ ಇದನ್ನು ದೃಢಪಡಿಸುತ್ತದೆ.[೧೦] ಇದರಲ್ಲಿ "ಮೈಸೂರು ರಾಜ್ಯದ ಗಣತಿಯ ಕಮೀಷನರ್ ಪಿ.ಹೆಚ್. ಕೃಷ್ಣರಾವ್ ಬಂದರು. ಕಳೆದ ೬೦ ವರ್ಷಗಳಲ್ಲಿ ರಾಜ್ಯ ಲಲಿತಕಲೆಗಳಲ್ಲಿ ಸಾಧಿಸಿದ ಪ್ರಗತಿಯ ಬಗ್ಗೆ ಜನರಿಗೆ ತಿಳಿಸಲು ಯಾರಿಂದ ಲೇಖನಗಳನ್ನು ಬರೆಸಬೇಕೆಂಬ ಸಲಹೆ ಕೇಳಿದರು. ಚಿತ್ರಕಲೆಯ ಬಗ್ಗೆ ಕೆ. ಕೇಶವಯ್ಯನವರಿಂದ, ಸಂಗೀತದ ಬಗ್ಗೆ ವೆಂಕಟಗಿರಿಯಪ್ಪನವರಿಂದ ಬರೆಸಬಹುದೆಂದು ಸಲಹೆ ನೀಡಿದೆ" ಎಂದು ಬರೆದುಕೊಂಡಿದ್ದಾರೆ. ಆದರೆ ದುರಾದೃಷ್ಟವಶಾತ್ ಕೇಶವಯ್ಯನವರು ಇಂಗ್ಲೀಷ್‌ನಲ್ಲಿ ಮೈಸೂರು ಮಹಾರಾಜರಿಗೆ, ಕಪುರ್‌ತಲದ ರಾಜರಿಗೆ, ಸ್ನೇಹಿತರಿಗೆ ಬರೆದ ಕೆಲವೊಂದು ಪತ್ರಗಳನ್ನು ಹೊರತುಪಡಿಸಿದರೆ ಕಲೆ ಕುರಿತು ಬರೆದ ಯಾವ ಲೇಖನಗಳೂ ದೊರೆಯುವುದಿಲ್ಲ.

## ಶಿಷ್ಯ ವೃಂದ

ಕೇಶವಯ್ಯನವರ ಶಿಷ್ಯಬಳಗ ಬಹು ದೊಡ್ಡದು. ಹಿರಿಯ ಕಲಾವಿದರೆಂದು ಖ್ಯಾತರಾದವರೆಲ್ಲರೂ ಅವರ ಶಿಷ್ಯರೇ ಆಗಿದ್ದರು. ಸಮಕಾಲೀನ ಕಾಲದಲ್ಲಿ ರಾಷ್ಟ್ರಖ್ಯಾತಿ ಪಡೆದಿದ್ದ ದಿವಂಗತ ವೈ. ನಾಗರಾಜು, ವೈ. ಸುಬ್ರಹ್ಮಣ್ಯರಾಜು, ಎನ್. ಹನುಮಯ್ಯ, ಭಾಸ್ಕರರಾಜು, ಎಂ. ನರಸಿಂಹಮೂರ್ತಿ, ಎಸ್. ನಂಜುಂಡಸ್ವಾಮಿ, ಎಫ್.ಎಂ. ಸೂಫಿ, ಬಿ.ಹೆಚ್. ರಾಮಚಂದ್ರ, ಅಬ್ದುಲ್ ಅಜೀಜ್, ಎಂ.ಎ. ಕೃಷ್ಣಸ್ವಾಮಿ, ನಾರಾಯಣ್, ಪಿ.ವಿ. ಕೇಶವಮೂರ್ತಿ, ಎನ್.ಎಸ್. ಸುಬ್ಬುಕೃಷ್ಣ ಮುಂತಾದವರೆಲ್ಲಾ ಕೇಶವಯ್ಯನವರ ಶಿಷ್ಯರೇ ಆಗಿದ್ದರು. ಈಗಲೂ ನಮ್ಮ ನಡುವೆಯಿರುವ, ಇಂದಿಗೂ ಕಲಾರಚನೆಯಲ್ಲಿ ಕ್ರಿಯಾಶೀಲರಾಗಿರುವ ಮೈಸೂರಿನ ಶ್ರೀ ರಾಮನರಸಯ್ಯ ಮತ್ತು ಶ್ರೀ ಕುಪ್ಪಾಚಾರಿ ಅವರುಗಳೂ ಕೇಶವಯ್ಯನವರ ಅಚ್ಚುಮೆಚ್ಚಿನ ಶಿಷ್ಯರೇ ಆಗಿದ್ದರು. ಕೇಶವಯ್ಯ ಮೈಸೂರಿನ ಮಹಾರಾಣಿ ಕಾಲೇಜು, ನಾರ್ಮಲ್ ಸ್ಕೂಲ್ ಮತ್ತು ಚಾಮರಾಜೇಂದ್ರ ತಾಂತ್ರಿಕ ಕಲಾಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಸೇವೆಸಲ್ಲಿಸುತ್ತಿದ್ದ ಅವಧಿಯಲ್ಲಿ ನೂರಾರು ಪ್ರತಿಭಾವಂತ ಕಲಾವಿದರು ತಯಾರಾದರು.

ಕೇಶವಯ್ಯ ಚಾಮರಾಜೇಂದ್ರ ತಾಂತ್ರಿಕ ಕಲಾಶಾಲೆಯಲ್ಲಿ ಮುಖ್ಯ ಶಿಕ್ಷಕರಾಗಿದ್ದಾಗ ತಮ್ಮ ಸಹೋದ್ಯೋಗಿಗಳಿಗೂ, ಶಿಷ್ಯರಿಗೂ ಮೇಲಿಂದ ಮೇಲೆ ಪ್ರೋತ್ಸಾಹ ನೀಡುತ್ತಿದ್ದರು. ತಾವು ಪಾಶ್ಚಾತ್ಯ ಕಲಾಸಂಪ್ರದಾಯದಲ್ಲಿ ಕಲಿತು ಬಂದವರಾಗಿದ್ದರೂ ಸಂಪ್ರದಾಯ ಕೃತಿಗಳ ಬಗ್ಗೆ ಒಲವಿರಿಸಿಕೊಂಡಿದ್ದರು. ಆಗಾಗ್ಗೆ

೧೦. ಕೆ.ವಿ. ಸುಬ್ರಹ್ಮಣ್ಯಂ: ವೆಂಕಟಪ್ಪ: ಸಮಕಾಲೀನ ಪುನರಾವಲೋಕನ, ಪುಟ ೩೩, ಚಿತ್ರಕಾವ್ಯ ಪ್ರಕಾಶನ, ಬಾಪೂಜಿನಗರ, ಬೆಂಗಳೂರು-೨೬.

ಕಾಲೇಜಿನಲ್ಲಿ ಸಾಂಪ್ರದಾಯಿಕ ಚಿತ್ರಕಲಾ ಕಾರ್ಯಾಗಾರವನ್ನು ಏರ್ಪಡಿಸುತ್ತಿದ್ದರು. ತಮ್ಮ ವಿದ್ಯಾರ್ಥಿಗಳಿಗೆ ಸಹಾಯಹಸ್ತ ನೀಡುವುದರಲ್ಲೂ ಕೇಶವಯ್ಯನವರದು ಯಾವಾಗಲೂ ಎತ್ತಿದ ಕೈ. ವಿಶೇಷವಾಗಿ ಬಡವಿದ್ಯಾರ್ಥಿಗಳನ್ನು ಕಂಡರೆ ಪ್ರೀತಿ. ಅಂಥವರಿಗೆ ಹೇಗಾದರೂ ಮಾಡಿ ಮಹಾರಾಜರ ಮನವೊಲಿಸಿ ವಿದ್ಯಾರ್ಥಿವೇತನ ಕೊಡಿಸುತ್ತಿದ್ದರು. ಇದಕ್ಕೆ ಅತ್ಯುತ್ತಮ ಉದಾಹರಣೆಯೆಂದರೆ ನಂಜುಂಡಸ್ವಾಮಿಯವರಿಗೆ ಮುಂಬೈನ ಜೆ.ಜೆ. ಕಲಾಶಾಲೆಯಲ್ಲಿ ಅಭ್ಯಾಸ ಮಾಡಲು ಮಹಾರಾಜರಿಂದ ಕೊಡಿಸಿದ ನೆರವು. ಒಟ್ಟಾರೆ "ಕೇಶವಯ್ಯನವರ ಜೀವಿತದ ಮುಖ್ಯಗುರಿ ಶಿಷ್ಯರನ್ನು ತಯಾರು ಮಾಡುವುದೇ ಆಗಿದೆ" ಎಂಬುದನ್ನು ಸ್ವತಃ ಕೇಶವಯ್ಯನವರೇ ಹೇಳಿರುವುದನ್ನು ರುಮಾಲೆ ಚೆನ್ನಬಸವಯ್ಯನವರು ೧೯೪೬ರಲ್ಲಿ ತಾವು ಪ್ರಕಟಿಸಿರುವ 'ನಮ್ಮ ಲಲಿತ ಕಲಾವಿದರು' ಎಂಬ ಪುಸ್ತಕದಲ್ಲಿ ಪ್ರಸ್ತಾಪಿಸಿದ್ದಾರೆ.

ನಿವೃತ್ತಿಯಾದ ನಂತರವೂ ಇವರೊಂದಿಗೆ ಯಾವಾಗಲೂ ಇಬ್ಬರು ಮೂವರು ಕಲಾವಿದ್ಯಾರ್ಥಿಗಳು ಇದ್ದೇ ಇರುತ್ತಿದ್ದರು. ಅನೇಕ ವಿದ್ಯಾರ್ಥಿಗಳು ಇವರ ಮನೆಯಲ್ಲಿನ ಸ್ಟುಡಿಯೋದಲ್ಲೇ ಇದ್ದು ಕಲಾಭ್ಯಾಸ ಮಾಡುತ್ತಿದ್ದರು. ಅಂತೆಯೇ ಕೇಶವಯ್ಯ ತಾವು ರಚಿಸುತ್ತಿದ್ದ ಕಲಾಕೃತಿಗಳಿಗೆ ತಮ್ಮ ಶಿಷ್ಯವರ್ಗದ ಸಹಾಯವನ್ನು ಪಡೆಯುತ್ತಿದ್ದುದು ತಿಳಿದು ಬರುತ್ತದೆ.

ಕೇಶವಯ್ಯ ಚಾಮರಾಜೇಂದ್ರ ತಾಂತ್ರಿಕ ಕಲಾಶಾಲೆಯಲ್ಲಿ ಕಲಾಧ್ಯಾಪಕರಾಗಿದ್ದಾಗ ಮತ್ತು ಆನಂತರವೂ ಅವರನ್ನು ಸಮೀಪದಿಂದ ಬಲ್ಲ ಅವರ ಶಿಷ್ಯ ರಾಮನರಸಯ್ಯನವರು "ಕೇಶವಯ್ಯನವರು ನಮಗೆ ಭಾವಚಿತ್ರ ರಚಿಸುವುದನ್ನು ಹೇಳಿಕೊಡುತ್ತಿದ್ದರು. ಅವರು ರಚಿಸುತ್ತಿದ್ದ ಭಾವಚಿತ್ರಗಳು ಪ್ರಶಾಂತವಾಗಿದ್ದು ಎಲ್ಲರ ಮೆಚ್ಚುಗೆಗೆ ಪಾತ್ರವಾಗುತ್ತಿದ್ದವು. ಅಂದು ಭಾವಚಿತ್ರ ಕಲಾವಿದರು ಅನೇಕ ಮಂದಿ ಇದ್ದರಾದರೂ ಕೇಶವಯ್ಯನವರಿಂದ ತಮ್ಮ ಚಿತ್ರಬರೆಯಿಸಿಕೊಳ್ಳಲು ಬಹುತೇಕರು ಬಯಸುತ್ತಿದ್ದರು. ಮುಖದ ಮೇಲಿನ ನೆರಳು-ಬೆಳಕು, ಮೆದುತನ, ಗತ್ತು, ಗಾಂಭೀರ್ಯ, ಅಂತಃಸತ್ವ, ಕಣ್ಣಲ್ಲಿ ಜೀವಂತಿಕೆ ತರುವ ಬೆಳಕಿನ ಚುಕ್ಕಿ, ಮೈವಳಿಕೆ ಇತ್ಯಾದಿಗಳನ್ನು ಚಿತ್ರದಲ್ಲಿ ಸೆರೆಹಿಡಿಯುವ ಅವರ ಸಾಮರ್ಥ್ಯವನ್ನು ಕಂಡು ನಾವು ಬೆಕ್ಕಸಬೆರಗಾಗುತ್ತಿದ್ದೆವು. ಅವರು ಚಿತ್ರ ಬಿಡಿಸುವುದನ್ನು ನೋಡುವುದೇ ನಮಗೊಂದು ಖುಷಿ. ಶಾಲೆಯಲ್ಲಿ ಒಂದು ನಿಮಿಷವೂ ಪುರುಸೊತ್ತಿಲ್ಲದೆ ದುಡಿಯುತ್ತಿದ್ದರು. ಮನೆಗೆ ಹೋದ ಮೇಲೆ ಸ್ಟುಡಿಯೋದಲ್ಲಿ ಕಾರ್ಯಮಗ್ನರಾಗುತ್ತಿದ್ದರು. ಅನೇಕ ವೇಳೆ ಅವರು ನನ್ನ ಶ್ರದ್ಧೆ, ಜಾಣ್ಮೆ ಮತ್ತು ತಾಳ್ಮೆಗಳನ್ನು ಗಮನಿಸಿ ತಾವು ರಚಿಸುತ್ತಿದ್ದ ಕಲಾಕೃತಿಗಳಿಗೆ ನನ್ನ ಸಹಾಯ ಪಡೆಯುತ್ತಿದ್ದರು. ನಾನು ಅವರಿಗೆ ಕ್ಯಾನ್‌ವಾಸ್ ಸಿದ್ಧಮಾಡಿಕೊಡುವುದು, ವಿವಿಧ ಮಾದರಿಯ ಬ್ರಷ್‌ಗಳನ್ನು ಅಣಿಮಾಡಿಕೊಡುವುದು ಮುಂತಾದ ಕೆಲಸಗಳನ್ನು ಮಾಡುತ್ತಿದ್ದೆ. ಅವರ ಸಾನಿಧ್ಯ ಮತ್ತು ಅವರು ರಚಿಸುತ್ತಿದ್ದ ಕಲಾಕೃತಿಗಳಿಗೆ ಸಹಾಯ ಮಾಡುವ ಸದಾವಕಾಶ ದೊರೆತದ್ದು ನನ್ನ ಭಾಗ್ಯವೇ ಸರಿ. ಹೀಗಾಗಿ ನಾನೊಬ್ಬ ಉತ್ತಮ ಕಲಾವಿದನಾಗಿ ಈ ಮಟ್ಟಕ್ಕೆ ಬರಲು ಸಾಧ್ಯವಾಯಿತು" ಎಂದು ಕೇಶವಯ್ಯನವರನ್ನು ಕೃತಜ್ಞತೆಯಿಂದ ನೆನೆಯುತ್ತಾರೆ.



*ಕೃಷ್ಣಸ್ವಾಮಿ*
*ಬಣ್ಣದ ಛಾಯಾಚಿತ್ರ*
*ಸಂಗ್ರಹ: ಕೆ.ಎನ್. ರಾಜು.*

***Krishnaswamy***
*Color Photograph*
*Collection: K.N. Raju.*

ಈಗ ಅರಮನೆಯ ಕಲ್ಯಾಣಮಂಟಪದಲ್ಲಿನ ದಸರಾ ಪ್ಯಾನೆಲ್‌ಗಳನ್ನು ಮೊದಲಿಗೆ ಜಗನ್ಮೋಹನ ಚಿತ್ರಶಾಲೆಯಲ್ಲಿ ಕ್ಯಾನ್‌ವಾಸ್ ಮೇಲೆ ಸಿದ್ಧಪಡಿಸಿಕೊಂಡು ಆನಂತರ ಅವುಗಳನ್ನು ಕಲ್ಯಾಣಮಂಟಪದ ಗೋಡೆಗಳಿಗೆ ಅಂಟಿಸಲಾಗಿದೆ. ಈ ಕಾರ್ಯದಲ್ಲಿ ಕೇಶವಯ್ಯನವರ ಶಿಷ್ಯರು ಸಕ್ರಿಯರಾಗಿದ್ದರು.



ವೈ. ನಾಗರಾಜು ಚಿತ್ರದಲ್ಲಿ ಕೇಶವಯ್ಯ
(ಮೊದಲನೆಯವರು)
ತೈಲವರ್ಣ, ಸಂಗ್ರಹ: ಮುಖ್ಯ ಅರಮನೆ

*Keshavayya in Y. Nagaraju's painting*
*(First One)*
*Oil, Collection: Main Palace*

## ವೈಯಕ್ತಿಕ ಜೀವನ

ಕೇಶವಯ್ಯನವರ ವೈಯಕ್ತಿಕ ಜೀವನದ ಬಗ್ಗೆ ದೊರೆಯುವ ಮಾಹಿತಿ ಅತ್ಯಲ್ಪ. ಬಾಲ್ಯದಿಂದಲೂ ಅರಮನೆಯ ವಾತಾವರಣದಲ್ಲಿದ್ದುದರಿಂದ ಗಾಂಭೀರ್ಯ, ಶಿಸ್ತು, ಅಚ್ಚುಕಟ್ಟುತನ ಇವರಲ್ಲಿ ಮನೆಮಾಡಿತ್ತು. ಕೇಶವಯ್ಯ ಮದ್ರಾಸ್‌ನಲ್ಲಿ ವಿದ್ಯಾಭ್ಯಾಸ ಮುಗಿಸಿಕೊಂಡು ಮೈಸೂರಿಗೆ ವಾಪಸ್ಸಾದ ವರ್ಷವೇ (೧೯೦೧), ಅರಮನೆಗೆ ಕೆಲಸಕ್ಕೆ ಸೇರುವ ಮುನ್ನವೇ ಮೀನಾಕ್ಷಮ್ಮ ಎಂಬಾಕೆಯನ್ನು ವಿವಾಹವಾದರು. ಅವರು ಕೇಶವಯ್ಯನವರಿಗೆ ಒಂದು ಗಂಡುಮಗು (ಸಿ.ವಿ. ಕೃಷ್ಣಸ್ವಾಮಿ) ಮತ್ತು ಎರಡು ಹೆಣ್ಣುಮಕ್ಕಳನ್ನು (ಜಯಮ್ಮ ಮತ್ತು ನಾಗಮ್ಮ) ಹೆತ್ತುಕೊಟ್ಟರು.

ಕೇಶವಯ್ಯನವರ ಹಿರಿಯರು ಅರಮನೆಯ ನೌಕರಿಯಲ್ಲಿದ್ದರಾದರೂ ಯಾವುದೇ ಮನೆ, ಭೂಮಿ ಇನ್ನಿತರ ಆಸ್ತಿಪಾಸ್ತಿಯನ್ನು ಮಾಡಿರಲಿಲ್ಲ. ಅರಮನೆ ಆವರಣದಿಂದ ಹೊರಗೆ ಬಂದ ನಂತರ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದರು. ಇವರದು ಅವಿಭಕ್ತ ಕುಟುಂಬ. ಬರುತ್ತಿದ್ದ ಅಲ್ಪ ಆದಾಯದಲ್ಲಿ ಮನೆಬಾಡಿಗೆ ಕಟ್ಟಿಕೊಂಡು ಕುಟುಂಬವನ್ನು ನಿಭಾಯಿಸುವುದು ಕಷ್ಟವಾಗುತ್ತಿತ್ತು. ಆದ್ದರಿಂದಲೇ ಕೇಶವಯ್ಯ ಹೆಚ್ಚಿನ ಶಿಕ್ಷಣಕ್ಕಾಗಿ ಮತ್ತೆ ಮದ್ರಾಸ್‌ಗೆ ಹೋಗದೆ ೧೯೦೨ರಲ್ಲಿ ಅರಮನೆ ಕಲಾವಿದರಾಗಿ ಕೆಲಸಕ್ಕೆ ಸೇರಿಕೊಂಡರು. ಆದರೂ ಅವರ ಮನೆಯ ಆರ್ಥಿಕ ಪರಿಸ್ಥಿತಿ ಸುಧಾರಿಸಲೇ ಇಲ್ಲ. ತಂದೆ ಚಿನ್ನಕೇಶವಯ್ಯ ಮತ್ತು ತಾಯಿ ಅಲಮೇಲಮ್ಮ ಆಗಾಗ್ಗೆ ಅನಾರೋಗ್ಯದಿಂದ ಬಳಲುತ್ತಿದ್ದರು. ಕೊನೆಗೆ ಚಿನ್ನಕೇಶವಯ್ಯ ತಮ್ಮ ೬೧ನೇ ವಯಸ್ಸಿನಲ್ಲಿ ೧೭ನೇ ಮೇ ೧೯೧೦ರಂದು ಇನ್ನಿಲ್ಲವಾದರು. ಇದರಿಂದ ಕೇಶವಯ್ಯ ಮತ್ತಷ್ಟು ಜರ್ಜರಿತರಾದರು. ಆತ್ಮಸ್ಥೈರ್ಯವೇ ಕುಗ್ಗಿಹೋಯಿತು. ಸಂಸಾರ ಸಾಗಿಸುವುದು ಕಷ್ಟವಾಯಿತು. ಇದನ್ನು ಕೇಶವಯ್ಯ ಮಹಾರಾಜರ ಗಮನಕ್ಕೆ ತಂದರು. ಮಹಾರಾಜರು ಕೂಡಲೇ ಕೇಶವಯ್ಯನವರ ಕಷ್ಟಗಳಿಗೆ ಸ್ಪಂದಿಸಿ, ೧೦ ರೂ. ಇದ್ದ ಸಂಬಳವನ್ನು ಜುಲೈ ೧೯೧೦ರ ವೇಳೆಗೆ ೧೫ ರೂ.ಗಳಿಗೆ ಏರಿಸಿದ್ದಲ್ಲದೆ, ಪ್ರತ್ಯೇಕವಾಗಿ ಮಹಾರಾಣಿ ಕಾಲೇಜಿನಲ್ಲಿ ೩೦ ರೂ. ಸಂಬಳಕ್ಕೆ ಚಿತ್ರಕಲಾ ಶಿಕ್ಷಕರಾಗಿ ಸರ್ಕಾರಿ ಸೇವೆಸಲ್ಲಿಸಲು ಅನುಮತಿ ನೀಡಿದರು. ಇದೇ ಅವಧಿಯಲ್ಲಿ ಕೇಶವಯ್ಯ ಮೂರು ವರ್ಷಗಳ ಕಾಲ ನಾರ್ಮಲ್ ಸ್ಕೂಲ್‌ನಲ್ಲಿ ಉಪಾಧ್ಯಾಯ ವೃತ್ತಿ ಕಲಿಯುವವರಿಗೆ ಕಲಾಶಿಕ್ಷಣ ನೀಡುತ್ತಿದ್ದರು. ಈ ಮಧ್ಯೆ ಕೇಶವಯ್ಯನವರಿಗೆ ಇನ್ನೊಂದು ಆಘಾತವಾಯಿತು. ತಂದೆ ಸತ್ತ ಕೆಲವೇ ದಿನಗಳಲ್ಲಿ ಪ್ರೀತಿಪಾತ್ರರಾದ ಅತ್ತೆ (ತಂದೆಯವರ ದೊಡ್ಡ ತಂಗಿ) ಕೂಡ ಕಾಲವಾದರು. ಜೊತೆಗೆ ಅತ್ತೆಯ ವಿಧವೆ ಮಗಳ ರಕ್ಷಣೆಯ ಸಂಪೂರ್ಣ ಜವಾಬ್ದಾರಿಯನ್ನು ಕೇಶವಯ್ಯನವರೇ ಹೊರಬೇಕಾಯಿತು. ಏಕೆಂದರೆ ಅವಳಿಗೆ ಮಕ್ಕಳಾಗಲೀ, ಬೇರೆ ಯಾವ ಬಂಧುಬಳಗದವರಾಗಲೀ ಇರಲಿಲ್ಲ.

ಚಾಮರಾಜೇಂದ್ರ ತಾಂತ್ರಿಕ ಕಲಾಶಾಲೆ
ಮೈಸೂರು

*Chamarajendra Technical Institute, Mysore*




ಸಜ್ಜನಿಕೆಯೇ ಮೂರ್ತಿವೆತ್ತಂತಿದ್ದ ಕೇಶವಯ್ಯನವರ ಉಡುಗೆ ಅತ್ಯಂತ ಸರಳವಾಗಿತ್ತು. ಮಲ್ ಪಂಚೆಯನ್ನು ತೊಡುತ್ತಿದ್ದರು. ಅಂಗಿಯ ಮೇಲೆ ಅಚ್ಚುಕಟ್ಟಾಗಿ ಟೈಕಟ್ಟಿ, ಕೋಟನ್ನು ಹಾಕುತ್ತಿದ್ದರು. ಚಪ್ಪಲಿಯನ್ನು ಅಪರೂಪವಾಗಿ ಬಳಸುತ್ತಿದ್ದು, ಕಟ್ ಷೂವನ್ನು ಹೆಚ್ಚಿಗೆ ಬಳಸುತ್ತಿದ್ದರು. ಬಟ್ಟೆಗಳನ್ನು ಕಡ್ಡಾಯವಾಗಿ ಇಸ್ತ್ರಿ ಮಾಡಲೇಬೇಕಿತ್ತು. ಪ್ರತಿದಿನವೂ ತಪ್ಪದೇ ಮುಖಕ್ಷೌರ ಮಾಡುತ್ತಿದ್ದರು. ಹಣೆಯ ಮೇಲೆ ನಾಮ, ತಲೆಯ ಮೇಲೆ ಮೈಸೂರುಪೇಟ ವಿರಾಜಿಸುತ್ತಿತ್ತು.

ತಮ್ಮ ಜನಾಂಗದಲ್ಲೂ ಕೇಶವಯ್ಯನವರು ಎಲ್ಲರಿಗೂ ಅಚ್ಚುಮೆಚ್ಚು. ಅವರು ಅರಮನೆಯಲ್ಲಿ ಉನ್ನತ ಸ್ಥಾನಪಡೆದಿದ್ದರೂ ಎಲ್ಲರೊಂದಿಗೂ ಬೆರೆಯುತ್ತಿದ್ದರು. ಕುಲಬಾಂಧವರ ಎಲ್ಲ ಕಾರ್ಯಕ್ರಮಗಳಲ್ಲಿ ತಪ್ಪದೇ ಭಾಗವಹಿಸುತ್ತಿದ್ದರು. ಇವರನ್ನು 'ಯಜಮಾನ್ ಕೇಶವಯ್ಯ'ನವರೆಂದೇ ಕರೆಯಲಾಗುತ್ತಿತ್ತು.

ಕೇಶವಯ್ಯ ಕೆಲವರ್ಷಗಳ ಕಾಲ ಇಂಡಸ್ಟ್ರಿಯಲ್ ಸ್ಕೂಲ್‌ನಲ್ಲೂ ಕಲಾಶಿಕ್ಷಕರಾಗಿ ಸೇವೆಸಲ್ಲಿಸಿದರು. ಆನಂತರ ೧೯೧೮ರಲ್ಲಿ ಚಾಮರಾಜೇಂದ್ರ ತಾಂತ್ರಿಕ ಕಲಾಶಾಲೆಯಲ್ಲಿ ಕಲಾಬೋಧಕರಾಗಿ ಬಡ್ತಿ ಪಡೆದರು. ಕೊನೆಗೆ ಅಲ್ಲೇ ೧೯೩೩ರಲ್ಲಿ ನಿವೃತ್ತರಾದರು. ತರುವಾಯ ಇವರನ್ನು ಮಹಾರಾಜರು ಅರಮನೆಯ ಮುಖ್ಯ ಕಲಾವಿದರನ್ನಾಗಿ ನೇಮಿಸಿಕೊಂಡರು. ಇವರ ನೇತೃತ್ವದಲ್ಲೇ ಇಂದು ಮೈಸೂರು ಅರಮನೆಯ ಮುಖ್ಯ ಆಕರ್ಷಣೆಯಾದ ಕಲ್ಯಾಣ ಮಂಟಪದಲ್ಲಿನ ದಸರಾ ಪ್ಯಾನೆಲ್‌ಗಳ ರಚನೆಯಾದವು. ಸ್ವಲ್ಪಕಾಲದ ನಂತರ ಕೇಶವಯ್ಯ ಕಪುರ್‌ತಲದ ಮಹಾರಾಜ ರಾಜಚರಣ್‌ಜಿತ್ ಸಿಂಗ್‌ರ ಅತಿಥಿಯಾಗಿ ಕಪುರ್‌ತಲಕ್ಕೆ ಭೇಟಿನೀಡಿದರು. ಬರುವಾಗ ಪ್ರಮುಖ ಸ್ಥಳಗಳನ್ನೆಲ್ಲಾ ನೋಡಿಕೊಂಡು ಬಂದರು.

ಕೇಶವಯ್ಯ ಕೊನೆಗಾಲದವರೆಗೂ ಚಿತ್ರರಚನೆಯಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದರು. ಅರಮನೆಯಿಂದ ನಿವೃತ್ತರಾದ ನಂತರ ಮನೆಯಲ್ಲಿನ ಸ್ಟುಡಿಯೋದಲ್ಲಿ ಕಾರ್ಯಮಗ್ನರಾಗಿದ್ದರು. ಬೆಳಿಗ್ಗೆ ೯ ಗಂಟೆಯಿಂದ ರಾತ್ರಿ ೯ ಗಂಟೆಯವರೆಗೆ ಕೆಲಸ ಮಾಡುತ್ತಿದ್ದರು. ಇವರ ದೇಹಕ್ಕೆ ವಯಸ್ಸಾಯಿತೇ ಹೊರತು ಕುಂಚಗಳಿಗೆ ಮುಪ್ಪಾಗಲಿಲ್ಲ. ಅಂತೆಯೇ ಬೇಡಿಕೆ ಕೂಡ ಒಂದಿನಿತೂ ಕಡಿಮೆಯಾಗಿರಲಿಲ್ಲ. ಮಹಾರಾಜರಾದಿಯಾಗಿ ಎಲ್ಲರಿಗೂ ಕೇಶವಯ್ಯನವರೇ ಭಾವಚಿತ್ರ ರಚಿಸಿಕೊಡಬೇಕಿತ್ತು. ಇವರು ರಚಿಸಿದ ಕೊನೆಯ ಚಿತ್ರವೆಂದರೆ ಕರ್ನಾಟಕದ ಮೊದಲನೆಯ ಮುಖ್ಯಮಂತ್ರಿ ಕೆ.ಸಿ. ರೆಡ್ಡಿಯವರ ಭಾವಚಿತ್ರ. ಹೀಗೆ ಕೊನೆಯವರೆಗೂ ಬಣ್ಣ, ಕುಂಚ, ಕ್ಯಾನ್‌ವಾಸ್‌ಗಳೊಂದಿಗೆ ಬೆರೆತುಹೋಗಿದ್ದ ಕೇಶವಯ್ಯನವರು ಆಗಸ್ಟ್ ೨೯, ೧೯೫೪ರಂದು ಹೃದಯಸಂಬಂಧೀ ಖಾಯಿಲೆಯಿಂದ ಬಳಲಿ ಸ್ವರ್ಗಸ್ಥರಾದರು.

# ಕಲಾಗುರು ಕೇಶವಯ್ಯನವರ ಜೀವನದ ಮೈಲಿಗಲ್ಲುಗಳು

೧೮೭೮ - ಮೈಸೂರಿನಲ್ಲಿ ಜನನ.

೧೮೯೮ - ಮದ್ರಾಸ್ ಸ್ಕೂಲ್ ಆಫ್ ಆರ್ಟ್ಸ್‌ಗೆ ಪ್ರವೇಶ.

೧೯೦೧ - ಡಿಪ್ಲೋಮೊ ಪದವಿಯೊಂದಿಗೆ ಮೈಸೂರಿಗೆ ವಾಪಸ್ಸಾದರು.

೧೯೦೧ - ಮೀನಾಕ್ಷಮ್ಮನವರೊಂದಿಗೆ ವಿವಾಹ.

೧೯೦೨ - ಅರಮನೆಯಲ್ಲಿ ಚಿತ್ರಕಲಾವಿದರಾಗಿ ಕೆಲಸಕ್ಕೆ ಸೇರಿದರು.

೧೯೦೪ - ಕಲಾವಿದ ರವಿವರ್ಮನಿಂದ ಚಿತ್ರಕಲೆಯ ಬಗ್ಗೆ ಮಾರ್ಗದರ್ಶನ.

೧೯೦೪ - ರವಿವರ್ಮನ 'ಧ್ಯಾನಮಗ್ನ' ಕೃತಿಯನ್ನು 'ನಿರೀಕ್ಷೆ' ಶೀರ್ಷಿಕೆಯಲ್ಲಿ ನಕಲು ಮಾಡಿದರು.

೧೯೧೦ - ನಾಲ್ವಡಿಯವರು ಕುದುರೆಯ ಮೇಲೆ ಕುಳಿತಿರುವ ಕಲಾಕೃತಿಯ ರಚನೆ.
(ಸಂಗ್ರಹ: ರೆಸಿಡೆನ್ಷಿಯಲ್ ಮ್ಯೂಸಿಯಂ, ಮೈಸೂರು)

೧೯೧೦ - ತಂದೆ ಚಿನ್ನಕೇಶವಯ್ಯನವರ ಮರಣ.

೧೯೧೮ - ಚಾಮರಾಜೇಂದ್ರ ತಾಂತ್ರಿಕ ಕಲಾಶಾಲೆಯಲ್ಲಿ ಕಲಾಬೋಧಕರಾಗಿ ಸೇರ್ಪಡೆ.

೧೯೨೦ - ಕೆಂಪನಂಜಮ್ಮಣ್ಣಿಯವರ ಭಾವಚಿತ್ರ ರಚನೆ.
(ಸಂಗ್ರಹ: ರೆಸಿಡೆನ್ಷಿಯಲ್ ಮ್ಯೂಸಿಯಂ, ಮೈಸೂರು)

೧೯೨೧ - ಚಾಮರಾಜ ಒಡೆಯರ ಭಾವಚಿತ್ರ ರಚನೆ. (ಸಂಗ್ರಹ: ಮಿಥಿಕ್ ಸೊಸೈಟಿ, ಬೆಂಗಳೂರು)

೧೯೨೯ - ಮಿರ್ಜಾ ಇಸ್ಮಾಯಿಲ್‌ರವರ ಭಾವಚಿತ್ರ ರಚನೆ. (ಸಂಗ್ರಹ: ಜಗನ್ಮೋಹನ ಚಿತ್ರಶಾಲೆ)

೧೯೨೯ - ನಾಲ್ವಡಿಯವರ ಭಾವಚಿತ್ರ ರಚನೆ. (ಸಂಗ್ರಹ: ಮುಖ್ಯ ಅರಮನೆ)

೧೯೩೩ - ಚಾಮರಾಜ ಒಡೆಯರ ನೈಜಪ್ರಮಾಣದ ಭಾವಚಿತ್ರ ರಚನೆ.
(ಸಂಗ್ರಹ: ಚಾಮರಾಜೇಂದ್ರ ತಾಂತ್ರಿಕ ಕಲಾಶಾಲೆಯ ಪಕ್ಕದಲ್ಲಿನ ಮಾರಾಟ ಮಳಿಗೆ)

೧೯೩೩ - ಚಾಮರಾಜೇಂದ್ರ ತಾಂತ್ರಿಕ ಕಲಾಶಾಲೆಯಿಂದ ನಿವೃತ್ತಿ.

೧೯೩೪ - ದಸರಾ ಪ್ಯಾನೆಲ್‌ಗಳ ರಚನೆಯ ಉಸ್ತುವಾರಿ.

೧೯೩೪ - ದಸರಾ ಪ್ಯಾನೆಲ್ ನಂ. ೧ರ ರಚನೆ.

೧೯೪೧ - ದಸರಾ ಪ್ಯಾನೆಲ್ ನಂ. ೧೯ರ ರಚನೆ.


೧೯೪೧ - ಜಯಚಾಮರಾಜ ಒಡೆಯರ ಭಾವಚಿತ್ರ ರಚನೆ. (ಸಂಗ್ರಹ: ಮಿಥಿಕ್ ಸೊಸೈಟಿ, ಬೆಂ.)

೧೯೪೫ - ದಸರಾ ಪ್ಯಾನೆಲ್‌ಗಳ ರಚನೆ ಮುಕ್ತಾಯ. ಮಹಾರಾಜರಿಗೆ ಸಮರ್ಪಣೆ.

೧೯೫೦ - ಯುವರಾಜ ಶ್ರೀಕಂಠೀರವ ನರಸಿಂಹರಾಜ ಒಡೆಯರ್ ಅವರು ಪಂಚೆಯಲ್ಲಿರುವ
ಕಲಾಕೃತಿಯ ರಚನೆ. (ಸಂಗ್ರಹ: ರೆಸಿಡೆನ್ಷಿಯಲ್ ಮ್ಯೂಸಿಯಂ, ಮೈಸೂರು)

೧೯೫೩ - ಕೇಶವಯ್ಯನವರ ಕೊನೆಯ ಚಿತ್ರ ಕೆ.ಸಿ. ರೆಡ್ಡಿಯವರ ಭಾವಚಿತ್ರ ರಚನೆ.

೧೯೫೪ - ಹೃದಯ ಸಂಬಂಧೀ ಖಾಯಿಲೆಯಿಂದ ಬಳಲಿ ಸ್ವರ್ಗಸ್ಥರಾದರು.



ಶೀರ್ಷಿಕೆ ತಿಳಿಯದು, ಜಲವರ್ಣ, ಸಂಗ್ರಹ: ಕೆ.ಎನ್. ರಾಜು

***Title not known,*** *Water Color, Collection: K.N. Raju*




ನಾಲ್ವಡಿ ಕೃಷ್ಣರಾಜ ಒಡೆಯರು, ತೈಲವರ್ಣ, ಸಂಗ್ರಹ: ಸರ್ಕಾರಿ ಕಲಾ ಕಾಲೇಜು, ಬೆಂಗಳೂರು.
***Nalvadi Krishnaraja Wodeyar,*** *Oil, Collection: Govt. Arts College, Bangalore.*



*ಕೆಂಪನಂಜಮ್ಮಣ್ಣಿಯವರು (ವಿವರ), ತೈಲವರ್ಣ, ಸಂಗ್ರಹ: ಮುಖ್ಯ ಅರಮನೆ.*

***Kempananjammanni*** *(detail), Oil, Collection: Main Palace.*



ಗೋಪಾಲಕೃಷ್ಣ ರಾಜು, ಬಣ್ಣದ ಛಾಯಚಿತ್ರ, ಸಂಗ್ರಹ: ಗೋಪಾಲಕೃಷ್ಣ ರಾಜು

**Gopalakrishna Raju,** Color Photograph, Collection: Gopalakrishna Raju



ಶೀರ್ಷಿಕೆ ತಿಳಿಯದು, ಜಲವರ್ಣ, ಸಂಗ್ರಹ: ಕೆ.ಎನ್. ರಾಜು, ಬೆಂ.

**Title not known,** *Water, Collection: K.N. Raju, B'lore.*



ಮಿರ್ಜಾ ಇಸ್ಮಾಯಿಲ್, ೧೯೨೯, ತೈಲವರ್ಣ, ಸಂಗ್ರಹ: ಜಗನ್ಮೋಹನ ಚಿತ್ರಶಾಲೆ.
***Mirza Ismail,*** *1929, Oil, Collection: Jaganmohan Art Gallery.*



ಅಲಮೇಲಮ್ಮ, ಇದ್ದಿಲುಕಡ್ಡಿ, ಸಂಗ್ರಹ: ಚಿತ್ರಕಲಾ ಪರಿಷತ್ತು, ಬೆಂಗಳೂರು.

***Alamelamma,*** *Charcoal, Collection: CKP, Bangalore.*



ನಾಲ್ವಡಿ ಕೃಷ್ಣರಾಜ ಒಡೆಯರು, ೧೯೨೯, ತೈಲವರ್ಣ, ಸಂಗ್ರಹ: ಮುಖ್ಯ ಅರಮನೆ.

***Nalvadi Krishnaraja Wodeyar,*** *1929, Oil, Collection: Main Palace.*

## K. KESHAVAYYA

A study of K. Keshavayya's (1878 - 1954) art suggests an overview of the art historical changes in India from the premodern art forms to the colonial art practices in the country. The British established the academic schools of art in the country during 1834-35. Before these schools were established, the Indian art scene witnessed a number of 'traditional styles' such as Ajanta, Vijayanagar, Deccani, Mughal among others. The notion of 'individuality' was rather incidental to the typical collaborative works of the art community during this pre-modern phase. Art historically, it is hard either to identify the individual style of an artist or to explore his personality here. The artists remained largely anonymous with only a few exceptions. Secondly, it was easy for the viewers to identify the subject of a 'traditional' work in contrast to that of a 'modern' one. The latter is typically equated with the 'abstract' by a wide range of the viewers in the country even now. The 'modern' works are not only dominated by a marked sense of individualism but also by conscious ideological issues such as 'art for art's sake' among others. The point is that there is a dramatic contrast between the 'traditional' styles that preceded the introduction of British education and the subsequent changes in the art practice in the Indian art scene. Moreover, the new developments also overshadowed the 'traditional' arts and made room for the Victorian methods of art education. The art scene witnessed a range of Victorian styles coupled with techniques of realism. The new art forms reveled in exploring perspective, three-dimensional effects and the technique of oil painting. Raja Ravi Varma (1848 - 1906) is emblematic of these changes in the pan Indian art scene. He would engage a model and paint in oil. He came to be known as an 'authentic' representative of the modern art in India.
K. Keshavayya is his regional counterpart in Karnataka for two reasons. Keshavayya was the first to have had the western art education in the



ಸ್ವಚಿತ್ರ, ಬಣ್ಣದ ಛಾಯಾಚಿತ್ರ
ಸಂಗ್ರಹ: ಕೆ.ಎನ್. ರಾಜು, ಬೆಂ.

***Self Portrait***
*Color Photograph*
*Collection: K.N. Raju, B'lore.*

state. Secondly, he has executed an astonishing number of oil paintings. There is no record of either an artist who worked in this new medium or that of an artwork in oil in Karnataka before Keshavayya.

Keshavayya belonged to a family of Chitragars who lived in Turuvekere in Tumkur district. They lived as artists for generations till the collapse of the Vijayanagara kingdom in 1565. The family then broke up and the artists, seeking royal patronage, migrated to several different places such as Javagal, Chitradurga, Sira, Tanjavoor, Alampura. Keshavayya's forefathers belonged to the Telugu speaking 'Raju' sect and settled in Turuvekere. Keshavayya's grandfather was called Chitragara Thippanna. He was famous as one of the best painters under the royal patronage of Mummadi Krishnaraja Wodeyar (1799-1868). Thippanna lived initially at Kille in Mysore and subsequently inside the Palace compound. As a result, the family came to be known as the 'Koteyavaru' (those who belonged to the fort). A number of other members of Tippanna's family gave up painting and took to jewelry in gold and silver.

Diwan Poornayya (1732 - 1812) during the reign of Tippu Sultan (1753 - 1799) was highly impressed by the virtuosity of the Keshavayya's elders and brought them from Turuvekere to Srirangapattana. He arranged for the royal patronage for these artists and assigned them some wall paintings. As a result, a couple of generations of Keshavayya's ancestors enjoyed this patronage. The Chitragars were under the royal patronage. They built a shrine for their family deity Nimishamba in Ganjam and lived close to it. The area came to be known as 'Chitragara Keri' (Chitragara's locality). Keshavayya's forefathers also lived in this Keri. In fact, they directed the wall paintings in Dariya Daulat in Sreerangapattana. After Tippu Sultan's death in 1799 the capital was moved from Sreerangapattana to Mysore and Keshavayya's ancestors also settled in Mysore. They lived in several parts of Mysore, although initially they chose the Hale Agrahara (old Agrahara).




ನಾಲ್ವಡಿ ಕೃಷ್ಣರಾಜ ಒಡೆಯರು, ತೈಲವರ್ಣ.

*Nalvadi Krishnaraja Wodeyar, Oil.*

The Mummadi Krishnaraja Wodeyar (1794 - 1868) came to power after Tippu Sultan. He provided unprecedented support to diverse art forms such as music, literature, painting, and sculpture despite a number of social and political tensions and conflicts. During his reign a distinct 'Mysore Style' came into existence in the southern parts of India much like Rajasthani, Pahadi, Kangra, Rajaput, Mewar and several other 'styles' of painting in the north. He encouraged artists to paint several religious and secular sites. These sites include the Mysore Palace, the Jaganmohan Palace, the Shwetavarahaswamy and Prasanna krishnaswamy Temple at the Fort, the Prasanna Venkataramanaswamy Temple outside the Fort, the Chamarajeshwara Temple at Chamarajanagara, the Mallikarjuna Temple at Mudukutore. Thanks to his generosity and patronage, we also have a number of books on art such as 'Sri Tatvanidhi' and 'Swarachoodamani' and art forms such as 'Ganjifa'. The artists who enjoyed his patronage and have executed a number of wall paintings during his reign are also mentioned in the palace records. These include Javagallu Narasimhiah, Nelamangalada Rangappa, Durgada Krishnappa, Alasingrayya, Veeranna, Nagoonalli Naranappa, Yalliah, Sundarayya, Avadhoota Papanna, Gurikara Tippanna (who was Keshavayya's grandfather), Tanjavuru Kondayya, Venkatasubbu, Chitragara Mestri Lakshmayya, Chennakrishna among others. The painted portraits of each of these artists can be seen in the 'Album' at the Jaganmohan Art Gallery.

Chitragara Tippanna served as the Mokhtesar (Chief Artist) in the Chitrashala Ilakhe in the Palace of Mummadi Krishnaraja Wodeyar, who used to engage artists to copy and illustrate selected scholarly manuscripts. Tippanna has copied and illustrated a number of manuscripts such as Sri Krishnaraja Maharaja Kanteerava's 'Vamshaavatarana Vaibhava Gadya'. He has also illustrated with other artists Mummadi Krishnaraja



ಮೀನಾಕ್ಷಮ್ಮ
ಪ್ಲಾಸ್ಟರ್ ಆಫ್ ಪ್ಯಾರೀಸ್
ಸಂಗ್ರಹ: ಕೆ.ಎನ್.ರಾಜು, ಬೆಂಗಳೂರು.

*Meenakshamma*
*Plaster of Paris*
*Collection: K.N. Raju, B'lore.*



ಕೃಷ್ಣಸ್ವಾಮಿ
ಬಣ್ಣದ ಛಾಯಾಚಿತ್ರ
ಸಂಗ್ರಹ: ಕೆ.ಎನ್. ರಾಜು, ಬೆಂ.

*Krishnaswamy*
*Color Photograph*
*Collection: K.N. Raju, B'lore.*

Wodeyar's 'Sri Tatvanidhi', 'Swara Choodamani', 'Devataanaama Kusumamanjari' among others. Tippanna and Wodeyar were very close friends. In fact, Tippanna married Cheluvamma in the presence of Krishnaraja Wodeyar with his financial support.

Chennakeshavayya was the only son of Tippanna and Alamelamma. He joined work at the palace on September 1, 1868. He began his career with his painting of Ambavilasa Palace. He took charge of Maramath Kacheri as Chitragara Mestri. However, he was later transferred to the account section of the palace. He served in the palace in various capacities as a Record Keeper, Accountant in the Controller's Office, Deputy Accountant and finally Head Accountant. The palace Service Record is full of such details about Keshavayya as well as other artists.

Keshavayya had had his basic education at the 'Raja School' which was established during Mummadi Krishnaraja Wodeyar. He was already a painter, a bright student, and ahead of his classmates in SSLC. His forefathers were well known artists in the palace. Keshavayya used to visit the palace often to study these paintings. He used to closely watch his father's art practice at home. A few people who were aware of Keshavayya's talents encouraged his father Chennakeshavayya to send Keshavayya to an art school. Although Chennakeshavayy a took this suggestion quite seriously, he could not afford it. However, he requested for financial help from the Palace. Keshavayya could pursue art education at Madras due to two historical circumstances. Maharani Kempanajammanni, the queen, was running the state administration during this time as Regent appointed by the British. The British officers and the Regent had implemented a scholarship scheme for advanced study during this time. The scheme encouraged bright students to pursue studies outside the state in Bombay, Madras, Calcutta and even England. The students were

expected to return and assist in the development of the state. Secondly, the old Palace (that exists only in photographs today) suffered extraordinary loss due to a fire accident in which its library, music wing and paintings were burnt to ashes. There was a proposal to begin work on a new Palace. It was against these historical circumstances that the Regent decided to send Keshavayya to the Madras School of Arts next year for higher studies. Keshavayya studied drawing, painting and design for three years in the prevailing European method of art education at the Madras School of Art. He completed his studies in 1901 and returned to Mysore. He also acquainted himself with the basics of Photograph during these years.

On his return from Madras Keshavayya married Meenakshamma in 1901 and the next year the Regent appointed him as an artist at the Maramath Ilakhe in the Palace. The Regent's authority ended shortly and the administration changed hands to the Nalvadi Krishnaraja Wodeyar who continued the reconstruction work at the Palace. He also invited the famous artists Raja Ravi Varma and Raja Raja Varma in 1904 for a second time to decorate the Darbar Hall in the palace with paintings. Moreover he advised Keshavayya to assist the two artists and also to learn their technique and method of painting. Keshavayya followed these instructions quite meticulously and did a number of portraits of the Maharaja in the new technique. He also exhibited his works in a number of national level art shows, became quite popular and won several awards and honors.

**Dasara Panels**

The Maharaja assigned Keshavayya with the supervision of the Dasara panel paintings. Keshavayya not only supervised but also executed four such panels. During this phase of his career, Keshavayya was already retired from the Chamarajendra Vrittishikshana Shaale (1933) and working as the Chief Artist in the Palace.



*ಮೀನಾಕ್ಷಮ್ಮ, ಬಣ್ಣದ ಛಾಯಾಚಿತ್ರ*
*ಸಂಗ್ರಹ: ಕೆ.ಎನ್. ರಾಜು, ಬೆಂ.*

***Meenakshamma***
*Color Photograph*
*Collection: K.N. Raju, B'lore.*

The 'Dasara Panels' are basically oil paintings on canvas stuck on the interior walls of the Mysore Palace on the way towards the Kalyana Mantapa in the palace. There are twenty-six painted panels and each of them is as precious as the famous golden throne and the equally well-known golden Ambari (chariot) in the Palace. The panels celebrate the glory of the world famous Dasara festival in twenty-six paintings. A list of the artists who have worked on the panels reads almost like a who is who of the celebrities of the time. It includes Kalaguru K. Keshavayya, S.N. Swamy, Y. Nagaraju, Y. Subramanya Raju, S. Shankar Raju, S. Nanjunda Swamy and S.R. Iyengar. They began work on the panels in 1934, during the reign of Nalvadi, and completed it in 1945 during the reign of Chamarajendra Wodeyar.

The panels are based on photographs taken during the Dasara festival. As a result, each of the figures in the panels represents specific individuals such as the soldiers, for instance, named Dafedar Mohammed Saab, Sayyad Usmaan, Chikka Huchcha, Gafar Saab. One of these panels, measuring 13'x7'5" in which the Dasara Procession is crossing the Saint Philomena's Church on the Ashoka Road reveals Keshavayya's exceptional skill in realistic depiction. His appropriation of the technique is quite in tune with the prevailing taste of his contemporaries, especially that of Raja Ravi Varma. He has subordinated the possible emotional drama in this public event and shifts attention to a display of public discipline and certain social values. The riders on the horse and the viewers below them reveal noticeable calm. The frozen actions in the panels result no doubt from the photographs from which these panels originate. Such frozen actions are also markers of the aesthetic options exercised by the contemporary artists under the influence of Ravi Varma. Keshavayya's attention to small details often also reveals his own ideological orientations. One of the buildings in the panel proclaims 'God Bless Our Maharaja' and Keshavayya, through deploying this, projects his own inclination for religious secularism.



ಸರ್. ಎಂ. ವಿಶ್ವೇಶ್ವರಯ್ಯ
ಬಣ್ಣದ ಛಾಯಾಚಿತ್ರ
ಸಂಗ್ರಹ: ಕೆ.ಎನ್. ರಾಜು.

***Sir. M. Vishveshwaraiah***
*Color Photograph*
*Collection: K.N. Raju.*

The Fourteenth Panel is about a number of celebrities from diverse fields such as contemporary literature, music, visual artists and social workers. These celebrities can be specifically identified in the panel as Veene Sheshanna, Gana Visharada Bidaram Krishnappa, Dharmaprakasha D. Banumayya, Rajasevasaktha Dr. N. Rangachar. All of these artists took part in the Dasara procession. A number of houses that form part of the backdrop in the panel have survived in Mysore.

The Nineteenth Panel, executed in 1941, depicts the Maharaja on the golden chariot which is placed on the decorated royal elephant that is leaving the palace courtyard. Jayachamaraja Wodeyar and his brother Narasimharaja Wodeyar accompany the Nalvadi Krishnaraja Wodeyar. The panel offers a panoramic view of the surroundings that include the innumerable viewers, the massive gates leading to the palace, the temple gopurams seen in the palace compound, the Chamundi hill, the temple gopuram atop the hill and so on. Keshavayya also indulges in elaborating a number of details such as the golden mask on the elephant, an astonishing range of arms in the hands of the soldiers and the diverse kind of flowers in front of the elephant. The artist also shows his interest in a curious visual trick that appears to be widely indulged by his fellow painters. The panel suggests a three dimensional view that is determined more by the moving path of the viewers than by a static position in front of the panel. The elephant, for instance, continues to stare right into the eyes of the viewer irrespective of the viewers' position. It is as if the elephant is right in front of viewer all the time although he or she is not standing directly opposite the animal.

## Other works

Keshavayya executed a number of works between 1902, the year of his appointment as the palace artist and 1954, the year in which he died. Most of these are portraits of different individuals. A number of these works are seen mostly in Mysore



ಅಚ್ಚಮ್ಮ, ಬಣ್ಣದ ಛಾಯಾಚಿತ್ರ
ಸಂಗ್ರಹ: ಕೆ.ಎನ್. ರಾಜು.

***Achamma***
*Color Photograph*
*Collection: K.N. Raju.*



ಶೀರ್ಷಿಕೆ ತಿಳಿಯದು
ಬಣ್ಣದ ಛಾಯಾಚಿತ್ರ
ಸಂಗ್ರಹ: ಕೆ.ಎನ್. ರಾಜು.

*Title not known*
*Color Photograph*
*Collection: K.N. Raju.*

and Bangalore. There is no account of the number of portraits that he has gifted away to his friends, the kings in the neighboring states and a number of foreigners. A collection of over fifty of his works is scattered in Mysore at several government departments and institutions apart from the palace. These include Jaganmohan Art Gallery, the sales outlet adjacent to the Chamarajendra Technical Institute, the Lalit Mahal Palace, the Senate Hall of the University of Mysore, Maharaja College, Yuvaraja College, Oriental Library, Mysore Bank among others. The institutions that possess his works in Bangalore include the Mythic Society, Vidhana Soudha (banquet hall), the Government Art College and the Theosophical Society. However, we have no record of the portraits supposed to be in the collection of the last two institutions mentioned here. There are five works of Keshavayya at the Residential Museum next to the main palace in Mysore. One of these, executed in 1937, is a portrait of Jayachamarajendra Wodeyar. His mother and sisters accompany him in the picture. The portrait is basically a black and white photograph over which the artist has applied color. Another portrait of Nalvadi Krishnaraja Wodeyar is executed in 1910. It is again a witness to the close attention that Keshavayya pays to certain details about his subject and the relevant surroundings to underscore the general ambiance and power exercised by the individual portrayed. The Nalvadi Krishnaraja Wodeyar wears a red coat, 'Mysore Peta' (headgear), hunter shoes and sits on a white horse. The painting foregrounds certain ideals such as dignity and prestige that Keshavayya attributes to the royal stature of this subject and his vehicle. Keshavayya was very fond of the Regent Maharani Kempananjammanni. Most of his portraits are about her. The Jaganmohan Art Gallery in Mysore has two of his works that deserve attention here for the artist's ability to capture the characteristic traits of an individual and for his interpretative abilities. The portrait of Sir Mirza Ismail, executed in 1929

exemplifies the first of these two strengths of the artist. Another work entitled 'Nireekshe' (waiting) meant to be a copy of Ravi Varma's 'In Contemplation' (1904) reveals Keshavayya's interpretative skills. Sir Mirza's portrait effectively brings out the peaceful traits of the subject. In his copy of Ravi Varma's painting Keshavayya takes liberties with the form and character of the motifs in the original. The original depicts a tree beyond the window in the composition whereas Keshavayya replaces the tree with landscape. The artist also dismisses the original motif of an eight-legged center table along with the flower vase and *panneerdani* that were placed on it. This act intensifies the melancholic mood of the protagonist who is waiting for her beloved.



ಕೃಷ್ಣಸ್ವಾಮಿ ಕುಟುಂಬ
ಬಣ್ಣದ ಛಾಯಾಚಿತ್ರ
ಸಂಗ್ರಹ: ಕೆ.ಎನ್. ರಾಜು.

*Krishnaswamy's family*
*Color Photograph*
*Collection: K.N. Raju.*

**Water color paintings**

Keshavayya's watercolor portraits retain the freshness and purity of the medium. Although he has executed a number of such portraits, which include those of Basavalingappa and Shamarao among others, they cannot be traced. A couple of such portraits are in the collection of K.N. Raju who is Keshavayya's grandson. One of these is about a British and the other appears to be about a musician. The portrait of the British reveals Keshavayya's typical interest in details such as the skin texture and the mental state of the sitter. The other portrait is remarkable for the ways in which Keshavayya pays close attention to the freshness and purity of watercolor.

Keshavayya's portraits in charcoal are equally remarkable for his sensitive handling of the medium. One of these is about his mother Alamelamma. It is currently in the collection of the Karnataka Chitrakala Parishath, Bangalore.

**Color Photographs**

Keshavayya studied Photograph even as a student of fine art in Madras. Ravi Varma was already at work in the palace when Keshavayya



ಸ್ವಚಿತ್ರ, ಬಣ್ಣದ ಛಾಯಾಚಿತ್ರ

ಸಂಗ್ರಹ: ಕೆ.ಎನ್. ರಾಜು.

***Self Portrait***

*Color Photograph*

*Collection: K.N. Raju.*

joined work at the palace in 1902. The public interest had shifted from the traditional styles to the western realism. The public was particularly drawn to realist portraits. There was an enthusiastic demand for portraits drawn by artists, as color photographs were quite expensive. The artists required a lot of time to paint these portraits with a model sitting in front of them. In light of these facts, the artists met the increasing demand for portraits through skillful coloring of enlarged prints of black and white photographs. Keshavayya was quite an expert in coloring of black and white photographs. The Maharaja was also impressed with his skill. Keshavayya has executed a number of portraits by coloring the photographs. Most of these include the portraits of Nalvadi Krishnaraja Wodeyar, his parents and those of the tenth Chamaraja Wodeyar. A number of other such portraits, including those of the Palace staff, Giribhatta Tammayya and his wife, Venkataramanayya, ar`e not available although they are mentioned in the palace records. However, a number of such self portraits, portraits of his wife, mother Alamelamma and other family members are in the collection of Keshavayya's grandson and a number of other portraits are in the collection of the Maharaja's Residential Museum and the Kalyana Mantapa situated in the main palace.

Keshavayya was always in demand for such portraits. In view of this, he used to keep a number of canvases ready with the headgear and the bust devoid of the face in advance of actual portrait painting. The portrait of the Jayachamaraja Wodeyar in the collection of Keshavayya's grandson's collection is a good example for this. The artist has a range of options here depending on his creative energy. The typical studio curtain in the backdrop can be, say dispensed with, to break the visual monotony. However, Keshavayya has typically kept his choice limited to the typical studio setting. This makes one wonder if such portraits are after all mere display of skill devoid of

feeling. Although these works are acceptable for their truthful rendering they do suffer from a lack of artistic interest for the viewer.

A number of Keshavayya's other works are in the collection of the Simla Museum. When Keshavayya joined work as a palace artist, after graduating from the Chamarajendra Technical Institute, the Maharaja Raja Charanjit Singh of Kapurthala was a guest at the Mysore palace. The life size portraits of the royal family painted by Keshavayya in the palace collection impressed him. On his return to Kapurthala he sent photographs of himself and his family to Keshavayya with a request for full length and bust level portraits. Keshavayya has painted these portraits and also those of Gurunanak, Bhagavan Srikrishna, the Nawab of Malerkotla among others. These portraits impressed the Maharaja of Kapurthala again and he invited Keshavayya to Kapurthala to execute more portraits of the royal family. All these works of Keshavayya are currently in the collection of the Simla Museum. Keshavayya had a long relationship, all through his life, with the Maharaja of Kapurthala.

Keshavayya's extant works reveal a number of interesting facts about the contemporary visual culture. His works are rather similar to the visual appeal and techniques of Ravi Varma's works. The center of interest shifts from the subject portrayed to certain incidental aspects of the sitter. Keshavayya's elaborate rendering of a number of external visual facts such as costume, ornaments of his models, exemplify this. Keshavayya as well as Ravi Varma were passionately drawn to the oil painting. In fact, Keshavayya's portraits exemplify a continuation of the oil painting tradition that Ravi Varma initiated in the subcontinent. A number of artists and scholars have already observed the ways in which Ravi Varma often paid more attention to the ornaments on his models than, say, the anatomical accuracy. Keshavayya's portraits suggest a strange source of light that



ಅಚ್ಚಮ್ಮ, ಬಣ್ಣದ ಛಾಯಾಚಿತ್ರ
ಸಂಗ್ರಹ: ಕೆ.ಎನ್. ರಾಜು.

*Achamma,*
*Color Photograph*
*Collection: K.N. Raju.*



brightly illuminates the face of the sitter while the backdrop is rather artificially lit. As a result, some of his works are often technically monotonous. Since most of his portraits are based on photographs the subjects appear to be frozen, too. However, Keshavayya's works are quite different from his contemporaries in his brushwork. He prefers to blend the pigments to arrive at a naturalistic depiction in contrast to the ways in which his contemporaries would leave the brush marks open-ended.

Keshavayya appears to have been a respected art writer as well. However, his writings on art are not available to us today but for a couple of letters he has written in English to the Maharaja of Mysore, the Maharaja of Kapurthala and his friends. One of his letters dated 6th of June, 1925 to the Mysore palace reveals that the Inspector General of the Education Department had commissioned him a book on art. K.Venkatappa, a famous contemporary artist, has recorded in his dairy entry of 18th December 1941 that Venkatappa had recommended Keshavayya's name for a book on the six decades of the State art, to the then Census Commissioner P.H. Krishnarao.

*ಯುವರಾಣಿ ಮತ್ತು ಸೊಸೆಯಂದಿರು*
*ಬಣ್ಣದ ಛಾಯಾಚಿತ್ರ*
*ಸಂಗ್ರಹ: ಮುಖ್ಯ ಅರಮನೆ.*

***Yuvarani and Daughter-in-laws***
*Color Photograph*
*Collection: Main Palace.*

## Keshavayya's students

Most of Keshavayya's students were famous contemporary artists including such celebrities as Y. Nagaraju, Y. Subramanya Raju, N. Hanumiah, Bhaskara Raju, M. Narasimha Murthy, S.Nanjundaswamy, S.M.Sufi, B.H.Ramachandra, Abdul Azeez, Kalappa among others. Keshavayya, as a student at the Chamarajendra Technical Institute, encouraged and supported a number of his colleagues and students in their artistic pursuits. Although trained in western techniques, Keshavayya had no reservations about the traditional schools of art. He often used to conduct traditional art workshops at the Institute. He used to support the economically needy students by recommending them to a scholarship from the then Maharaja. One of the beneficiaries of such scholarship was the famous artist Nanjundaswamy who studied at the J.J. School of Art, Bombay. The acclaimed artist Rumale Chennabasaviah has, in fact, declared 'Keshavayya's mission in his life was to train students,' in his monograph 'Namma Lalita Kalavidaru' (Our Fine Artists).



## Biography

We have very little biographical information about Keshavayya. He is said to have inherited the discipline and rigor of the royal lifestyle. He married Meenakshamma in 1901, the year in which he also took up his employment as the palace artist at the Mysore Palace. She bore him a son and two daughters. Although Keshavayya's elders were palace employees they did not possess land and property. In fact, most of these family members lived together in rented houses after they quit the Palace. Keshavayya could not pursue his academic interest and, in 1902, he took up job as the palace artist precisely due to this adverse economic condition of the family. Despite this job there was not much improvement in the domestic life. His father died at the age of 61 on 17th May 1910. Keshavayya

ಗೋಪಾಲ ಕೃಷ್ಣರಾಜು
ಬಣ್ಣದ ಛಾಯಾಚಿತ್ರ
ಸಂಗ್ರಹ: ಕೆ.ಎನ್.ರಾಜು, ಬೆಂಗಳೂರು.

*Gopala Krishnaraju*
*Color Photograph*
*Collection: K.N. Raju, B'lore.*



ಜಗನ್ಮೋಹನ ಅರಮನೆ
ಮೈಸೂರು

*Jaganmohan Palace*
*Mysore*

was all the more distressed after this and drew the attention of the Maharaja to his difficulties. The Maharaja increased Keshavayya's salary and also allowed Keshavayya to work as an art teacher at the Maharani College, Mysore, for an additional salary of Rs.30/- twice as much as the amount Keshavayya was paid as a palace artist. During this period Keshavayya also taught art teachers at the Normal School, Mysore. However, Keshavayya received another blow with the death of his father's elder sister. Keshavayya had to take care of her daughter, a widow who had no children or relatives to support her.

Keshavayya worked also as an art teacher for a couple of years at the Industrial School. He worked as an Art Instructor at the Chamarajendra Technical Institute, Mysore till he retired in 1933. The Maharaja appointed him as the Chief Artist in the palace. He directed the panel paintings on Dasara in the Kalyana Manatapa. The panel paintings are one of the major attractions of the Mysore Palace. He was later invited by the Maharaja of Kapurthala and during his stay in Kapurthala Keshavayya visited a number of neighboring places.

Keshavayya had a studio of his own in Mysore. Keshavayya was known for his exceptional simplicity for all the fame and attention bestowed on him. He used to work in his studio everyday from 9am to 9pm after his retirement. Evidently, he was active as an artist all through his life. Most of his works were commissioned portraits for his patrons including those for the Maharaja. His last work is a portrait of K.C. Reddy, the first Chief Minister of Karnataka. He passed away on the 29th of August 1954 due to a prolonged heart disease.




ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-560 002
ದೂರವಾಣಿ : 080-22480297

Karnataka Lalithakala Academy
Kannada Bhavana, J.C. Road, Bangalore
Phone : 080-22480297